(c) under part 'M' in Sl. No. 1, in item (iii) in sub-item (e) for the words "machine tools (all kinds)" the words "machine tools such as twist drills, taps, reamers, cutters, dies grinding weels grinding belts, button bits and the like" shall be substituted.''

ತಿದ್ದುಪಡಿಯನ್ನು ಅಂಗೀಕರಿಸಲಾಯಿತು

(ಖಂಡ–೧೩, ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ. ತಿದ್ದುಪಡಿಯಾದ ಮೊದಲನೇ ಖಂಡ ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀ ಸಾಗರ್.— ಮಾನ್ಯ ಅಧ್ಯಕ್ಷರೇ "೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, "೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ತಿದುಪಡಿ ಮಾಡಿರುವಂತೆ ಒಪ್ಪಿಗೆ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1988-89ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ.

ಅಧ್ಯಕ್ಷರು.—ಈಗ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದೆ ಇರ ತಕ್ಕಂಥ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಎರಡು ಮಾತಗಳನ್ನಾಡುವುದಕ್ಕೆ ನಿಂತಿದ್ದೇನೆ. ಕರ್ನಾಟಕದಲ್ಲಿ ಎಲ್ಲಾ ಮುನಿಸಿಪಾಲಿಟಿಗಳು ಕೆಲಸ ಮಾಡುತ್ತಿವೆ. ಆದರೆ ಈ ಮುನಿಸಿಪಾಲಿಟಿಗಳು ಯಾವ್ಯಾವು ಮುನಿಸಿಪಾಲಿಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಆ ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್‌ಗಳು ಒಂದನೇ ಮತ್ತು ಎರಡನೇ ಸ್ಥಾನವನ್ನು ಸರ್ಕಾರದಲ್ಲಿ ನಡೆದುಕೊಂಡಿದೆ. ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿ ಸರ್ಕಾರದವರು ಮಂಗಳೂರು ಕಾರ್ಪೊರೇಷನ್ನಿಗೆ ಮೊದಲು ಸ್ಥಾನವನ್ನು ಕೊಟ್ಟು ಅದಕ್ಕೆ ಸುಮಾರು ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಮೇಲೆ ಮುನಿಸಿಪಾಲಿಟಿಗಳಲ್ಲಿ ಮೊದಲನೇ ಸ್ಥಾನವನ್ನು ಉಡುಪಿ ಮುನಿಸಿಪಾಲಿಟಿಗೆ ಕೊಟ್ಟಿದ್ದಾರೆ. ಆಮೇಲೆ ಎರಡನೇ ಸ್ಥಾನವನ್ನು ಮಡಿಕೇರಿ ಮತ್ತು ಪುತ್ತೂರಿಗೆ ಕೊಟ್ಟಿದ್ದಾರೆ. ಇವೆಲ್ಲ ಕಾಂಗ್ರೆಸ್ ಆಡಳಿತದಲ್ಲಿ ರುವ ಮುನಿಸಿಪಾಲಿಟಿಗಳು ಆದರೆ ಸರ್ಕಾರದ ಪರಿಸ್ಥಿತಿ ಹೇಗೆ ಆಗಿದೆ ಎಂದರೆ ನಿಜಕ್ಕೂ ಅದು ನಾಚಿಕೆ ಗೇಡಿನ ವಿಷಯ. ಏನು ಆಗಿದೆ ಎಂದರೆ ಸರ್ಕಾರದವರು ಈ ಮುನಿಸಿಪಾಲಿಟಿಗಳಿಗೆ ಚೆಕ್ ಅನ್ನು ಕೊಟ್ಟಿದ್ದಾರೆ: ಅಂದರೆ ಮಡಿಕೇರಿ ಮುನಿಸಿಪಾಲಿಟಿಗೆ ಮೂರು ಲಕ್ಷ ರೂಪಾಯಿಗಳಿಗೆ ಚೆಕ್ ಅನ್ನು

ಕೊಟ್ಟಿದ್ದಾರೆ. ಅದು ಪೋಸ್ಟ್ ಡೇಟಡ್ ಚೆಕ್ ಕರ್ನಾಟಕದ ಚರಿತ್ರೆಯಲ್ಲೇ ಪೋಸ್ಟ್ ಡೇಟಡ್ ಚೆಕ್ ಅನ್ನು ಯಾವ ಸರ್ಕಾರವೂ ಕೊಟ್ಟಿಲ್ಲ. ೫-೬-೧೯೮೮ ತಾರೀಕನ್ನು ನಮೂದಿಸಿ ಈ ಚೆಕ್ ಅನ್ನು ಕೊಟ್ಟಿದ್ದಾರೆ.

(ಗೊಂದಲ)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದರಿಂದ ಸರ್ಕಾರದ ಖಜಾನೆಯಲ್ಲಿ ಏನೂ ಇಲ್ಲವೆಂದು ಗೊತ್ತಾಗುತ್ತದೆ. ಈ ತರಹ ಪೋಸ್ಟ್ ಡೇಟಡ್ ಚೆಕ್ ಕೊಡುವುದು, ಪೇಮೆಂಟ್ ಸ್ಟಾಪ್ ಮಾಡುವುದು ಆಗಿರಲಿಲ್ಲ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರೇ, ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್‌ಗಳಲ್ಲಿ ಮುಖ್ಯವಾಗಿ ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಮನೆಗಳನ್ನು ಕೊಡುವುದರ ಬಗ್ಗೆ ವರ್ಷಕ್ಕೆ ಸುಮಾರು ಆರು ನೂರು ಮನೆಗಳನ್ನು ಕೊಡಬೇಕೆಂದು ವರ್ಷಂಪ್ರತಿ ಮಾಡುತ್ತಿದ್ದಾರೆ, ಆದರೆ ವರ್ಷಕ್ಕೆ ಆರುನೂರು ಮನೆಗಳನ್ನು ಕಟ್ಟಿದರೆ ಇನ್ನು ಎಷ್ಟು ವರ್ಷಗಳಲ್ಲಿ ಎಲ್ಲಾ ಜನರಿಗೆ ಮನೆಗಳನ್ನು ಕೊಡತಕ್ಕಂಥ ಸಂದರ್ಭ ಬರುತ್ತದೆ ಎಂದು ಹೇಳುವುದಕ್ಕೆ ಸಾಧ್ಯ ಇಲ್ಲ. ಅಷ್ಟೇ ಅಲ್ಲದೆ ಅದಕ್ಕೆ ಇರತಕ್ಕಂಥ ಸಿಬ್ಬಂದಿ ಸಮೇತ ಬಹಳಷ್ಟು ಕಡಿಮೆಯಾಗಿದೆ. ಬೆಂಗಳೂರಿನಲ್ಲಿ ಎಲ್ಲಾ ಜನರಿಗೆ ಇವರು ಸೈಟು ಕೊಟ್ಟು ಗ್ರಾಮಂಗಳಲ್ಲಿರತಕ್ಕಂಥ ಜನರನ್ನು ಟೌನಿಗೆ ವೆಲ್‌ಕಮ್ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸಬೇಕಾಗುತ್ತದೆ. ಜನರು ಸಿಟಿಗಳಿಗೆ ವಲಸೆ ಬರುವುದನ್ನು ನಿಲ್ಲಿಸಲಿಕ್ಕೆ ಯಾವುದಾದರೂ ಯೋಜನೆಯನ್ನು ಸರ್ಕಾರ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಬೆಂಗಳೂರು ಬೆಳೆಯುತ್ತಿದೆ. ಬೆಂಗಳೂರಿನ ಜನರಿಗೆ ನೀರು ಇಲ್ಲ ಗಾಳಿ ಇಲ್ಲ. ಸರಿಯಾದ ರಸ್ತೆಗಳಿಲ್ಲ. ಬೆಂಗಳೂರಿನಲ್ಲಿ ಬಹಳಷ್ಟು ತೊಂದರೆಗಳಿಗೆ ಜನರು ಈಡಾಗುತ್ತಿದ್ದಾರೆ. ಈ ಸಿಟಿಗಳಿಗೆ ಜನರು ಬರುವುದನ್ನು ತಡೆಯಲಿಕ್ಕೆ ಪ್ರಯತ್ನ ಮತ್ತು ಯೋಜನೆಯನ್ನು ಸರ್ಕಾರದವರು ಮಾಡಬೇಕು: ಇದರ ಬದಲು ಬೇರೆ ತಾಲ್ಲೂಕುಗಳಲ್ಲಿ ಅಥವಾ ಬೇರೆ ಸಣ್ಣ ಸಣ್ಣ ಟೌನ್‌ಗಳಲ್ಲಿ ಇಂಡಸ್ಟ್ರಿಗಳನ್ನು ಮಾಡ ತಕ್ಕಂಥ ವ್ಯವಸ್ಥೆ ಮಾಡಿದರೆ ಖಂಡಿತವಾಗಿಯೂ ಜನರು ಇಲ್ಲಿಗೆ ಕೆಲಸ ಹುಡುಕಿಕೊಂಡು ಬರುವ ಪ್ರಯತ್ನವನ್ನು ನಿಲ್ಲಿಸುತ್ತಾರೆ. ಅಧ್ಯಕ್ಷರೇ, ಹಿಂದೆ ಶ್ರೀ ಗುಂಡೂರಾಯರ ಕಾಲದಲ್ಲಿ ಮಡಿಕೇರಿಗೆ ಕುಡಿಯುವ ನೀರಿನ ಯೋಜನೆಯನ್ನು ಕೈಗೊಂಡಿದ್ದರು. ಆಗ ಶ್ರೀಮಾನ್ ಧರ್ಮಸಿಂಗ್ ಅವರು ಮುನಿಸಿಪಾಲಿಟಿ ಮಂತ್ರಿಯಾಗಿದ್ದರು ಮಡಿಕೇರಿ ಟೌನಿಗೆ ಕಾವೇರಿಯಿಂದ ನೀರು ಒದಗಿಸಲು ೨ ಕೋಟಿ ೪೦ ಲಕ್ಷ ರೂಪಾಯಿಗಳ ಯೋಜನೆಯನ್ನು ಹಾಕಿದ್ದರು. ಆದರೆ ಜನತಾ ಸರ್ಕಾರ ಬಂದ ಮೇಲೆ ಅದನ್ನು ಕೈಬಿಟ್ಟರು. ಅಧಿಕಾರಿಗಳು ಸರಿಯಾದ ಒಂದು ಮಾಹಿತಿಯನ್ನು ಕೊಡದೆ ಈ ಪರಿಸ್ಥಿತಿಯಾಗಿದೆ. ಎಂದು ನಾನು ಹೇಳಿದರೆ ಅದು ತಪ್ಪಾಗುವುದಿಲ್ಲ. ಈ ಯೋಜನೆಯನ್ನು ಸರ್ಕಾರ ದವರು ಕೈಬಿಟ್ಟಿದ್ದಾರೆ. ಅಧಿಕಾರಿಗಳು ಅಲ್ಲಿ ಸುಮಾರು ೨೫ ಸಾವಿರ ಜನಸಂಖ್ಯೆ ಇಲ್ಲ ಎಂದು ಹೇಳಿ ದ್ದಾರೆ ಆದ್ದರಿಂದ ನೀವು ಆ ಯೋಜನೆಯನ್ನು ಕೈ ಬಿಟ್ಟಿದ್ದೀರಿ, ಈ ಯೋಜನೆ ಅಡಿಯಲ್ಲಿ ಕಾವೇರಿ ನದಿ ಹರಿಯುತಕ್ಕಂಥ ಊರುಗಳಾದ ಮಾದಾಪುರ, ಬೇತ್ರಿ ಅತ್ತೂರು, ವೀರಾಜಪೇಟೆ, ನಾಪೋಕಲು, ಮರಗೋಡು ಈ ಪ್ರದೇಶದ ಜನತೆ ಕುಡಿಯುವ ನೀರು ಇಲ್ಲದೆ ಬಹಳ ಕಷ್ಟ ಪಡುತ್ತಿ ದ್ದಾರೆ. ಆದ್ದರಿಂದ ಸರ್ಕಾರದವರು ಪುನಃ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ. ಇನ್ನು ನಾನು ಲೋಕೋಪಯೋಗಿ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತು ಗಳನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಲೋಕೋಪಯೋಗಿ ಇಲಾಖೆಯವರು ಮಾಡತಕ್ಕಂಥ ಕೆಲಸ ಸ್ಟಾಪ್ ಪೇಮೆಂಟ್ಸ್ ಆಗಿರುವುದರಿಂದ ಸಾಧಾರಣವಾಗಿ ಎಲ್ಲಾ ಕಡೆ ನಿಂತು ಹೋಗಿವೆ. ಅಲ್ಲಿ ಕೆಲಸಗಳೇನು ಆಗುತ್ತಿಲ್ಲ. ಈ ಹಿಂದೆ ಮಲೆನಾಡಿಗೆ ಸಂಬಂಧಪಟ್ಟಂತೆ ಒಂದು ಯೋಜನೆಯನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರು. ಆದ್ದರಿಂದ ನಾನು ಈ ಸಾರಿ ಮಲೆನಾಡು ಡೆವಲಪ್ ಮೆಂಟ್ ಕಾರ್ಪೊರೇಷನ್ ಮಾಡಬೇಕೆಂದು ಒತ್ತಾಯಿಸುತ್ತೇನೆ. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆ ಬರುತ್ತದೆ. ಅಲ್ಲಿಗೆ ಬರತಕ್ಕಂಥ ಅನುದಾನ ಸಹ ಬಹಳ ಕಡಿಮೆ ಬಯಲುಸೀಮೆಗೆ ಕೊಡ ತಕ್ಕಂಥ ಧನ ಸಹಾಯಕ್ಕೂ ನಮಗೆ ಕೊಡತಕ್ಕಂಥ ಧನ ಸಹಾಯಕ್ಕೂ ಬಹಳ ವ್ಯತ್ಯಾಸ ಇದೆ. ನಮ್ಮಲ್ಲಿ ಸುಮಾರು ೨೦೦-೩೦೦ ಇಂಚಿ ನಷ್ಟು ಮಳೆಯಾಗುವುದರಿಂದ ರಸ್ತೆಗಳು ಸರಿಯಾಗಿ ಇರುವು ದಿಲ್ಲ, ಅಲ್ಲಿ ರಸ್ತೆ ಕೆಲಸವಾಗಲಿ ಅಥವಾ ಬೇರೆ ಯಾವುದೇ ಕಾಮಗಾರಿ ಕೆಲಸಗಳನ್ನು ಬರೀ ಸಾಲಿಕ್ಕ

ತಿಂಗಳು ಮಾತ್ರ ಮಾಡುವುದಕ್ಕೆ ಆಗುವುದು, ಉಳಿದ ಸಮಯದಲ್ಲಿ ಕಾಮಗಾರಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸಭೆ ಬಿಟ್ಟು ಹೊರಟು ಹೋಗುತ್ತಿದ್ದಾರೆ, ಅವರು ಸಭೆ ಬಿಟ್ಟು ಹೊರಗೆ ಹೋದರೆ ಇಲ್ಲಿ ಕೋರಂ ಇರುವುದಿಲ್ಲ. ದಯಮಾಡಿ ಅವರು ಸಭೆಯಲ್ಲಿ ಇರಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ದಯಮಾಡಿ ತಾವು ಇದ್ದರೆ ಒಳ್ಳೆಯದು.

ಶ್ರೀ ಯು. ಭೂಪತಿ.—ಸ್ವಾಮಿ, ವಸತಿ ಖಾತೆಗೆ ಸಂಬಂಧಪಟ್ಟಂತೆ ಇಲ್ಲಿ ಚರ್ಚೆಯಾಗುತ್ತಿದೆ. ಆದರೆ ಆ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಇಲ್ಲ. ಅವರನ್ನು ದಯಮಾಡಿ ಕರೆಸಬೇಕು. ಮಂತ್ರಿಗಳೇ ಇಲ್ಲ. ನಾವು ಯಾರಿಗೆ ಹೇಳಬೇಕು.

ಉಪಾಧ್ಯಕ್ಷರು.—ಆಯಿತು ಕುಳಿತುಕೊಳ್ಳಿ.

ಶ್ರೀ ಡಿ. ಎ. ಚಿನ್ನಪ್ಪ.—ಮಲೆನಾಡು ಅಭಿವೃದ್ಧಿಗೆ ಹಿಂದೆ ಸರ್ಕಾರದವರು ಒಂದು ವಿಶೇಷ ಯೋಜನೆಯನ್ನು ತಯಾರು ಮಾಡಿದ್ದರು. ಅದನ್ನು ಸರ್ಕಾರದವರು ನೋಡಿ ಮಲೆನಾಡು ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನೊಂದು ಉದಾಹರಣೆಯನ್ನು ಇಲ್ಲಿ ಕೊಡುವುದಾದರೆ, ೧೯೭೨ನೇ ಇಸವಿಯಲ್ಲಿ ಶ್ರೀಮಾನ್ ನೀಲಂ ಸಂಜೀವರೆಡ್ಡಿಯವರು ಅಂದರೆ ಮಾಜಿ ರಾಷ್ಟ್ರಾಧ್ಯಕ್ಷರು ಸುಮಾರು ೧.೪೦ ಕೋಟಿ ರೂಪಾಯಿಗಳ ಒಂದು ಆಸ್ಪತ್ರೆಯನ್ನು ಕಟ್ಟುವುದಕ್ಕೆ ಫೌಂಡೇಷನ್ ಸ್ಟೋನ್ ಹಾಕಿ ಬಂದರು. ಆ ಆಸ್ಪತ್ರೆ ಇವತ್ತಿನವರೆವಿಗೂ ಪೂರ್ತಿಯಾಗಲಿಲ್ಲ. ಆ ಕಟ್ಟಡದ ಕೆಲಸ ಬರೀ ೩೦–೩೨ ಲಕ್ಷ ರೂಪಾಯಿಗಳಲ್ಲಿಯೇ ಉಳಿದಿದೆ. ಮಡಿಕೇರಿಯಲ್ಲಿ ಸುಮಾರು ೪೦೦ ಬೆಡ್ಸ್ ಆಸ್ಪತ್ರೆಯನ್ನು ೭೦೦ ಬೆಡ್ಸ್ ಆಸ್ಪತ್ರೆಗೆ ಕನ್‌ವರ್ಟ್ ಮಾಡುವ ಸಲುವಾಗಿ ಹಿಂದೆ ಇದ್ದಂತಹ ಹಳೆ ಬಿಲ್ಡಿಂಗ್‌ನ್ನು ಒಡೆದು ಹಾಕಿ ಹೊಸದು ಕಟ್ಟಲಿಕ್ಕೆ ಶುರು ಮಾಡಿದರು. ಆದರೆ ಆ ಕಟ್ಟಡ ಇವತ್ತಿನವರೆವಿಗೂ ಪೂರ್ತಿಯಾಗಲಿಲ್ಲ. ನಾನು ಈ ಬಗ್ಗೆ ಸುಮಾರು ಎರಡು ಮೂರು ಸಾರಿ ಪ್ರಶ್ನೆಯನ್ನು ಕೇಳಿದ್ದೇನೆ. ಆದರೂ ಆ ಕೆಲಸ ಇನ್ನೂ ಪೂರ್ತಿಯಾಗಲಿಲ್ಲ. ಕಳೆದ ೧೯೮೬–೮೭ನೇ ಇಸವಿಯಲ್ಲಿ ನಮ್ಮ ಮಾಜಿ ಲೋಕೋಪಯೋಗಿ ಮಂತ್ರಿಗಳು ಕೊಡಗಿನಲ್ಲಿ ಒಂದು ಆಸ್ಪತ್ರೆ ಕಟ್ಟಡ ಕಟ್ಟುವುದಕ್ಕೆ ಫೌಂಡೇಷನ್ ಸ್ಟೋನ್ ಹಾಕಿ ಬಂದರು, ಅದರಲ್ಲಿ ನನ್ನ ಹೆಸರು ಸಹ ಇದೆ, ಆ ಕೆಲಸ ಸಹ ಇದುವರೆವಿಗೂ ಪೂರ್ತಿಯಾಗಲಿಲ್ಲ. ಪ್ರಾರಂಭವನ್ನಾದರೂ ಸಹ ಮಾಡಿಲ್ಲ. ನಮ್ಮ ಮಲೆನಾಡು ಏರಿಯಾವನ್ನು ಸಂಪೂರ್ಣವಾಗಿ ಸರ್ಕಾರದವರು ನೆಗ್‌ಲೆಕ್ಟ್ ಮಾಡಿದ್ದಾರೆಂದು ನಾನು ಹೇಳಬಯಸುತ್ತೇನೆ. ಇನ್ನು ತಮ್ಮ ಪರ್‌ಫಾರ್ಮೆನ್ಸ್ ಬಡ್ಜೆಟ್ ನೋಡಿದರೆ ಯಾವ ಕೆಲಸ ಸಹ ಆಗಿಲ್ಲವೆನ್ನುವುದು ನಮಗೆ ಕಂಡು ಬರುತ್ತದೆ, ಇದರಲ್ಲಿ ಪುಟ ೫ ರಲ್ಲಿ ಏನು ಹೇಳಿದ್ದೀರೆಂದರೆ "Figures for the year 1988–89 are worked out and indicated, as the outlay figures are not available" ಸರಕಾರದವರಿಗೆ ಸರಿಯಾದ ಫಿಗರ್ಸೇ ಸಿಗದ ಮೇಲೆ ಇವರು ಯಾವ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ಆಮೇಲೆ ಅಚೀವ್‌ಮೆಂಟ್‌ನಲ್ಲಿ ಸುಮಾರು ೧೯೫೬ ರಿಂದ ೧೯೮೨ರವರೆಗೆ ಆದಂಥ ಅಚೀವ್‌ಮೆಂಟ್ಸ್ ಹೇಳಿದ್ದಾರೆ. ೧೯೮೫–೮೬, ೧೯೮೬–೮೭ರಲ್ಲಿ ಇವರದ್ದು ಅಚೀವ್‌ಮೆಂಟೇ ಇಲ್ಲ. ೧೯೮೪ರಲ್ಲಿ ೫೪, ೮೫ ರಲ್ಲಿ ೫೯, ೮೬ ರಲ್ಲಿ ೫೯ ಮತ್ತು ೮೭ ರಲ್ಲಿ ಸಹ ೫೯ ಚದರ ಕಿ. ಲೋ. ಮೀಟರ್ ಅಚೀವ್‌ಮೆಂಟ್ ಇದೆ. ಇದರಲ್ಲಿ ಇಂಪ್ರೂವ್‌ಮೆಂಟೇ ಇಲ್ಲ. ಏನು ಅಚೀವ್‌ಮೆಂಟ್ ಇತ್ತು. ಅದರ ಪರ್ಸೆಂಟೇಜ್ ಅಷ್ಟಕ್ಕೆ ನಿಂತು ಹೋಗಿದೆ. ಈ ಪಿ.ಡಬ್ಲ್ಯು.ಡಿ. ಯಲ್ಲಿ ಏನೂ ಕೆಲಸ ಆಗುತ್ತಿಲ್ಲ. ಇದಕ್ಕೆ ಕಾರಣವನ್ನು ಅವರು ಹೇಳಬೇಕಾಗುತ್ತದೆ. ತದನಂತರ Formation and Improvement to Roads – the figures are not available. ಎಷ್ಟು ರೋಡ್ಸ್ ಆಗಿದೆ ಎಂಬುದರ ಬಗ್ಗೆ ಯಾವ ಫಿಗರ್ಸ್ ಕೊಟ್ಟಿಲ್ಲ, ಕೊಡುವುದಕ್ಕೆ ಸಾಧ್ಯವೂ ಇಲ್ಲ. Brief Particulars under the Rural Communications Programmes. ಇದರಲ್ಲಿ ಏನಾಗಿದೆ ಎಂದರೆ ಬಹಳಷ್ಟು ಸ್ವಾರಸ್ಯವಾಗಿ ಹೇಳಿದ್ದಾರೆ. ಕರ್ನಾಟಕದಲ್ಲಿ Since 98% of the total area of the State consists of Rural parts ರೂರಲ್ ಪಾರ್ಟ್ಸ್‌ಗೆ ಖರ್ಚು ಮಾಡತಕ್ಕಂಥ ಹಣ ಬಹಳಷ್ಟು ನೆಗ್ಲಿಜಬಲ್ ಆಗಿದೆ. The State Government took up the work of construction and improvement of

rural roads since 1959–60 with the object of providing important villages with a net work of fair weather roads. ಎಂದು ಹೇಳಿದ್ದಾರೆ. ತದನಂತರ As at the end of 31st March 1985, 10,896 Kms. of new formation under the first phase has been completed and 7,832 Kms. has been improved. ಆದರೆ ಖರ್ಚು ಮಾಡಿರತಕ್ಕಂಥ ಹಣ ೩.೨ ಕ್ರೋರ್ಸ್. ಆ ಮೇಲೆ The expenditure incurred during 1985–86 and 1986–87 is only 26.02 lakhs. ಅಂದರೆ ಎರಡು ವರ್ಷದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಬ್ರಿಡ್ಜಸ್‌ಗಳಿಗೆ ಇವರು ಮಾಡಿರತಕ್ಕಂಥ ಖರ್ಚು ೨೬.೦೨ ಲಕ್ಷ ಮಾತ್ರ, ಇದು ಸಾಕೇ ? ೯೮ ಪರ್ಸೆಂಟ್ ರೋಡ್ಸ್ ಇರತಕ್ಕಂಥ ಗ್ರಾಮಾಂತರ ಪ್ರದೇಶಗಳಿಗೆ ಇವರು ಮಾಡಿರತಕ್ಕಂಥ ಖರ್ಚು ಕೇವಲ ೨೬.೦೨ ಲಕ್ಷ ಮಾತ್ರ, ಇದು ಬಹಳ ನಾಚಿಕೆಗೇಡು ಎಂದು ಹೇಳಿದರೆ ತಪ್ಪಾಗಲಾರದು. ಅನಂತರ ಅಧ್ಯಕ್ಷರೇ, as regards Accessibility of villages, ಇದರಲ್ಲಿ ಬಹಳಷ್ಟು ಸ್ವಾರಸ್ಯವಾಗಿದೆ. ಇದರಲ್ಲಿ As at the end of 31-3-1987, the total number of villages conected by all weather roads is 10,992 out of the total number of 27,028 inhabited villages in the State and account for 41%..."

ಅಂದರೆ ೪೧ ಪರ್ಸೆಂಟ್ ಮಾತ್ರ ಇವರು ಖರ್ಚು ಮಾಡಿದ್ದಾರೆ. ಈ ತನಕ ಅಂದರೆ ೧೯೮೭ರ ವರೆಗೆ ಮಾಡಿರತಕ್ಕದ್ದು ಇಷ್ಟು. ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಇವರ ಅಚೀವ್‌ಮೆಂಟ್ ಏನೆಂದರೆ The scheme was started during 1974–75. So far under this programme 777 villages have been provided with all weather approach road and the expenditure incurred since inception of the scheme is Rs 32.69 crores During VII Five years Plan, an amount of Rs. 2800 lakhs is earmarked for this scheme and 600 villages are likely to be connected by all weather roads during the VII Plan period. During 1987–88, the anticipated expenditure is Rs. 4.02 crores and about 117 villages are likely to be connected by all weather roads. ಹಾಗಿದ್ದರೆ ಇವರು ಎಷ್ಟರಮಟ್ಟಿಗೆ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ? ಇದರಲ್ಲಿ ಏನೂ ಆಗಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಇವರು ೧೧೭ ಗ್ರಾಮಗಳನ್ನು ಮಾತ್ರ ಕವರ್ ಮಾಡಿದ್ದಾರೆ. ಅಲ್ಲಿಂದ ಬಂದರೆ. ಹಳ್ಳಿಹೆದ್ದಾರಿ ಎಂಬ ಒಂದು ಪ್ರೋಗ್ರಾಂ ಇದೆ. ಹಳ್ಳಿ ಹೆದ್ದಾರಿ ಪ್ರೋಗ್ರಾಂಗೆ ಇವರು ಇಟ್ಟುಕೊಂಡಿರತಕ್ಕ ಹಣ ೧೫೦ ಲಕ್ಷ ರೂಪಾಯಿಗಳು ಮಾತ್ರ. ಅದು ಕೇವಲ ೪೭ ಗ್ರಾಮಗಳಿಗೆ ಈ ಯೋಜನೆ ಹಾಕಿದ್ದಾರೆ.

೨-೩೦ ಪಿ.ಎಂ.

ತದನಂತರ ಖರ್ಚು ಆಗಿರತಕ್ಕಂಥಾದ್ದು ೧೯೮೬-೮೭ರಲ್ಲಿ ಬರೀ ೭೫ ಲಕ್ಷ ರೂಪಾಯಿಗಳು ಮಾತ್ರ Physical target is only 15 villages. ಗ್ರಾಮಗಳ ಮೇಲೆ ಸರ್ಕಾರ ಎಷ್ಟರ ಮಟ್ಟಿಗೆ ನಿಗಾ ತೆಗೆದುಕೊಂಡಿದೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ತದನಂತರ ಮಾನ್ಯ ಅಧ್ಯಕ್ಷರೇ ಆರ್.ಎಲ್.ಇ.ಜಿ.ಪಿ. ಪ್ರೋಗ್ರಾಂನಲ್ಲಿ ೧೯೮೩-೮೪ರಲ್ಲಿ ಇಟ್ಟಿರತಕ್ಕಂಥ ಹಣ ೪೭೩ ಲಕ್ಷ ರೂಪಾಯಿಗಳು. ಆದರೆ ಖರ್ಚು ಆಗಿರತಕ್ಕಂಥಾದ್ದು ೪೦.೨೭ ಲಕ್ಷ ರೂಪಾಯಿಗಳು ಮಾತ್ರ. ಈ ಪ್ರೋಗ್ರಾಂನಲ್ಲಿ ಸುಮಾರು ೪೭೩ ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೂ ಸಹ ಖರ್ಚು ಮಾಡಿರತಕ್ಕಂಥ ಹಣ ಕೇವಲ ೪೦ ಲಕ್ಷ ರೂಪಾಯಿಗಳು ಮಾತ್ರ. ಬಾಕಿ ಹಣವನ್ನು ಖರ್ಚು ಮಾಡಿಲ್ಲ. ಇದೇ ರೀತಿಯಾಗಿ ೧೯೮೪-೮೫ನೇ ಇಸವಿಯಲ್ಲಿ ೯೪೬ ಲಕ್ಷ ರೂಪಾಯಿಗಳ ಹಣ ಇಟ್ಟಿದ್ದರೆ ಖರ್ಚು ಆಗಿರತಕ್ಕಂಥ ಹಣ ಸುಮಾರು ೮೮೨ ಲಕ್ಷ ರೂಪಾಯಿಗಳು ಮಾತ್ರ. ಆ ಮೇಲೆ ೧೯೮೫-೮೬ನೇ ಸಾಲಿನಲ್ಲಿ ಸುಮಾರು ೮೨೬ ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೆ ಖರ್ಚು ಮಾಡಿರತಕ್ಕಂಥಾದ್ದು ಕೇವಲ ೭೦೨ ಲಕ್ಷ ರೂಪಾಯಿಗಳು ಮಾತ್ರ. ಹಾಗೆಯೇ ೧೯೮೭-೮೮ನೇ ಸಾಲಿನಲ್ಲಿ ದಿನಾಂಕ ೮-೨-೮೮ಕ್ಕೆ ೬೪.೪ ಲಕ್ಷ ರೂಪಾಯಿಗಳು

ಮಾತ್ರ, ಈ ಸಾಲಿನಲ್ಲಿ ಸುಮಾರು ೩೫೦ ಲಕ್ಷ ರೂಪಾಯಿಗಳು ಇಟ್ಟಿದ್ದಾರೆ. ಈ ಲೋಕೋಪಯೋಗಿ ಇಲಾಖೆಯಿಂದ ಯಾವ ಗ್ರಾಮಗಳಲ್ಲಿಯೂ ಸಹ ಕೆಲಸಕಾರ್ಯಗಳು ಆಗಿಲ್ಲ. ಕೊಟ್ಟಿರತಕ್ಕಂಥ ಹಣವನ್ನು ಉಳಿಸಿಕೊಂಡು ಬೇರೆ ಕೆಲಸಕಾರ್ಯಗಳಿಗೆ ಹಣವನ್ನು ವರ್ಗಾವಣೆ ಮಾಡಿಕೊಂಡಿದ್ದಾರೆಂದು ನಾವು ಹೇಳಬೇಕಾಗುತ್ತದೆ. ಆಮೇಲೆ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂನಲ್ಲಿ ಒಂದು ತಮಾಷೆ ಇದೆ. ಹರಿಜನ ಮತ್ತು ಗಿರಿಜನರಿಗೆ ಈ ಪ್ರೋಗ್ರಾಂನಲ್ಲಿ ಹಣವನ್ನು ಕೊಟ್ಟಿದ್ದಾರೆ. ೧೯೮೩-೮೪ನೇ ಇಸವಿಯಲ್ಲಿ ಈ ಯೋಜನೆಯಡಿಯಲ್ಲಿ ಖರ್ಚಾಗಿರತಕ್ಕಂಥ ಹಣ ಕೇವಲ ಎರಡು ಕೋಟಿ ರೂಪಾಯಿಗಳು ಮಾತ್ರ, ಅದು ಇಡೀ ರಾಜ್ಯದಲ್ಲಿ. ಇಡೀ ರಾಜ್ಯದಲ್ಲಿರತಕ್ಕಂಥ ಹರಿಜನ ಮತ್ತು ಗಿರಿಜನ ವಾಡಿಗಳಿಗೆ ಖರ್ಚು ಮಾಡಿರತಕ್ಕಂಥ ಹಣ ಕೇವಲ ಎರಡು ಕೋಟಿ ರೂಪಾಯಿಗಳು. ಆಮೇಲೆ ೧೯೮೪-೮೫ನೇ ಸಾಲಿನಲ್ಲಿ ಅಷ್ಟೇ ಹೆಚ್ಚು ಖರ್ಚೇನೂ ಮಾಡಿಲ್ಲ. ಬರೀ ಖರ್ಚು ಮಾಡಿರುವುದು ೨.೧೫ ಲಕ್ಷ ರೂಪಾಯಿಗಳು ಮಾತ್ರ. ಇಲ್ಲಿ ೧೫ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಈ ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಂನಡಿಯಲ್ಲಿ ಒಟ್ಟು ಆಗಿರತಕ್ಕಂಥ ರಸ್ತೆಗಳ ಕೆಲಸ ಸುಮಾರು ೧೦೦ ಕಿಲೋಮೀಟರ್ ಒಂದು ಕಡೆ, ೧೯೦ ಕಿಲೋಮೀಟರ್‌ಗಳು ಇನ್ನೊಂದು ಕಡೆ. ಇಷ್ಟು ಮಾತ್ರ ಅಲ್ಲಿ ಆಗಿರತಕ್ಕಂಥ ಕೆಲಸ. ಮುಂದೆ ನೋಡಿ ಅಧ್ಯಕ್ಷರೇ ಸೇತುಬಂಧನ ಈ ಒಂದು ಸ್ಪೆಷಲ್ ಪ್ರೋಗ್ರಾಂನಲ್ಲಿ ಒಟ್ಟು ೧೯೮೭-೮೮ನೇ ಸಾಲಿನಲ್ಲಿ ಸುಮಾರು ೨೧೫ ಲಕ್ಷ ರೂಪಾಯಿಗಳಲ್ಲಿ ಬರೀ ೧೦೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಅರ್ಧಕರ್ಧ ಹಣ ಖರ್ಚು ಮಾಡಿಲ್ಲ. ಇದರಲ್ಲಿ ಯಾವುದೂ ಕೆಲಸಕಾರ್ಯಗಳು ಆಗಿಲ್ಲ. ಇದರಿಂದ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ತಾವೇ ಯೋಚನೆ ಮಾಡಬೇಕು. ಮನುಷ್ಯರು ರಸ್ತೆಗಳಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಮನುಷ್ಯರು ಹೋಗಲಿ ಪ್ರಾಣಿಗಳು ಸಹ ರಸ್ತೆಗಳಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಇನ್ನು ಈ ರಸ್ತೆಗಳಲ್ಲಿ ವಾಹನಗಳು ಓಡಾಡುವುದಕ್ಕೆ ಸಾಧ್ಯವಿಲ್ಲ. ಬಿಲ್ಡಿಂಗ್ಸ್ ಕೆಲಸವಂತೂ ಸಂಪೂರ್ಣವಾಗಿ ನಿಂತು ಹೋಗಿದೆ. ಬ್ರಿಡ್ಜ್ ಕೆಲಸ ನಿಂತು ಹೋಗಿದೆ. ಹೈವೇನಲ್ಲಿರತಕ್ಕಂಥ ಬ್ರಿಡ್ಜ್‌ಗಳ ಕೆಲಸಕಾರ್ಯಗಳು ಸಹ ನಿಂತು ಹೋಗಿವೆ. ಕೊಡಗಿನ ರಸ್ತೆಯಲ್ಲಿ ಒಂದು ಬ್ರಿಡ್ಜ್ ಇದೆ ಕೈನಾಡಿನಲ್ಲಿ ಅದು ಸುಮಾರು ೧೫೦ ವರ್ಷಗಳ ಹಳೆಯ ಬ್ರಿಡ್ಜ್. ಆ ಬ್ರಿಡ್ಜ್ ಕೆಲಸವನ್ನು ತೆಗೆದುಕೊಳ್ಳಿ ಎಂದು ನಾನು ಎಷ್ಟೋ ಸಾರಿ ಹೇಳಿದ್ದೇನೆ, ಆದರೆ ಇದುವರೆವಿಗೂ ಆ ಕೆಲಸ ಆಗಿಲ್ಲ, ಆ ಬ್ರಿಡ್ಜ್ ಸ್ಟೇಟ್ ಹೈವೇನಲ್ಲಿದೆ. ಅದೂ ಸಹ ಆಗಿಲ್ಲ, ರಾಜ್ಯದಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳು ಏನೇನು ಆಗಿಲ್ಲವೆಂದು ನಾನು ಹೇಳಬಯಸುತ್ತೇನೆ. ಆಮೇಲೆ ರಸ್ತೆಗಳಿಗೆ ಅಸ್ಫಾಲ್ಟಿಂಗ್ ಕೆಲಸಗಳು ಸಹ ಆಗಿಲ್ಲ. ೧೯೮೭-೮೮ನೇ ಇಸವಿಯಲ್ಲಿ ಒಟ್ಟು ವಿಲೇಜಸ್ ಸೇರಿ ಮಾಡಿರುವಂತಾದ್ದು ೪೩ ೭೩ ಲಕ್ಷ ರೂಪಾಯಿಗಳಷ್ಟು ಮಾತ್ರ ಸರ್ಕಾರದವರು ಎಲ್ಲಾ ಕಾರ್ಯಕ್ರಮಗಳನ್ನು ನೆಗ್ಲೆಕ್ಟ್ ಮಾಡಿದೆ. ದೊಡ್ಡ ದೊಡ್ಡ ಪಟ್ಟಣಗಳನ್ನು ಬೆಳೆಸುತ್ತಿದ್ದಾರೆ, ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ ಕೊಡಿ, ಶೇಕಡ ನೂರಕ್ಕೆ ೯೮ರಷ್ಟು ರಸ್ತೆಗಳ ಗ್ರಾಮಗಳಲ್ಲಿ ಇರುವಾಗ ಆ ಬಗ್ಗೆ ತಾವು ಗಮನ ಕೊಡದಿದ್ದರೆ ಯಾವ ರೀತಿಯಲ್ಲಿ ಗ್ರಾಮಾಂತರ ಪ್ರದೇಶದ ಬಡ ಜನರಿಗೆ, ಹರಿಜನ ಮತ್ತು ಗಿರಿಜನರಿಗೆ, ದುರ್ಬಲ ವರ್ಗದವರಿಗೆ ದಿನದಲಿತರಿಗೆ ಅನುಕೂಲ ಮಾಡಿ ಅವರನ್ನು ಉದ್ಧಾರ ಮಾಡುತ್ತೀರಿ? ಅವರು ಯಾವ ರೀತಿ ಉದ್ಧಾರವಾಗುತ್ತಾರೆ? ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಆಸ್ಪತ್ರೆಗಳು ಅವಶ್ಯಕತೆ ಇದೆ. ಆಮೇಲೆ ಸ್ಟೇಟ್ ಸ್ಕೀಮ್ಸ್ ಬಿ ನಲ್ಲಿ ನೋಡಿ. Supporting Scheme for Sector ಇಲ್ಲಿ ಏನಾಗಿದೆ ಖರ್ಚು ದಿನೇ ದಿನೇ ಕಡಿಮೆ ಮಾಡುತ್ತಾ ಬಂದಿದ್ದಾರೆ, ಇವರು ಕೆಲವು ಕಡೆ ಯಾವ ಖರ್ಚನ್ನೂ ಮಾಡಿಲ್ಲ. ಯಾವ ಇಂಪ್ರೂವ್‌ಮೆಂಟ್‌ನ್ನೂ ಮಾಡಿಲ್ಲ. ಆಮೇಲೆ, ಮೈಸೂರಿನಿಂದ ದಕ್ಷಿಣ ಕನ್ನಡವಾದ ಮಂಗಳೂರಿಗೆ ಹೋಗತಕ್ಕಂಥ ರಸ್ತೆಯನ್ನು ಸರ್ಕಾರದವರು ನ್ಯಾಷನಲ್ ಹೈವೇಯಾಗಿ ಮಾರ್ಪಾಡು ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ನ್ಯಾಷನಲ್ ಹೈವೇ ಮಾಡುವುದಕ್ಕೆ ಈಗಾಗಲೇ ಸರ್ವೇಯನ್ನೂ ಮಾಡಲಾಗಿದೆ. ಆದ್ದರಿಂದ, ಈ ರಸ್ತೆಯನ್ನು ನ್ಯಾಷನಲ್ ಹೈವೇ ಆಗಿ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರದವರು ಒತ್ತಾಯ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, ಮತ್ತು ಕೊಡಗಿನ ಕಾವೇರಿ ಕರ್ನಾಟಕದ ಜನತೆಗೆ ಕುಡಿಯುವ ನೀರು ಹಾಗು ಅನ್ನವನ್ನು ಕೊಡುವಂಥ ನದಿಯಾಗಿದೆ. ಈ ತಲಕಾವೇರಿ ಎಲ್ಲಿ ಇದೆ. ಅಲ್ಲಿಗೆ ಹೋಗತಕ್ಕಂಥ ಮೂರು ಬ್ರಿಡ್ಜ್‌ಗಳು ಸರಿಯಾದ ರೀತಿಯಲ್ಲಿ ಇಲ್ಲ. ಅಲ್ಲದೆ ಈ ರಸ್ತೆಗಳಲ್ಲಿರುವ ೩ ಬ್ರಿಡ್ಜ್‌ಗಳು ಬಹಳಷ್ಟು ಚಿಕ್ಕದಾಗಿವೆ. ಈ ಬ್ರಿಡ್ಜ್‌ಗಳನ್ನು ದೊಡ್ಡದು ಮಾಡಬೇಕು. ಅಷ್ಟೇ ಅಲ್ಲ ಈ ರಸ್ತೆಗಳು ಮೇಜರ್ ಡಿಸ್ಟ್ರಿಕ್ಟ್

ಸ್ಕೀಮ್‌ನಲ್ಲಿ ಇವೆ. ಈ ರಸ್ತೆಗಳನ್ನು ಸ್ಟೇಟ್ ಹೈವೇ ಮಾಡಬೇಕೆಂದು ಒತ್ತಾಯಿಸುತ್ತೇನೆ. ಏಕೆಂದರೆ ಈ ರಸ್ತೆಗಳಲ್ಲಿ ಲೈನ್ ಬಸ್ಸುಗಳಲ್ಲದೆ ದಿನಕ್ಕೆ ೧೦-೧೫ ಯಾತ್ರಿಕರ ಬಸ್‌ಗಳು ಹೋಗುತ್ತಿರುತ್ತವೆ. ದೊಡ್ಡ ದೊಡ್ಡ ಬಸ್‌ಗಳು ರಿವರ್ಸ್ ತೆಗೆದುಕೊಂಡು ಹೋಗತಕ್ಕಂಥ ವ್ಯವಸ್ಥೆಯಾಗಿದೆ. ಆದ್ದರಿಂದ ಬ್ರಿಡ್ಜ್‌ಗಳನ್ನು ದೊಡ್ಡದು ಮಾಡಿ ಈ ರಸ್ತೆಗಳನ್ನು ಸ್ಟೇಟ್ ಹೈವೇ ಆಗಿ ಕನ್‌ವರ್ಟ್ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಅಧ್ಯಕ್ಷರೇ, ನಾನು ಇಷ್ಟು ಹೇಳಿ ಎಲೆಕ್ಟ್ರಿಸಿಟಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕೊಡಗಿನಲ್ಲಿ ೮ ಮಿನಿ ಹೈಡ್ರೋ ಪ್ರಾಜೆಕ್ಟ್‌ಗಳು ಇವೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಇವತ್ತು ಎಲೆಕ್ಟ್ರಿಸಿಟಿ ಬಗ್ಗೆ ಚರ್ಚೆ ಇಲ್ಲ. ಅದನ್ನು ನಾಳೆ ತಾವು ಮಾತನಾಡಬಹುದು.

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ, ಇಷ್ಟು ಹೇಳಿ ಸರ್ಕಾರದವರು ಮಲೆನಾಡಿನ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ಮಲೆನಾಡ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಕೆ.ಜೆ. ಜಾರ್ಜ್ ಅವರೇ ಮಾತನಾಡಿ.

† ಶ್ರೀ ಕೆ. ಜೆ. ಜಾರ್ಜ್ (ಭಾರತೀನಗರ).— ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಹಲವಾರು ಬಾರಿ ಬೇಡಿಕೆಗಳ ಮೇಲೆ ನಾವು ಮಾತನಾಡಿದ್ದೇವೆ. ಆದರೆ, ಅದು ಏನೋ ನನಗೆ ಗೊತ್ತಾಗುವುದಿಲ್ಲ. ಬೇಡಿಕೆಯ ಮೇಲೆ ಚರ್ಚೆ ಮಾಡುವುದನ್ನು ನಾವು ಮಾಡುತ್ತೇವೆ. ಬೇಡಿಕೆ ಮೇಲೆ ಮಾತನಾಡುವಾಗ ಶಾಸಕರುಗಳು ಕೊಡುವ ಸಲಹೆಗಳನ್ನು ಸರ್ಕಾರ ಗಮನಕ್ಕೇ ತೆಗೆದುಕೊಳ್ಳುವುದಿಲ್ಲವೆಂದು ನನಗನಿಸುತ್ತಿದೆ. ಬಂಡೆ ಕಲ್ಲಿನ ಮೇಲೆ ನೀರು ಹಾಕಿದರೆ ಏನಾಗುತ್ತದೆಯೋ ಅದೇ ರೀತಿ ನಮ್ಮ ಸಲಹೆಗಳೂ ಕೂಡ ಆಗುತ್ತಿವೆ. ಆದ್ದರಿಂದ, ಸದಸ್ಯರುಗಳೂ ಸಹ ಸಾಕಷ್ಟು ಆಸಕ್ತಿಯಿಂದ ಕಲಾಪದಲ್ಲಿ ಭಾಗವಹಿಸುತ್ತಿಲ್ಲ. ಇವರು ಬಂದ ೫ ವರ್ಷಗಳಿಂದಲೂ ಎಲ್ಲಾ ಪ್ರಶ್ನೆಗಳಿಗೂ ೩ ತರಹ ಉತ್ತರಗಳನ್ನು ಮಾತ್ರ ಕೊಡುತ್ತಾ ಬಂದಿದ್ದಾರೆ. ಒಂದನೆಯದು, ಯಾವುದಾದರೂ ಸಮಸ್ಯೆಯನ್ನು ಹೇಳಿದರೆ, ಯು.ಪಿ. ಸರ್ಕಾರ ನೋಡಿ ಬಿಹಾರ ಸರ್ಕಾರ ನೋಡಿ ಎಂದು ಹೇಳುತ್ತಾರೆ. ಎರಡನೆಯ ಉತ್ತರ ಎಂದರೆ, ರಾಜ್ಯದ ಅಭಿವೃದ್ಧಿ ಕೆಲಸದ ಬಗ್ಗೆ ಶಾಸಕರು ಮಾತನಾಡಿದರೆ, ೫ ವರ್ಷಗಳಿಂದ ರಾಜ್ಯದಲ್ಲಿ ಬರಗಾಲ ಇದೆ ಆದ್ದರಿಂದ ಆರ್ಥಿಕ ಪರಿಸ್ಥಿತಿ ಬಹಳ ಕಷ್ಟವಾಗಿದೆ ಎಂದು ಹೇಳುತ್ತಾರೆ. ಮೂರನೇ ಉತ್ತರ ಎಂದರೆ, ಎಲ್ಲಾ ಪ್ರಶ್ನೆಗಳಿಗೂ ಪರಿಶೀಲಿಸಲಾಗುತ್ತದೆಂದು ಹೇಳುತ್ತಾರೆ. ಈ ರೀತಿ ಉತ್ತರಗಳನ್ನು ಕೊಟ್ಟುಕೊಂಡು ಇವರು ೫ ವರ್ಷಗಳಿಂದ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದಾರೆ. ಆದ್ದರಿಂದ, ಈ ಚರ್ಚೆಯಲ್ಲಿ ಏನು ಹೇಳಿದರೂ ಪ್ರಯೋಜನವಿಲ್ಲ. ಆದರೂ ಶಾಸಕನಾಗಿ ನನ್ನ ಕರ್ತವ್ಯವನ್ನು ಮಾಡಲಿಕ್ಕೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿಯಾಗಲೀ, ನಮ್ಮ ದೇಶದಲ್ಲಿಯಾಗಲೀ ಪರಿಶಿಷ್ಟ ಜಾತಿ ಮತ್ತು ವರ್ಗದವರು ಸಾವಿರಾರು ವರ್ಷಗಳಿಂದಲೂ ಶೋಷಣೆಗೆ ಒಳಗಾಗಿದ್ದಾರೆ. ಈಗಲಾದರೂ ಈ ಒಂದು ಪ್ರಜಾಪ್ರಭುತ್ವದಲ್ಲಿ ಅವರಿಗೆ ನ್ಯಾಯ ಸಿಕ್ಕಬೇಕು. ಆ ವಿಚಾರದಲ್ಲಿ ಪ್ರತಿಯೊಂದು ಪಕ್ಷದವರೂ, ಆ ಕಡೆಯವರು ಇರಬಹುದು, ಈ ಕಡೆಯವರು ಇರಬಹುದು. ಮಾತನಾಡುತ್ತಲೇ ಇರುತ್ತೇವೆ. ತಮಗೆ ಗೊತ್ತಿರುವ ಹಾಗೆ ಇದರ ಬಗ್ಗೆ ಏನಾಗುತ್ತಿದೆ ? ಇವತ್ತು ಶೇಕಡಾ ೧೮ ಪರ್‌ಸೆಂಟ್‌ನಷ್ಟು ಹಣವನ್ನು ಇತರ ಏಳಿಗೆಗಾಗಿ ಉಪಯೋಗಿಸಬೇಕೆಂದು ಈಗಾಗಲೇ ಮಾಡಿದ ಸರ್ಕಾರದ ಕಾರ್ಯಕ್ರಮ ಇದೆ. ಇದರ ಬಗ್ಗೆ ಮುಖ್ಯಮಂತ್ರಿಯವರೂ ಸಹ ಹಲವಾರು ಬಾರಿ ಹೇಳಿದ್ದಾರೆ. ನಿಗದಿ ಪಡಿಸಿದ ಹಣದಲ್ಲಿ ೧೮ ಪರ್ಸೆಂಟ್‌ನಷ್ಟು ಹಣವನ್ನು ಕಾರ್ಪೊರೇಷನ್‌ನವರು ಪರಿಶಿಷ್ಟ ಜಾತಿ ಮತ್ತು ವರ್ಗಗಳವರ ಏಳಿಗೆಗಾಗಿ ಖರ್ಚು ಮಾಡಬೇಕೆಂದೂ ಮತ್ತು ಆ ಹಣವನ್ನು ಅವರಿಗಾಗಿಯೇ ಉಪಯೋಗಿಸಬೇಕೆಂದು ಈಗಾಗಲೇ ಒಂದು ಕಾರ್ಯಕ್ರಮವು ಇದೆ. ಆ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಹಲವಾರು ಬಾರಿ ಹೇಳಿದ್ದಾರೆ. ಈ ಜನರ ಏಳಿಗೆಗಾಗಿ ೧೫ ಪರ್ಸೆಂಟ್‌ನಷ್ಟು ಹಣವನ್ನು ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ ನಮ್ಮ ನಗರಾಭಿವೃದ್ಧಿ ಮಂತ್ರಿಯವರೂ ಕೂಡ ಇದೇ ಮಾತನ್ನು ಹೇಳಿದ್ದಾರೆ. ಆದರೆ ಈಗ ನಿಜವಾಗಿಯೂ ಅಲ್ಲಿ ಏನು ನಡೆಯುತ್ತಿದೆ ? ಅದನ್ನು ತಾವುಗಳು ಸ್ವಲ್ಪ ದಯ ಮಾಡಿ ಯೋಚನೆ ಮಾಡಬೇಕು. ನಮ್ಮ ಬೆಂಗಳೂರು ನಗರ ಕಾರ್ಪೊರೇಷನ್‌ನವರು ಏನು ಮಾಡುತ್ತಿದ್ದಾರೆ ? ಇವರಿಗೆ ಇಟ್ಟಿದ್ದ ೧೮ ಪರ್ಸೆಂಟ್‌ನಲ್ಲಿ ಏನೆಲ್ಲಾ ಆ ವರ್ಗದವರ ಜನರ ಏಳಿಗೆಗಾಗಿ ಖರ್ಚು ಮಾಡಿದ್ದಾರೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ

೧೮ ಪರ್ಸೆಂಟ್‌ನಲ್ಲಿ ಸುಮಾರು ೬ ಕೋಟಿ ರೂಪಾಯಿಗಳನ್ನು ಈ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವರ್ಗದವರಿಗೆ ಖರ್ಚು ಮಾಡಬೇಕಾಗಿತ್ತು. ಆದರೆ ಇವರು ಎಷ್ಟು ಕೋಟಿ ರೂಪಾಯಿಗಳನ್ನು ಆ ಉದ್ದೇಶಿತ ಕಾರ್ಯ ಸಾಧನೆಗಾಗಿ ಖರ್ಚು ಮಾಡಿದ್ದಾರೆ? ಈಗ ಸರಕಾರದವರೇ ಕೊಟ್ಟಿರುವ ವರದಿಯ ಪ್ರಕಾರ ೪ ಕೋಟಿ ರೂಪಾಯಿಗಳು ಆಗುತ್ತದೆ. ಈ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ, ನೇರವಾಗಿ ಪರಿಶಿಷ್ಟ ಜಾತಿ ಮತ್ತು ವರ್ಗಗಳವರಿಗೆ ಕೊಟ್ಟಿರುವುದು ಸುಮಾರು ೧೦ ಲಕ್ಷ ರೂಪಾಯಿಗಳು. ಇನ್ನೊಂದು ಕಡೆ ಹೇಳುತ್ತಾರೆ. ಒಂದು ಕೋಟಿ ಅರವತ್ತಾರು ಲಕ್ಷ ರೂಪಾಯಿಗಳನ್ನು ಅವರ ಏಳಿಗೆಗಾಗಿ ಕೊಟ್ಟಿದ್ದೇವೆ ಎಂಬುದಾಗಿ ಹೇಳುತ್ತಾರೆ. ಹಾಗೆಂದ ಮೇಲೆ ಯಾವ ರೀತಿಯಲ್ಲಿ ಇವರು ನಿಗದಿತ ಹಣವನ್ನು ಖರ್ಚು ಮಾಡಿದ್ದಾರೆ ಎಂಬುದನ್ನು ತಾವು ಸರಿಯಾಗಿ ಹೇಳಬೇಕು. ಇವರು ಪೌರ ಕಾರ್ಮಿಕರಿಗಾಗಿ ಮನೆಗಳನ್ನು ಕೊಟ್ಟಿರುವುದನ್ನು ಹೇಳುತ್ತಾರೆ. ಯಾವ ಪರಿಶಿಷ್ಟ ಜಾತಿ ಮತ್ತು ವರ್ಗಗಳವರ ಕಲ್ಯಾಣಕ್ಕಾಗಿ ಅವರ ಏಳಿಗೆಗಾಗಿ ಮತ್ತು ಅವರ ಸೌಭಾಗ್ಯಕ್ಕಾಗಿ ಈ ಹಣವನ್ನು ಇಟ್ಟಿದ್ದಾರೋ ಆ ಹಣವನ್ನು ಪೌರ ಕಾರ್ಮಿಕರಿಗೆ ಮನೆಗಳನ್ನು ಕೊಟ್ಟು ಈ ಜನರಿಗೆ ಮೋಸ ಮಾಡುತ್ತಾ ಇದ್ದಾರೆ. ಇನ್ನು ಕಮ್ಯೂನಿಟಿ ಹಾಲ್‌ಗಳನ್ನು ಕಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಕೂಡ ಒಂದು ಸ್ಟೇಟ್‌ಮೆಂಟನ್ನು ಕೊಟ್ಟರು. ಈ ನಿಗದಿತ ೧೮ ಪರ್ಸೆಂಟ್ ಹಣದಲ್ಲಿ ಕಮ್ಯುನಿಟಿ ಹಾಲ್‌ನ್ನು ಕಟ್ಟಬಾರದು ಎಂದು ಹೇಳಿದರು. ಆದರೆ ಈಗಲೂ ಹಾಗೆಯೇ ನಡೆಯುತ್ತಾ ಇದೆ. ಆ ಹಣದಿಂದ ಕಮ್ಯುನಿಟಿ ಹಾಲ್‌ನ್ನು ಕಟ್ಟುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿಯೂ ಕೂಡ ಕಟ್ಟಿದ್ದಾರೆ. ಅದಕ್ಕೆ ಸುಮಾರು ೨೦೦೦ದಿಂದ ೨,೫೦೦ ರೂಪಾಯಿಗಳವರೆಗೆ ಬಾಡಿಗೆಯನ್ನು ಪಡೆಯುತ್ತಾ ಇದ್ದಾರೆ. ಇಷ್ಟೊಂದು ಹಣವನ್ನು ಕೊಟ್ಟು ಪರಿಶಿಷ್ಟ ಜನಾಂಗದವರು ಹಾಲ್‌ನ್ನು ಬಾಡಿಗೆಗೆ ಉಪಯೋಗಿಸುವುದು ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಹಾಗೆಯೇ ಇವರಿಗೆ ೨ ಕೋಟಿ ೩೩ ಲಕ್ಷ ರೂಪಾಯಿಗಳನ್ನು ನಾವು ಕೋರಮಂಗಲದಲ್ಲಿ ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ ಈ ಹಣವನ್ನು ಯಾರಿಗೆ ಕೊಟ್ಟಿದ್ದಾರೆ? ಆರ್ಥಿಕವಾಗಿ ಹಿಂದುಳಿದವರಿಗೆ ಆ ಹಣವನ್ನು ಕೊಟ್ಟಿದ್ದಾರೆ. ಯಾವುದೇ ಪರಿಶಿಷ್ಟರಿಗೆ ಹಣವನ್ನು ಸಹಾಯ ಮಾಡಿಲ್ಲ. ಯಾರು ಆರ್ಥಿಕವಾಗಿ ಹಿಂದುಳಿದವರಿದ್ದಾರೆ ಅವರಿಗೆ ಕೊಟ್ಟಿರಬಹುದು. ನಾನು ಅಂತಹವರಿಗೆ ಕೊಡಬಾರದು ಎಂದು ಹೇಳುವುದಿಲ್ಲ. ಆದರೆ ಯಾವ ಉದ್ದೇಶಕ್ಕಾಗಿ ಈ ಹಣವನ್ನು ಇಟ್ಟಿದ್ದಾರೋ ಅದು ಸದುಪಯೋಗ ಆಗಬೇಕು. ಸಂಬಂಧಪಟ್ಟವರಿಗೆ ಅದರ ಉಪಯೋಗವಾಗುವಂತೆ ನೋಡಿಕೊಳ್ಳಬೇಕಾಗುತ್ತದೆ. ಈ ೧೮ ಪರ್ಸೆಂಟ್ ಹಣದಲ್ಲಿ ಈ ತರಹ ಒಂದು ಅನ್ಯಾಯವು ಪರಿಶಿಷ್ಟರಿಗೆ ಆಗುತ್ತಾ ಇರುವಾಗ ಸರಕಾರದವರು ಮತ್ತು ಮಾನ್ಯ ಮಂತ್ರಿಗಳು ಕಣ್ಣು ಮುಚ್ಚಿಕೊಂಡು ಇದ್ದರೆ. ಯಾವ ರೀತಿಯಲ್ಲಿ ಶೋಷಣೆಗೆ ಒಳಗಾದ ಜನರನ್ನು ಅಭಿವೃದ್ಧಿ ಮಾಡುವುದು ಸಾಧ್ಯವಾದೀತು? ಯಾವ ರೀತಿಯಲ್ಲಿ ಅವರನ್ನು ಮೇಲಕ್ಕೆ ತರುವುದಕ್ಕೆ ಸಾಧ್ಯವಾದೀತು ಎಂದು ಸರಕಾರದವರನ್ನು ಕೇಳುವುದಕ್ಕೆ ಬಯಸುತ್ತೇನೆ.

ಇನ್ನು ಬಡವರಿಗಾಗಿ ಅದರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗಾಗಿ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಇದೆ. ಆ ಬೋರ್ಡ್ ಏನು ಮಾಡುತ್ತಾ ಇದೆ? ಅದು ಯಾರು ಕೊಳಚೆ ಪ್ರದೇಶದಲ್ಲಿದ್ದಾರೆ, ಯಾರು ಗುಡಿಸಲುಗಳಲ್ಲಿ ವಾಸವಾಗಿದ್ದಾರೆ, ಅವರಿಗೆ ಯಾವ ರೀತಿಯಲ್ಲೂ ರಕ್ಷಣೆಯನ್ನು ಕೊಡುತ್ತಾ ಇಲ್ಲ. ಉದಾಹರಣೆಗೆ ಹೇಳುವುದಾದರೆ, ದೊಡ್ಡ ದೊಡ್ಡ ಪ್ರಾಪರ್ಟಿಯನ್ನು ನೋಟಿಫೈ ಮಾಡುತ್ತಾರೆ ಮತ್ತು ಡೀನೋಟಿಫೈ ಮಾಡುತ್ತಾರೆ. ಈ ರೀತಿಯಾಗಿ ನಡೆಯುತ್ತಾ ಇದೆ. ಇತ್ತೀಚಿಗೆ ೧೯೭೮ನೇ ಇಸವಿಯಲ್ಲಿ ಮಾನ್ಯ ಬಸವಣ್ಣಪ್ಪನವರು ಅಂದು ಕೊಳಚೆ ನಿರ್ಮೂಲನ ಮಂಡಳಿಯ ಅಧ್ಯಕ್ಷರಾಗಿದ್ದಾಗ ಒಂದು ನೋಟಿಫೈ ಮಾಡಿದ್ದರು. ಆದರೆ ಮೊನ್ನೆಯ ದಿವಸ ಅದನ್ನು ಡಿನೋಟಿಫೈ ಮಾಡುವ ಕೆಲಸ ನಡೆದಿದೆ. ಇದನ್ನೆಲ್ಲಾ ಯಾರಿಗೋಸ್ಕರವಾಗಿ ಮಾಡುತ್ತಾ ಇದ್ದಾರೆ? ಯಾರು ಭೂಮಾಲೀಕರಿದ್ದಾರೆ ಅವರಿಗೋಸ್ಕರವಾಗಿ ಇದನ್ನು ಮಾಡುತ್ತಾ ಇದ್ದಾರೆ ಈ ರೀತಿಯಾಗಿ ಮಾಡಿದರೆ ಕೊಳಚೆ ಪ್ರದೇಶದಲ್ಲಿರುವವರಿಗೆ ರಕ್ಷಣೆ ಕೊಟ್ಟಂತಾಗುತ್ತದೆಯೇ? ಭೂಮಾಲೀಕರಿಗೆ ರಕ್ಷಣೆ ಕೊಟ್ಟು ಯಾರು ನಿಜವಾಗಿ ಇದರ ಸೌಲಭ್ಯವನ್ನು ಪಡೆಯಬೇಕಾಗಿತ್ತೊ ಅವರಿಗೆ ಅನ್ಯಾಯವನ್ನು ಮಾಡುತ್ತಾ ಇದ್ದಾರೆ ಎಂದು ಹೇಳಬೇಕಾಗುತ್ತದೆ. ಇದರಲ್ಲಿ ಕೆಲವು ಅಧಿಕಾರಿಗಳೂ ಕೂಡ ಶಾಮೀಲಾಗಿದ್ದಾರೆ. ನಾನು ಈ ವಿಚಾರದಲ್ಲಿ ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದಿದ್ದೇನೆ. ಅವರು ಇದನ್ನು ಇನ್‌ಸ್ಪೆಕ್ಷನ್ ಮಾಡಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದಾರೆ. ಆದರೆ ಅವರು ಬರೆದಂಥ ಪತ್ರವನ್ನು ಬೋರ್ಡ್‌ನಲ್ಲಿ ಇಟ್ಟುಕೊಂಡಿದ್ದಾರೆ. ಈ ರೀತಿಯಾಗಿ ಬಡವರಿಗೆ,

ಪರಿಶಿಷ್ಟರಿಗೆ ಅನ್ಯಾಯವಾಗುತ್ತಾ ಇದೆ. ಇದನ್ನು ನೋಡಿಯೂ ಕೂಡ ಇದರ ಬಗ್ಗೆ ಸರಕಾರದವರು ಯಾವುದೇ ಆಸಕ್ತಿಯನ್ನು ವಹಿಸುತ್ತಾ ಇಲ್ಲ ಎಂದು ನೇರವಾಗಿ ನಾನು ಆಪಾದನೆ ಮಾಡುತ್ತೇನೆ.

ನಮ್ಮಲ್ಲಿ ಸ್ಲಂ ಕ್ಲಿಯರೆನ್ಸ್ ಬೋರ್ಡ್. ಬಿಡಿಎ ಸ್ಲಂ ಎಂದು, ಕಾರ್ಪೊರೇಷನ್ ಸ್ಲಂ ಎಂದು ಬೇಕಾದಷ್ಟು ಇವೆ. ಹಾಗಾದರೆ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಎಂದು ಪ್ರತ್ಯೇಕವಾಗಿ ಏಕೆ ಬೇಕು ? ಜೊತೆಗೆ ಅದರಲ್ಲಿ ಸಾಕಷ್ಟು ಹಣ ಬೇರೆ ಇಲ್ಲ. ಮೇಂಟೆನೆನ್ಸ್‌ಗೆ ಹಣ ಮತ್ತು ಸಿಬ್ಬಂದಿ ಸಾಲುತ್ತಿಲ್ಲ. ಇದನ್ನು ಇಟ್ಟುಕೊಂಡು ಲಕ್ಷಾಂತರ ರೂಗಳ ಸಂಬಳ ಕೊಡುವ ಬದಲಿಗೆ ಅವನ್ನೆಲ್ಲಾ ಡಿಸಾಲ್ವ್ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಬೆಂಗಳೂರು ಸಿಟಿ ಕಾರ್ಪೊರೇಷನ್ ಆದರೂ ಎಫೆಕ್ಟೀವಾಗಿ ಕೆಲಸ ಮಾಡುತ್ತದೆಂದರೆ ಅದರಲ್ಲೂ ದಂಡ್ಡಿಲ್ಲ. ಅವರ ಅಂಕಿ ಅಂಶಗಳ ಪ್ರಕಾರ ಈ ಸಾಲಿಗೆ ಟ್ಯಾಕ್ಸ್ ವಸೂಲಾಗಬೇಕಾದದ್ದು ೨೬ ಕೋಟಿ ೩೨ ಲಕ್ಷ, ಆದರೆ ವಸೂಲಾಗಿರುವುದು ೧೬ ಕೋಟಿ ೭೮ ಲಕ್ಷ ರೂ ಮಾತ್ರ ಅಂದರೆ ಅರ್ಧದಷ್ಟನ್ನೂ ವಸೂಲು ಮಾಡಲಾಗಲಿಲ್ಲ. ಇಷ್ಟು ಇನ್‌ಎಫಿಷಿಯಂಟಾದ ಕಾರ್ಪೊರೇಷನನ್ನು ಇಟ್ಟುಕೊಂಡು ನಗರವನ್ನು ಸುಧಾರಿಸುತ್ತೇವೆಂದು ಹೇಳಿದರೆ ಅದು ಅಸಾಧ್ಯ ಎನ್ನಬೇಕಾಗುತ್ತದೆ. ಶ್ರೀ ಚಿನ್ನಪ್ಪನವರು ಮಂಗಳೂರು, ಮಡಿಕೇರಿ ಮತ್ತು ಉಡುಪಿ ಮುನಿಸಿಪಾಲಿಟಿಗಳು ಚೆನ್ನಾಗಿ ಕೆಲಸ ಮಾಡಿವೆ ಎಂದು ಹೇಳಿದರು, ಇವನ್ನೆಲ್ಲಾ ಕಾಂಗ್ರೆಸ್ ಪಕ್ಷದವರು ನಡೆಸುತ್ತಿರುವುದು. ನಿಮ್ಮ ಜನತಾ ಪಕ್ಷದವರು ನಡೆಸುವ ಬೆಂಗಳೂರು, ಮೈಸೂರು ನಗರ ಪಾಲಿಕೆಗಳೇಕೆ ನಷ್ಟದಲ್ಲಿ ನಡೆಯುತ್ತಿವೆ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡಿದ್ದಾರೆಯೇ ? ಅಕ್ಶಾಯನ್ನೂ ಕಿತ್ತುಕೊಂಡಿದ್ದೀರಿ, ನಗರಪಾಲಿಕೆಗಳು ಹೇಗೆ ಕೆಲಸ ಮಾಡಬೇಕು ? ಬಿಸಿಸಿ ಇಂದು ಅಧ್ವಾನ್ನವಾಗಿರಬೇಕಾದರೆ ಜನತಾ ಪಕ್ಷ ಕಾರಣವೆಂದು ಜನ ಮಾತಾಡಿ ಕೊಳ್ಳುತ್ತಿದ್ದಾರೆ. ನಿನ್ನೆ ಮಾನ್ಯ ಧರ್ಮಸಿಂಗ್ ಅವರು ಹೇಳಿದಂತೆ ಕಾವೇರಿ ಮೂರನೇ ಹಂತಕ್ಕಾಗಿ ನೀವು ೭ ಕೋಟಿ ಕೊಟ್ಟರೆ ಅದು ಪೂರ್ಣಗೊಳ್ಳಲು ಇನ್ನೂ ೧೦-೧೫ ವರ್ಷ ಬೇಕಾಗುತ್ತದೆ. ಬೆಂಗಳೂರು ನಗರ ಬರೀ ಬೆಂಗಳೂರಿನವರದಲ್ಲ, ಇಡೀ ರಾಜ್ಯದ ರಾಜಧಾನಿ. ಇಲ್ಲಿಗೆ ರಾಜ್ಯದ ಜನ ನಾನಾ ಕಾರಣಗಳಿಗಾಗಿ ಬರುತ್ತಿರುತ್ತಾರೆ. ಮೂಲಭೂತ ಅವಶ್ಯಕತೆಯಾದ ನೀರನ್ನಾದರೂ ಯಥೇಚ್ಛವಾಗಿ ಒದಗಿಸಿ. ಆದ್ದರಿಂದ ಯಾವುದಾದರೂ ರೀತಿಯಲ್ಲಿ ಈ ಸ್ಕೀಮಿಗೆ ಸಾಕಷ್ಟು ಗ್ರಾಂಟನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆಲ್ಲಾ ಮುಖ್ಯವಾದದ್ದೆಂದರೆ ಹಣ ಸಂಗ್ರಹಿಸುವ ಕಾರ್ಯ ಮಾಡಬೇಕಾಗಿದೆ. ಬೆಂಗಳೂರು ಮೆಟ್ರೊಪಾಲಿಟನ್ ರೀಜನಲ್ ಬೋರ್ಡ್ ಎಂದು ಮಾಡಿದ್ದಾರೆ, ಅದಕ್ಕೆ ೩ ಕೋಟಿ ಮಾತ್ರ ಕೊಟ್ಟಿದ್ದಾರೆ. ಅವರು ಎರಡು ಸಾರಿ ಮೀಟಿಂಗ್ ಮಾಡಿದ್ದಾರೆ, ೧೮ ಲಕ್ಷ ರೂಗಳಷ್ಟು ಹಣ ಸಂಬಳ ಮತ್ತು ಇತರ ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್‌ಗೇ ಆಗಿದೆ. ಇವರು ಇದನ್ನು ನಡೆಸುತ್ತಿರುವುದನ್ನು ನೋಡಿದರೆ ಇನ್ನು ೨೦-೩೦ ವರ್ಷವಾದರೂ ಸಹ ಇದು ಚೆನ್ನಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನಿಮಗೆ ಅದರಲ್ಲಿ ಆಸಕ್ತಿಯಿಲ್ಲ. ಮಂತ್ರಿಗಳೇನೋ ಒಳ್ಳೆಯವರೇ ಆದರೂ ಅವರೇನು ಮಾಡುತ್ತಾರೆ ? ಸರಕಾರ ಹೀಗಿರುವಾಗ ಅವರೇನು ಮಾಡುವುದಕ್ಕೆ ಆಗುತ್ತದೆ. ದಿನ ಬೆಳಗಾದರೆ ಪತ್ರಿಕೆಯಲ್ಲಿ ಮಾತ್ರ ಹಾಕುತ್ತಾರೆ ಇಂತಹ ಸರ್ಕ್ಯುಲರ್ ಇದೆ ರೋಡ್‌ಗೆ ೩ ಕೋಟಿ ರೂಪಾಯಿ ಮತ್ತೊಂದಕ್ಕೆ ಇಷ್ಟು ರೂಪಾಯಿಗಳು ಎಂದು ಸಾವಿರಾರು ಕೋಟಿ ರೂಪಾಯಿಯ ಪ್ರೋಗ್ರಾಂ ಇದೆ ಆದರೆ ನಿಮ್ಮ ಹತ್ತಿರ ಎರಡು ಕೋಟಿ ರೂಪಾಯಿ ಇಲ್ಲ ಇದಕ್ಕೆಲ್ಲಾ ಏನು ಮಾಡುತ್ತೀರಿ ? ಇನ್ನು ನನ್ನ ಕ್ಷೇತ್ರದ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಅಲಸೂರಿನಲ್ಲಿ ಒಂದು ಕೆರೆ ಇದೆ ಅಂತಹ ಲೇಕ್ ಬೇರೆ ಕಡೆ ಇಲ್ಲ ಅದು ಪ್ರವಾಸಿಗರನ್ನು ಆಟ್ರಾಕ್ಟ್ ಮಾಡುತ್ತಿದೆ. ಆದರೆ ಇದರ ಬಗ್ಗೆ ಟೂರಿಸಂ ಇಲಾಖೆಯನ್ನು ಕೇಳಿದರೆ ಅವರು ಕಾರ್ಪೊರೇಷನ್ನಿಗೆ ಬರುತ್ತದೆಂದು ಹೇಳುತ್ತಾರೆ. ಕಾರ್ಪೊರೇಷನ್ ಅನ್ನು ಕೇಳಿದರೆ ಅದು ಟೂರಿಸಂಗೆ ಬರುತ್ತದೆಂದು ಹೇಳುತ್ತಾರೆ. ಈ ರೀತಿ ಹೇಳಿದರೆ ನಾವು ಯಾರನ್ನು ಕೇಳಬೇಕು ? ಆ ಲೇಕ್ ಮಧ್ಯದಲ್ಲಿ ದ್ವೀಪಗಳು ಇದೆ ಮಾನ್ಯ ಮಂತ್ರಿಗಳೂ ಕೂಡ ಅದನ್ನು ನೋಡಿರಬಹುದು, ಆ ದ್ವೀಪಗಳು ಕಲ್ಲು ಸಮೇತ ಬಿದ್ದು ಹೋಗುತ್ತಿದೆ. ಇದರ ಬಗ್ಗೆ ಕಮೀಷನರ್‌ರವರಿಗೆ ಮೇಯರ್ ರವರಿಗೆ ಹೇಳಿದ್ದೇನೆ. ಆದರೂ ಕೂಡ ಅಲ್ಲಿ ಕಲ್ಲು ಕಟ್ಟುವಂತಹ ಕೆಲಸ ಮಾಡದಿದ್ದರೆ ಕಾರ್ಪೊರೇಷನ್ ಮತ್ತು ಟೂರಿಸಂ ಇಲಾಖೆ ಏಕೆ ಇರಬೇಕು ? ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಕೆಲವು ಮಾತನ್ನು ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಎರಡು ಪೋಲೀಸ್ ಕ್ವಾರ್ಟರ್ಸ್ ಇದೆ ಅದನ್ನು ಮೈನ್‌ಟೇನ್ ಮಾಡುವುದು ಮತ್ತು ಅವರಿಗೆ ಸೌಲಭ್ಯವನ್ನು ಒದಗಿಸುವುದು ಲೋಕೋಪಯೋಗಿ ಇಲಾಖೆಯ ಕೆಲಸ. ಇದರ ಬಗ್ಗೆ ೬ ೭ ಪತ್ರಗಳನ್ನು ಬರೆದು ನಂತರ ಸಚಿವರೊಂದಿಗೆ ವ್ಯವಹಾರ

ಮಾಡಿದ ನಂತರ ಇನ್ನು ೧೫ ದಿವಸದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ಉತ್ತರ ಬರೆದಿದ್ದರು. ಆದರೆ ಇದುವರೆಗೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಪೋಲೀಸರಿಗೆ ನೀರಿನ ಸೌಲಭ್ಯ ಒದಗಿಸಿ ಕೊಡುವುದಕ್ಕೆ ಆಗಿಲ್ಲ ಲೈಟ್ ಸೌಲಭ್ಯ ನೀಡಿಲ್ಲ, ಎಲ್ಲಾ ಕಿತ್ತು ಹೋಗಿದೆ. ಜವಾಬ್ದಾರಿಯುತವಾದ ಮಂತ್ರಿಗಳಿಗೆ, ಮುಖ್ಯ ಇಂಜಿನಿಯರ್‌ಗೆ ಪತ್ರ ಬರೆದರೂ ಕೂಡ ಜವಾಬ್ದಾರಿಯಿಂದ ಕೆಲಸ ಮಾಡದಿದ್ದರೆ ನಾವು ಇಲ್ಲಿ ಮಾತನಾಡಿ ಏನು ಪ್ರಯೋಜನವಾಗುತ್ತದೆ ? ನಾವು ಶಾಸಕರುಗಳು ಇಲ್ಲಿ ಮಾತನಾಡಬೇಕು ಎಂಬ ಚಟದಿಂದ ಮಾತನಾಡುತ್ತಿಲ್ಲ. ಜನರ ಪ್ರತಿನಿಧಿಗಳಾಗಿ ಜನರಿಗೆ ನಾವು ಉತ್ತರ ಕೊಡಬೇಕಾಗಿದೆ. ಬೆಂಗಳೂರಿನ ಹಲವಾರು ಶಾಸಕರು ಇಲ್ಲಿ ಇದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇದ್ದಾರೆ. ಇಲ್ಲಿಯವರೆಗೆ ಬೆಂಗಳೂರು ಸಿಟಿ ಕಾರ್ಪೊರೇಷನ್ನಿನವರು ಬೆಂಗಳೂರು ಡೆವಲಪ್‌ಮೆಂಟ್ ವಿಚಾರದಲ್ಲಿ ಚರ್ಚೆ ಮಾಡಿದ್ದಾರಾ ? ಅವರು ನಮ್ಮನ್ನು ಕರೆದು ಚರ್ಚೆ ಮಾಡುವುದಿಲ್ಲ. ಕಾರ್ಪೊರೇಟರ್‌ಗಳನ್ನು ಮಾತ್ರ ಕರೆದು ಚರ್ಚೆ ನಡೆಸುತ್ತಾರೆ ಅವರ ಸಲಹೆ ಪ್ರಕಾರ ಮಾತ್ರ ಅಲ್ಲಿ ನಡೆಯುತ್ತಾಗೆ. ನಾವೂ ನಮ್ಮನ್ನು ಕರೆಸಿ ಕೂಡ ಚುನಾಯಿತ ಸದಸ್ಯರಿದ್ದೇವೆ. ಬೆಂಗಳೂರು ನಗರ ಕಾರ್ಪೊರೇಷನ್ ಡೆವಲಪ್‌ಮೆಂಟ್ ವಿಚಾರದಲ್ಲಿ ನಮ್ಮ ಸಲಹೆಯನ್ನು ಕೇಳುತ್ತಿಲ್ಲ. ಇನ್ನೊಂದು ಸಣ್ಣ ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಬೆಂಗಳೂರು ವಾಟರ್ ಸಪ್ಲೈ ಮತ್ತು ಕಾರ್ಪೊರೇಷನ್ನಿನವರು ಇಬ್ಬರೂ ಕೂಡಿ ನಗರವಾಸಿಗಳಿಗೆ ನೀರನ್ನು ಒದಗಿಸುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಯಾವುದೋ ಒಂದು ಬಡಾವಣೆಯಲ್ಲಿ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಂ ಆಗಬೇಕು ನೀರಿನ ಸಪ್ಲೈ ಆಗಬೇಕು ಎಂದರೆ ಅವರು ಕಾರ್ಪೊರೇಷನ್ನಿಗೆ ಬರೆಯಬೇಕು ಅವರು ಬೆಂಗಳೂರು ವಾಟರ್ ಸಪ್ಲೈ ಬೋರ್ಡಿಗೆ ಬರೆಯುತ್ತಾರೆ. ನೀವು ನೋಡಿ ಎಸ್ಟಿಮೇಟ್ ಮಾಡಿ ಕಳಿಸಿ ಎಂದು ಇವರು ಆರು ತಿಂಗಳಾದ ಮೇಲೆ ಎಸ್ಟಿಮೇಟ್ ಮಾಡಿ ಕಳಿಸಿ ಕೊಡುತ್ತಾರೆ ನಂತರ ಅದು ಅಪ್ರೂವ್ ಆಗುತ್ತದೆ ನಂತರ ಕಾರ್ಪೊರೇಷನ್ನಿನವರು ಇವರಿಗೆ ದುಡ್ಡು ಕೊಡಬೇಕು ಆಗ ಕೆಲಸ ಪ್ರಾರಂಭ ಮಾಡುತ್ತಾರೆ ಹೆಚ್ಚಿಗೆ ಹಣವಾದರೆ ಮತ್ತೆ ಇವರಿಗೆ ದುಡ್ಡು ಕೊಡಬೇಕಾಗುತ್ತದೆ. ಇವೆರಡೂ ಗವರ್ನ್‌ಮೆಂಟ್ ಡಿಪಾರ್ಟ್‌ಮೆಂಟ್. ವಾಟರ್ ಸಪ್ಲೈ ಬೋರ್ಡಿಗೆ ಕೊಟ್ಟರೆ ಅವರೇ ಮಾಡುತ್ತಾರೆ. ಇದರಲ್ಲಿ ಈ ಎರಡನ್ನೂ ಮಿಕ್ಸ್ ಮಾಡುವುದು ಏಕೆ ? ಮಾನ್ಯ ರಾಜೀವ್‌ಗಾಂಧಿಯವರು ಬರಗಾಲ ಪ್ರದೇಶಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಬೆಂಗಳೂರು ನಗರಕ್ಕೆ ಕುಡಿಯುವ ನೀರಿಗೆಂದು ಎರಡು ಕೋಟಿ ರೂಪಾಯಿಯನ್ನು ಕೊಟ್ಟರು. ಇದುವರೆಗೆ ೧೪೦೦ ಬೋರ್‌ವೆಲ್‌ಗಳನ್ನು ತೆಗೆದಿದ್ದು ಅದಕ್ಕೆ ೧,೭೫,೦೦೦೦ ಖರ್ಚಾಗಿದೆ ಎಂದು ಹೇಳಿದರು. ಮಾನ್ಯ ಲಕ್ಷ್ಮೀಸಾಗರ್‌ವರು ಮಂತ್ರಿಗಳಾಗಿದ್ದಾಗ ನಾನು ಕೇಳಿದ್ದೆ ನಮ್ಮ ಕ್ಷೇತ್ರದಲ್ಲಿ ಇನ್ನೂ ಸ್ವಲ್ಪ ಕೊಳವೆ ಬಾವಿಗಳು ಬೇಕು ಮಾನ್ಯ ರಾಜೀವ್ ಗಾಂಧಿಯವರು ದುಡ್ಡು ಕೊಟ್ಟಿದ್ದಾರೆ ಹಾಕಿಸಿ ಕೊಡಿರಿ ಎಂದು. ಆಗ ಅವರು ಈ ಸದನದಲ್ಲೇ ನಿಮಗೆ ಎಷ್ಟು ಬೇಕು ಅಷ್ಟು ಹಾಕಿಸುತ್ತೇನೆಂದು ಹೇಳಿದರು. ಆದರೆ ಇಲ್ಲಿಯವರೆಗೂ ಕೂಡ ಒಂದು ಬೋರ್ ಅನ್ನು ಹಾಕಿಲ್ಲ.

ನಾನು ಹೇಳುವುದರಲ್ಲಿ ಯಾವುದೇ ಪಕ್ಷಬೇದ ಇಲ್ಲ. ಇವತ್ತು ಯಾರು ಬಡವರು ಇದ್ದಾರೆ, ಯಾರು ಕಷ್ಟದಲ್ಲಿದ್ದಾರೆ, ಅವರ ಏಳಿಗೆಗಾಗಿ ನಾವೆಲ್ಲರೂ ಶ್ರಮಿಸೋಣ ಎಂಬ ಮಾತನ್ನು ಹೇಳಿ ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸಾಲೀರ ಸಿದ್ದಪ್ಪನವರು ಸಭೆಯಲ್ಲಿಲ್ಲ, ಈಗ ನೆಕ್ಸ್ಟ್ ಶ್ರೀ ಪಿ. ಎಸ್. ರಾಣೆಯವರು ಮಾತನಾಡಿ ನೀವು ೧೦ ಮಿನಿಟ್‌ನಲ್ಲಿ ಮುಗಿಸಬೇಕು.

† ಶ್ರೀ ಪಿ. ಎಸ್. ರಾಣೆ (ಕಾರವಾರ).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ, ನಗರಾಭಿವೃದ್ಧಿ ಹಾಗೂ ವಸತಿ ಇಲಾಖೆಯ ಮೇಲೆ ಮಂಡಿಸಿದಂಥ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಯಾವುದೇ ಒಂದು ಇಲಾಖೆಯ ಬೇಡಿಕೆಯ ಬಗ್ಗೆ ಈ ಸದನದ ಒಪ್ಪಿಗೆ ಪಡೆದ ನಂತರ ಆ ಬೇಡಿಕೆಗೆ ಅನುಗುಣವಾಗಿ ಕಾರ್ಯಗಳನ್ನು ಕಾಮಗಾರಿಗಳನ್ನು ಕಾರ್ಯರೂಪದಲ್ಲಿ ತರುವುದು ಸರ್ಕಾರದ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಲೋಕೋಪಯೋಗಿ ಇಲಾಖೆಯ ಸಂಬಂಧದಲ್ಲಿ ಹೇಳಬೇಕಾದರೆ, ಸರ್ಕಾರದವರು ಸದನಕ್ಕೆ ಕೊಟ್ಟಂಥ ಒಪ್ಪಿಗೆ, ಕೊಟ್ಟಂಥ ಬೇಡಿಕೆಗಳನ್ನು ಕಾರ್ಯರೂಪದಲ್ಲಿ ತರುವಂಥ ಜವಾಬ್ದಾರಿ ತಮ್ಮ ಮೇಲಿದೆಯೋ ಇಲ್ಲವೋ ಎಂದು ಸರಿಯಾಗಿ ತಿಳಿದುಕೊಂಡಂತೆ ಕಾಣುತ್ತಿಲ್ಲ. ನಾನು ಇದನ್ನು ಏತಕ್ಕೆ ಹೇಳಬೇಕು

ಎಂದರೆ ೧೯೮೪-೮೫ನೇ ಸಾಲಿನಲ್ಲಿ ಆ ಅಂದಾಜಿನಲ್ಲಿ ಅನೇಕ ಕಾಮಗಾರಿಗಳು ಎಲ್ಲಾ ಕ್ಷೇತ್ರದ್ದೂ ಸೇರಿದವು. ನಮಗೆ ಶಾಸಕರುಗಳಿಗೆ ನಿಜವಾಗಿ ಬಹಳಷ್ಟು ಸಂತೋಷವಾಯಿತು. ನಮ್ಮ ಕ್ಷೇತ್ರದ್ದು ಅನೇಕ ಕಾಮಗಾರಿಗಳು ಈ ಅಂದಾಜು ಪಟ್ಟಿಯಲ್ಲಿ ಸೇರಿವೆ, ಈ ಕಾಮಗಾರಿಗಳೆಲ್ಲಾ ಪೂರ್ತಿಗೊಳ್ಳುತ್ತವೆ, ನಾವು ಜನರಿಗೆ ಸಮಾಧಾನ ಹೇಳಬಹುದು ಎನ್ನುವ ಒಂದು ಆಸೆ ಇತ್ತು. ಆದರೆ ಅಲ್ಲಿ ಆದದ್ದು ಏನು ಎಂದರೆ ಸಾರಾಸಗಟಾಗಿ ಎಲ್ಲಾ ಕಾಮಗಾರಿಗಳಿಗೂ ಒಂದು ಸಾವಿರ ರೂಪಾಯಿಯನ್ನು ಮಾತ್ರ ಅಂದಾಜು ಪಟ್ಟಿಯಲ್ಲಿ ಕಾಣಿಸಿರುತ್ತಾರೆ. ಆದ್ದರಿಂದ ಯಾವುದೇ ಕಾಮಗಾರಿಗಳನ್ನು ಆ ವರ್ಷದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಅದೇ ರೀತಿ ಈ ಪಟ್ಟಿಯು ಮುಂದುವರಿದು ಇವತ್ತು ನಾವು ಕೂಲಂಕಷವಾಗಿ ಈ ಲೋಕೋಪಯೋಗಿ ಇಲಾಖೆಯಲ್ಲಿರತಕ್ಕಂಥ ಕಾಮಗಾರಿ ವಿಭಾಗದ ಬಗ್ಗೆ ವಿಚಾರ ಮಾಡಿ ನೋಡಿದಾಗ ಒಂದು ಮಾತು ಸ್ಪಷ್ಟವಾಗುತ್ತದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಇಲಾಖೆಯು ರಜೆಯನ್ನು ಪಡೆದಿದೆಯೋ ಎನ್ನುವ ಒಂದು ಭಾವನೆ ಸಾಮಾನ್ಯವಾಗಿ ಜನರಲ್ಲಿ ಬರುತ್ತದೆ. ಆದ್ದರಿಂದ ಸರ್ಕಾರದವರು ಯಾವ ಸಂದರ್ಭದಲ್ಲಿ ಸದನದಲ್ಲಿ ಬೇಡಿಕೆಗಳನ್ನು ಮಂಡಿಸುತ್ತಾರೋ ಅದಕ್ಕೆ ಒಪ್ಪಿಗೆ ಪಡೆದ ನಂತರ ಅದನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸುವಂಥ ಜವಾಬ್ದಾರಿಯನ್ನು ಹೊರಲಿಕ್ಕೆ ಸಾಧ್ಯವಿಲ್ಲದಿದ್ದರೆ ಅದನ್ನು ಏತಕ್ಕೆ ಮಂಡಿಸಬೇಕು ಎಂದು ನಾನು ಕೇಳಬೇಕಾಗುತ್ತದೆ. ಆದ್ದರಿಂದ ನಿಮ್ಮ ಮೂಲಕ ಸರ್ಕಾರವನ್ನು ಇದರ ಬಗ್ಗೆ ಒತ್ತಾಯಪಡಿಸಲಿಕ್ಕೆ ಇಚ್ಛೆ ಪಡುತ್ತೇನೆ. ಇನ್ನು ಮೇಲಾದರೂ ತಾವು ಸದನದ ಒಪ್ಪಿಗೆ ಪಡೆದಂಥ ಈ ಬೇಡಿಕೆಯನ್ನು ಕಾರ್ಯರೂಪದಲ್ಲಿ ತರಲಿಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ. ಈ ಸಂಬಂಧದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಏನು ತಾವು ವಿವಿಧ ಕ್ಷೇತ್ರಗಳಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿ ಅಂದಾಜು ಪತ್ರದಲ್ಲಿ ಕಳೆದ ಮೂರು-ನಾಲ್ಕು ವರ್ಷಗಳಿಂದ ಕಾಣಿಸುತ್ತಾ ಬಂದಿದ್ದೀರಿ. ಆದ್ದರಿಂದ ಇಲ್ಲಿ ಅನೇಕ ನ್ಯೂನತೆಗಳನ್ನು ನಾವು ನೋಡುತ್ತಿದ್ದೇವೆ. ಕೇವಲ ಅದಕ್ಕೆ ಕಡಿಮೆ ಇರುವಂಥ ರಕಮು ಅನ್ನು ಗೊತ್ತುಪಡಿಸುವುದಷ್ಟೇ ಅಲ್ಲ ಅನೇಕ ಕಾಮಗಾರಿಗಳು ಒಂದು ಸಲ ಆ ಪಟ್ಟಿಯಲ್ಲಿ ಸೇರಿದ ನಂತರ ಅದು ಪೂರ್ತಿಗೊಳ್ಳದಿದ್ದರೆ ಅದು ಪ್ರಾರಂಭವಾಗದಿದ್ದರೆ ಅದನ್ನು ಮುಂದಿನ ಸಲದ ಪಟ್ಟಿಯಲ್ಲಿ ಕಡ್ಡಾಯವಾಗಿ ಸೇರಿಸಲೇಬೇಕಾಗುತ್ತದೆ. ಆದರೆ ಈ ಸಂಬಂಧದಲ್ಲಿ ಸರ್ಕಾರದವರು ಸರಿಯಾದಂಥ ಕ್ರಮವನ್ನು ಕೈಗೊಂಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ.

೩-೦೦ ಪಿ.ಎಂ.

ಈಗ ಲೋಕೋಪಯೋಗಿ ಇಲಾಖೆ ಅಥವಾ ಸರ್ಕಾರ ಕಾಮಗಾರಿಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ಅನೇಕ ಕುಂಟು ನೆಪಗಳನ್ನು ನೀಡುತ್ತಿದೆ. ಇವೊತ್ತು ಜಿಲ್ಲಾ ಪರಿಷತ್ ರಚನೆ ಆದ ನಂತರ ರಸ್ತೆಗಳು ಮತ್ತು ಕಟ್ಟಡಗಳ ವಿಷಯದಲ್ಲಿ ಬಹಳಷ್ಟು ಗೊಂದಲ ಉಂಟಾಗಿದೆ. ಯಾವ ರಸ್ತೆಗಳು ಜಿಲ್ಲಾ ಪರಿಷತ್‌ಗೆ ಸೇರಿಕೊಂಡಿವೆ, ಯಾವ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸೇರಿಕೊಂಡಿವೆ, ಯಾವ ಕಟ್ಟಡದ ಉಸ್ತುವಾರಿ ಲೋಕೋಪಯೋಗಿ ಇಲಾಖೆಗೆ ಸೇರಿದೆ, ಯಾವುದು ಜಿಲ್ಲಾ ಪರಿಷತ್‌ಗೆ ಸೇರಿದೆ ಎಂಬುದು ಸ್ಪಷ್ಟವಾಗಿ ಇನ್ನೂ ತಿಳಿದಿಲ್ಲ. ಇದರಿಂದ ಕಾಮಗಾರಿಗಳು ಸರಿಯಾಗಿ ಆಗುವುದಿಲ್ಲ. ಇನ್ನು ಜಿಲ್ಲಾ ಪರಿಷತ್‌ಗೆ ವಹಿಸಿಕೊಟ್ಟಿರುವ ರಸ್ತೆಗಳ ಪರಿಸ್ಥಿತಿ ಎಷ್ಟು ಚಿಂತಾಜನಕವಾಗಿದೆ ಅಂದರೆ ರಸ್ತೆಗಳ ನಿರ್ವಹಣೆ ಸಹ ಬಹಳಷ್ಟು ಅಸ್ತವ್ಯಸ್ತವಾಗಿದೆ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ ಜಿಲ್ಲಾ ಪರಿಷತ್‌ನ ಉಸ್ತುವಾರಿಗೆ ಸೇರಿರುವ ಡಾಂಬರು ರಸ್ತೆಗಳು ಮಣ್ಣಿನ ರಸ್ತೆಗಳಾಗಿ ಮಾರ್ಪಾಡು ಆಗಿವೆ. ರಸ್ತೆಗಳ ನಿರ್ವಹಣೆ ವಿಷಯದಲ್ಲಿ ಹಾಗೂ ಸುಧಾರಣೆ ವಿಷಯದಲ್ಲಿ ಯಾವ ರೀತಿ ಅನಾಸಕ್ತಿಯನ್ನು ಸರ್ಕಾರ ತಳೆದಿದೆ ಎಂಬುದು ಸ್ಪಷ್ಟವಾಗುತ್ತದೆ. ಜಿಲ್ಲಾ ಪರಿಷತ್‌ಗೆ ಸಾಕಷ್ಟು ಹಣವನ್ನು ಒದಗಿಸಿಕೊಡಿ, ಅಷ್ಟು ಮಾಡದೇ ಇದ್ದರೆ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಏಕೆ ವರ್ಗಾಯಿಸಬಾರದು ? ವರ್ಗಾಯಿಸಿ ಅವುಗಳ ನಿರ್ವಹಣೆ ಚೆನ್ನಾಗಿ ಆಗುವಂತಹ ಜವಾಬ್ದಾರಿಯನ್ನು ಏಕೆ ಮಾಡಬಾರದು ಎಂದು ತಮ್ಮ ಮೂಲಕ ಕೇಳಿಕೊಳುತ್ತೇನೆ. ಮೇಜರ್ ಡಿಸ್ಟ್ರಿಕ್ಟ್ ರೋಡ್‌ಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಟ್ಟಿದ್ದೀರಿ. ಇನ್ನು ಉಳಿದ ರಸ್ತೆಗಳನ್ನು ಸಹ ಎರಡು ಅಥವಾ ಹೆಚ್ಚು ಕಾಮಗಾರಿಗಳಿಗೆ ಸಂಬಂಧಪಟ್ಟಂತಹ ರಸ್ತೆಗಳನ್ನು ಸಹ ತಾವು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಿದರೆ ಇದರಿಂದ ಜನಗಳಿಗೆ ಬಹಳ ಅನುಕೂಲವಾಗುತ್ತದೆ

ಎಂದು ನನಗನ್ನಿಸುತ್ತದೆ. ಏಕೆಂದರೆ ವಿಶೇಷವಾಗಿ ನಮ್ಮ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಸರಿಯಾದಂತಹ, ವಿಸ್ತೃತವಾದ ರಸ್ತೆಗಳು ಇಲ್ಲದೇ ಹೋದರೆ ಜನರಿಗೆ ಪ್ರಯೋಜನ ಆಗುವುದಿಲ್ಲ, ಇದರಿಂದ, ಇನ್ನೂ ಹೆಚ್ಚು ತೊಂದರೆ ಆಗುತ್ತದೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ನಮ್ಮ ಸೂಪಾ ತಾಲ್ಲೂಕಿನ ವಿಷಯ ಹೇಳಬೇಕೆಂದರೆ ಅನೇಕ ಹಳ್ಳಿಗಳು ದೊಡ್ಡದಾಗಿ ಮಾರ್ಪಾಟಾಗಿವೆ. ಆದರೆ ಇನ್ನೂ ರಸ್ತೆ ಸಂಪರ್ಕಗಳು ಕಡಿದು ಹೋಗಿದೆ. ಹೀಗಿರುವುದರಿಂದ ಅನೇಕ ಹಳ್ಳಿಗಳಿಗೆ ರಸ್ತೆ ಸಂಪರ್ಕ ಇಲ್ಲ. ಪವರ್ ಕಾರ್ಪೊರೇಷನ್ ನವರಿಗೆ ಇದರ ಬಗ್ಗೆ ಕೇಳಿಕೊಂಡರೆ ಅವರು ಸರ್ಕಾರದವರು ರಸ್ತೆ ಸಂಪರ್ಕ ಮಾಡಬೇಕು ಎನ್ನುತ್ತಾರೆ, ಸರ್ಕಾರದವರನ್ನು ಕೇಳಿದರೆ ಕೆ.ಪಿ.ಸಿ. ಮೇಲೆ ಜವಾಬ್ದಾರಿ ಹೊರಿಸಿ, ಸರ್ಕಾರ ಲೋಕೋಪಯೋಗಿ ಇಲಾಖೆಗೆ ಹೇಳಿದರೆ ಅದನ್ನು ಕೆ.ಪಿ.ಸಿ. ಮಾಡಬೇಕೆಂದು ಹೊಣೆಗಾರಿಕೆಯನ್ನು ಒಬ್ಬರಿಂದ ಮತ್ತೊಬ್ಬರ ಮೇಲೆ ಹೊರಿಸುತ್ತಾರೆಯೇ ವಿನಹ ಆ ಜನರಿಗೆ ಅನುಕೂಲ ಮಾತ್ರ ಇದರಿಂದ ಆಗುತ್ತಿಲ್ಲ. ಇಂತಹ ಪರಿಸ್ಥಿತಿ ಉಂಟಾಗಿದೆ. ಇದರಿಂದ ಜನರು ಜೀವನಾವಶ್ಯಕ ವಸ್ತುಗಳನ್ನು ಪಡೆದುಕೊಳ್ಳಲು ಕಷ್ಟವಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆದುದರಿಂದ ಸಂಪರ್ಕ ಕಡಿದು ಹೋದಂತಹ ಹಳ್ಳಿಗಳಿಗೆ ಸಂಪರ್ಕ ನಿರ್ಮಿಸಲು ಎಷ್ಟು ಹಣವನ್ನು ಖರ್ಚು ಮಾಡಿದರೆ ಅನುಕೂಲವಾಗುತ್ತದೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಇವೊತ್ತು ಸೂಪಾ ಡ್ಯಾಮ್‌ನಿಂದ ಬರತಕ್ಕಂಥ ಆದಾಯಕ್ಕಿಂತಲೂ ಹೆಚ್ಚು ಆದಾಯ ರಸ್ತೆ ಸಂಪರ್ಕದಿಂದ ಬರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ತಾವು ಜನತೆಗೆ ಅನುಕೂಲ ಮಾಡಿಕೊಡುವ ದಿಸೆಯಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ರಸ್ತೆ ಸಂಪರ್ಕವನ್ನು ಕಲ್ಪಿಸಿ ಕೊಟ್ಟರೆ ಹೆಚ್ಚು ಅನುಕೂಲವಾಗುತ್ತದೆ. ಸೂಪಾ ವಿಷಯವಾಗಿ ಹೇಳಬೇಕು ಎಂದರೆ ನಮ್ಮ ಡಿಕ್ಕಿ ಹಳ್ಳಿಯಿಂದ ಜೋರಡಾವರೆಗೆ ರಸ್ತೆ ಸಂಪರ್ಕ ನಿರ್ಮಾಣ ಆಗಬೇಕು. ಈಗಿರುವ ರಸ್ತೆ ಕಡಿದು ಹೋಗಿರುವುದರಿಂದ ಈ ಒಂದು ರಸ್ತೆ ನಿರ್ಮಾಣ ಆದಷ್ಟು ಬೇಗ ಆಗಲು ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ ಸೂಪಾ ತಾಲ್ಲೂಕು ವಿಸ್ತೃತಗೊಂಡು ರಾಜ್ಯದಲ್ಲಿ ಬೇರೆ ತಾಲ್ಲೂಕಿಗಿಂತ ಇದು ಬಹಳ ದೂರ ಇರುವುದರಿಂದ ಸಂಪರ್ಕ ಸಾಧನೆಯನ್ನು ಕಲ್ಪಿಸಿ ಕೊಡುವುದಕ್ಕೆ ಜಿಲ್ಲಾ ಪರಿಷತ್ ಅಥವಾ ಮಂಡಲ್ ಪಂಚಾಯತ್‌ಗೆ ಸಾಧ್ಯವಾಗುವುದಿಲ್ಲ. ಆದುದರಿಂದ ಲೋಕೋಪಯೋಗಿ ಇಲಾಖೆಯು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡು ಈ ತಾಲ್ಲೂಕಿನ ಸಂಪದ್ ಅಭಿವೃದ್ಧಿಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರಾಷ್ಟ್ರೀಯ ಹೆದ್ದಾರಿ ಬಗ್ಗೆ ಹೇಳಬೇಕಾದರೆ, ೪ ಮತ್ತು ೧೭ನೇ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಸಾಧಿಸುವಂತಹ ಲೋಂಡಾ ಮತ್ತು ಸದಾಶಿವಗಡ ರಸ್ತೆಯಲ್ಲಿ ಬರುವಂತಹ ೧೧ ಸೇತುವೆಗಳ ಸುಧಾರಣೆ ಕೆಲಸ ಮಾಡಬೇಕೆಂದು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ತೀರ್ಮಾನಿಸಿ ೭ ಸೇತುವೆಗಳ ಕೆಲಸವನ್ನು ಪೂರ್ತಿಗೊಳಿಸಲಾಯಿತು. ಈಗ ನಾಲ್ಕು ಸೇತುವೆಗಳ ಸುಧಾರಣೆ ಕಾರ್ಯ ಇನ್ನೂ ಹಾಗೆಯೇ ಇನ್ನೂ ಇದರ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಲೋಕೋಪಯೋಗಿ ಇಲಾಖೆಯವರು ಕೈಕೊಂಡಿಲ್ಲ. ಈ ಕೆಲಸವನ್ನು ಸಿ. ಆರ್. ಎಫ್. ಫಂಡ್ ನಿಂದಲಾಗಲೀ ಅಥವಾ ಬೇರೆ ಫಂಡ್‌ನಿಂದಲಾಗಲೀ ಮಾಡಿಸಿ ಪೂರ್ತಿಗೊಳಿಸಬೇಕು. ಈ ಕೆಲಸ ವಾಗದಿದ್ದರೆ ಈಗ ಕೆಲಸ ಮುಗಿಸಿರುವಂತಹ ೭ ಸೇತುವೆಗಳಿಂದ ಜನರಿಗೆ ಉಪಯೋಗ ಆಗುವುದಿಲ್ಲ. ಅಷ್ಟೇ ಅಲ್ಲ, ಇದು ಸರ್ವಋತು ರಸ್ತೆ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದರ ಕೆಲಸವನ್ನು ಪೂರ್ತಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾರವಾರದ ರಾಷ್ಟ್ರೀಯ ಹೆದ್ದಾರಿ ವಿಭಾಗವನ್ನು ಮುಚ್ಚಬೇಕೆಂಬ ವಿಚಾರ ಸರ್ಕಾರದಲ್ಲಿದೆ ಎಂದು ನಾನು ಕೇಳಿದ್ದೇನೆ ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸಕಾರ್ಯ ನಡೆಯುತ್ತಿಲ್ಲ. ವರ್ಕ್‌ಲೋಡ್ ಸಾಕಷ್ಟಿಲ್ಲವೆಂಬ ಕಾರಣದಿಂದ ಅದನ್ನು ಮುಚ್ಚುವುದಕ್ಕೆ ಬದಲು ರಾಷ್ಟ್ರೀಯ ಹೆದ್ದಾರಿ ೧೭ ರಲ್ಲಿ ಅನೇಕ ರೀತಿಯ ಕಾಮಗಾರಿ ಕೆಲಸಗಳನ್ನು ಕೈಕೊಳ್ಳುವುದಕ್ಕೆ ಅವಕಾಶ ಇದೆ. ಈ ಕೆಲಸಗಳನ್ನು ಕೈಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಪತ್ರವ್ಯವಹಾರ ಮಾಡಿದರೆ, ಅವರಿಂದ ಖಂಡಿತವಾಗಿ ಮಂಜೂರಾತಿ ಸಿಗುತ್ತದೆ. ಆದ್ದರಿಂದ ಈ ಬಗ್ಗೆ ವಿಶೇಷ ಆಸಕ್ತಿ ವಹಿಸಿದರೆ ಹಾಗೂ ಹೆಚ್ಚಿನ ಮುತುವರ್ಜಿವಹಿಸಿದರೆ ಈ ಭಾಗದಲ್ಲಿ ಹೆಚ್ಚಿನ ಒಂದು ಕಾರ್ಯಪ್ರಗತಿ ಆಗುತ್ತದೆ ಮತ್ತು ಆ ವಿಭಾಗವನ್ನು ಮುಂದುವರೆಸಬಹುದು. ಆದ್ದರಿಂದ ಈ ದಿಸೆಯಲ್ಲಿ ಕೇಂದ್ರದ ಜೊತೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಡಗಳ ದುರಸ್ತಿ ಬಗ್ಗೆ ಹೇಳಬೇಕಾಗಿದೆ. ಈ ಕೆಲಸ ಸಹ ಈಗ ಡೋಲಾಯಮಾನ ಸ್ಥಿತಿಯಲ್ಲಿದೆ. ಈ ದುರಸ್ತಿ ಕೆಲಸವನ್ನು ಜಿಲ್ಲಾ ಪರಿಷತ್‌ನವರು ಮಾಡಬೇಕೋ ಅಥವಾ ಲೋಕೋಪಯೋಗಿ ಇಲಾಖೆಯವರು ಮಾಡಬೇಕೋ ಎಂಬತಕ್ಕಂಥ ಗೊಂದಲ ಪರಿಸ್ಥಿತಿ ಬಂದಿರುವುದರಿಂದ ಎಷ್ಟೋ ಕಟ್ಟಡಗಳು ಬಿದ್ದು ಹೋಗುವ ಸ್ಥಿತಿಗೆ ಬಂದಿವೆ. ಉದಾಹರಣೆಗೆ ಹೇಳಬೇಕೆಂದರೆ, ಕಾರವಾರದ ಕಲಾ ಮತ್ತು ವಿಜ್ಞಾನ ಮಹಾ ವಿದ್ಯಾಲಯ ಕಟ್ಟಡದ ರಿಪೇರಿ ಕೆಲಸ ಕಳೆದ 2 ವರ್ಷಗಳಿಂದ ನಡೆದಿಲ್ಲ. ಅಲ್ಲಿ ಹೊಸ ಕೋಣೆಗಳನ್ನು ಸಹ ಕಟ್ಟಿಸಿಲ್ಲ ಅಲ್ಲಿನ ಪ್ರಯೋಗಾಲಯದ ರಿಪೇರಿ ಸಹ ಆಗಿಲ್ಲ. ಅಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ವಿಜ್ಞಾನಕ್ಕೆ ಸಂಬಂಧಪಟ್ಟ ಯಂತ್ರೋಪಕರಣಗಳು ಇವೆ ಆದರೆ ಕಟ್ಟಡದ ರಿಪೇರಿ ಆಗದ ಕಾರಣ ಅದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಆ ಕಾಲೇಜ್‌ನವರಿಗೆ ಆಗುತ್ತಿಲ್ಲ. ಇದರಿಂದ ಲೋಕೋಪಯೋಗಿ ಇಲಾಖೆಯವರು ಯಾವ ರೀತಿ ಕಟ್ಟಡಗಳ ರಿಪೇರಿ ಮಾಡಿಸುತ್ತಿದ್ದಾರೆಂಬುದು ತಿಳಿಯುತ್ತದೆ, ಈ ಕಟ್ಟಡ ರಿಪೇರಿ ಸಂಬಂಧದಲ್ಲಿ ಆ ಕಾಲೇಜಿನ ವಿದ್ಯಾರ್ಥಿಗಳು ಚಳುವಳಿ ಮಾಡಿದರು. ಜಿಲ್ಲಾ ಮಂತ್ರಿಗಳ ಜೊತೆ ಚರ್ಚೆ ಮಾಡಿದಾಗ, ಜಿಲ್ಲಾ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಜಾಗ್ರತೆ ರಿಪೇರಿ ಕೆಲಸ ಮಾಡಿಸುವುದಾಗಿ ಭರವಸೆ ಕೊಟ್ಟರು. ಆದರೆ ಒಂದು ಪೈಸೆ ಸಹ ಈ ಕೆಲಸಕ್ಕೆಂದು ಮಂಜೂರಾಗಿಲ್ಲ, ಮಳೆಗಾಲ ಪ್ರಾರಂಭವಾಗುವುದಕ್ಕೆ ಮೊದಲೇ ಆ ಕಟ್ಟಡದ ರಿಪೇರಿ ಕೆಲಸವನ್ನು ಮುಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ನಗರಾಭಿವೃದ್ಧಿಯ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಅಧ್ಯಕ್ಷರು.—ತಾವು ಜಾಗ್ರತೆ ಮುಗಿಸಿ. ಈಗ ಸಮಯವಿಲ್ಲ.

ಶ್ರೀ ಪ್ರಭಾಕರ್ ಸದಾಶಿವರಾಣೆ.—ಕಾರವಾರದಲ್ಲಿ ನೌಕಾ ನೆಲೆ ಯೋಜನೆ ಹಾಗೂ ಕಾರವಾರದ ಹತ್ತಿರ ಕೈಗಾ ಅಣು ವಿದ್ಯುತ್ ಯೋಜನೆ ಪ್ರಾರಂಭವಾಗುತ್ತಿರುವ ಕಾರಣ, ಈ ಎರಡು ಯೋಜನೆಗಳಿಂದ ಕಾರವಾರ ಶೀಘ್ರದಲ್ಲಿಯೇ ಹೆಚ್ಚಿನ ರೀತಿಯಲ್ಲಿ ಬೆಳೆಯುವಂತಹ ನಗರವಾಗಿದೆ. ಈ ಎರಡು ಯೋಜನೆಗಳಿಂದ ಅಲ್ಲಿನ ನಗರಸಭೆಯ ಮೇಲೆ ಬಹಳಷ್ಟು ಭಾರ ಬೀಳುತ್ತದೆ. ಈ ಭಾರವನ್ನು ಕಡಿಮೆ ಮಾಡಲು ಕಾರವಾರದ ನಾಗರೀಕರಿಗೆ ಬೇಕಾಗುವಂತಹ ಎಲ್ಲ ರೀತಿಯ ಸೌಕರ್ಯಗಳನ್ನು ಒದಗಿಸಿಕೊಡುವಂತಹ ಜವಾಬ್ದಾರಿ ಸರ್ಕಾರದ ಮೇಲಿದೆ. ಕಾರವಾರ ನಗರಸಭೆಯ ಹಣಕಾಸಿನ ಒಂದು ಪರಿಸ್ಥಿತಿಯನ್ನು ನಾವು ಅವಲೋಕಿಸಿದಾಗ ಈ ಎಲ್ಲ ಭಾರವನ್ನು ಹೊರುವಂಥ ಸಾಮರ್ಥ್ಯ ಆ ನಗರಸಭೆಗೆ ಇಲ್ಲ. ಆದುದರಿಂದ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಸಿಟೀಸ್ ಎಂಬ ಯೋಜನೆ ಇದೆ, ಆ ಯೋಜನೆ ಮುಖಾಂತರ ಕಾರವಾರ ನಗರಕ್ಕೆ ವಿಶೇಷವಾದಂಥ ಧನಸಹಾಯ ಕೊಟ್ಟು ಈ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಕಾರವಾರದಲ್ಲಿ ಈಗಿನ ನಗರಾಭಿವೃದ್ಧಿ ಸಚಿವರು ಹಿಂದೆ ನಗರಾಭಿವೃದ್ಧಿ ಸಚಿವರಾಗಿದ್ದಾಗ ಪ್ರತ್ಯಕ್ಷವಾಗಿ ಭೇಟಿ ಮಾಡಿ ಗೋಣಿನಾಲ ಎಂಬ ಕೊಳಚೆ ಪ್ರದೇಶವನ್ನು ನೋಡಿದ್ದರು. ಅದು ಕಾರವಾರದಲ್ಲಿ ಸೊಳ್ಳೆಗಳ ದೊಡ್ಡ ಮಾದಂಥ ಆಗರವಾಗಿದೆ. ಅದನ್ನು ಸರಿಪಡಿಸುತ್ತೇನೆ, ಕೂಡಲೇ ಅದರ ಬಗ್ಗೆ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿ ಹೋದವರು ಮತ್ತೆ ನಗರಾಭಿವೃದ್ಧಿ ಸಚಿವರಾಗಿ ಬಂದಾಗಲೂ ಆಗಲಿಲ್ಲ. ಆದುದರಿಂದ ಇನ್ನು ಮೇಲಾದರೂ ತಡಮಾಡದೇ ಕೂಡಲೇ ಯಾವುದೇ ರೀತಿಯಲ್ಲಿ ಗೋಣಿನಾಲ ಯೋಜನೆ ಏನಿದೆ ಅದನ್ನು ಮಾಡುವಂಥ ಪ್ರಯತ್ನ ಮಾಡಬೇಕು. ಅದರಿಂದ ಕಾರವಾರ ನಗರದ ಒಂದು ಸಮಸ್ಯೆಯನ್ನು ಪರಿಹರಿಸಲಿಕ್ಕೆ ಸಾಧ್ಯವಾಗಬಹುದು ಎಂದು ನನಗನ್ನಿಸುತ್ತದೆ. ಮಾನ್ಯ ಅಧ್ಯಕ್ಷರೇ ಇನ್ನೊಂದು ಮಾತನ್ನು ಹೇಳುತ್ತೇನೆ, ಅದು ಅತೀ ಮಹತ್ವದ್ದು, ಕಾರವಾರ ನಗರದಲ್ಲಿ ನಗರ ಯೋಜನಾ ಪ್ರಾಧಿಕಾರ ಇದೆ. ಆ ನಗರ ಯೋಜನಾ ಪ್ರಾಧಿಕಾರದಿಂದ, ಎಲ್ಲಿ ರಸ್ತೆಗಳು ಆಗಬೇಕು, ಎಲ್ಲಿ ಮನೆಗಳು ಆಗಬೇಕು, ಎಲ್ಲಿ ಮಾರ್ಕೆಟ್ ಆಗಬೇಕು ಎಂದು ಯೋಜನೆಯನ್ನು ರೂಪಿಸಿದ್ದಾರೆ. ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಈ ಯೋಜನೆಯನ್ನು ರೂಪಿಸುವಾಗ ಕಾರವಾರ ನಗರಕ್ಕೆ ನಿಜವಾದ ಕಲ್ಪನೆಯಾಗಲಿ, ವಿಚಾರವಾಗಲಿ ಯೋಜನಾಕರ್ತರು ಪಡೆದುಕೊಂಡಿಲ್ಲ ಎಂದು ಹೇಳಬೇಕಾಗುತ್ತದೆ. ಅಲ್ಲಿ ಹಸಿರು ವಲಯ ಎಂದು ಘೋಷಣೆ ಮಾಡಿದ್ದೀರಿ. ಕಾರವಾರದಲ್ಲಿ ನಿಸರ್ಗದ ಸೃಷ್ಟಿ ಇರುವುದರಿಂದ ನಾವು ಮಾನವನಿರ್ಮಿತ ಹಸಿರು ವಲಯ ಮಾಡುವಂಥ ಅವಶ್ಯಕತೆ ಇಲ್ಲ. ಒಂದು ಕಡೆ ಸಮುದ್ರ ಇದೆ, ಇನ್ನೊಂದು ಕಡೆ ಬೆಟ್ಟ ಇದೆ. ಳ ಕಡೆ ಸುತ್ತುವರಿದು ಅತಿ ಸೀಮಿತವಾದಂಥ ಪ್ರದೇಶದಲ್ಲಿ ನೀವು ಹಸಿರುವಲಯ ಘೋಷಣೆ ಮಾಡಿ

ಅಲ್ಲಿ ಯಾವುದೇ ಒಂದು ಕಟ್ಟಡಗಳಾಗಲಿ, ಯಾವುದೇ ಚಟುವಟಿಕೆಗಳಾಗಲಿ ಬರಲಿಕ್ಕೆ ಅಡ್ಡಿ ಮಾಡಿದರೆ ಕಾರವಾರ ನಗರದ ಅಭಿವೃದ್ಧಿಯಾಗುವುದಿಲ್ಲ. ಸಾಮಾನ್ಯವಾಗಿ ಎಲ್ಲ ನಗರಗಳಿಗೂ ಅನ್ವಯಿಸುವಂತೆ ಇದನ್ನು ಅಲ್ಲಿಗೂ ಅನ್ವಯಿಸಿದರೆ ಆಗುವುದಿಲ್ಲ. ಅಲ್ಲಿನ ಸ್ಥಳ, ಭೌಗೋಳಿಕ ಪರಿಸ್ಥಿತಿಯನ್ನು ತಾವು ನೋಡಿಲ್ಲ. ಆದುದರಿಂದ ನನಗೆ ತಿಳಿದಮಟ್ಟಿಗೆ ಮತ್ತು ಸಾಮಾನ್ಯವಾಗಿ ಅಲ್ಲಿ ಜನರು ಅಭಿಪ್ರಾಯ ಪಡುವಂತೆ ಈಗಾಗಲೇ ನನಗೆ ಗೊತ್ತಾಗಿರುವಂತೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ವಿಶೇಷವಾದಂಥ ಮನವಿಯನ್ನು ಮಾಡಿಕೊಂಡಿದ್ದಾರೆ, ಹಸಿರು ವಲಯ ಎನ್ನುವುದು ಕಾರವಾರದ ಮಟ್ಟಿಗೆ ತೆಗೆದುಹಾಕುವುದು, ಮಾನವ ನಿರ್ಮಿತ ಹಸಿರುವಲಯದ ಅವಶ್ಯಕತೆ ಇರುವುದಿಲ್ಲ ಎಂದು. ಆದುದರಿಂದ ಇದನ್ನು ಮರುಪರಿಶೀಲನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—೧೫ ನಿಮಿಷ ಆಯಿತು, ಬೇಗ ಮುಗಿಸಿ.

ಶ್ರೀ ಪಿ. ಎಸ್. ರಾಣೆ.—ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಸನ್ಮಾನ್ಯ ಅಧ್ಯಕ್ಷರೆ, ಸಮಯ ಬಹಳ ಆಗಿದೆ. ನನ್ನ ಹೆಸರು ಇದ್ದಿಲ್ಲ, ನಿನ್ನೆ ಕೇಳಿದಾಗ ತಾವು ಅವಕಾಶ ಕೊಟ್ಟಿದ್ದೀರಿ, ತಮ್ಮ ಸೌಹಾರ್ದಮಯವಾದಂಥ ಔದಾರ್ಯವನ್ನು ದುರುಪಯೋಗ ಮಾಡಲಿಕ್ಕೆ ನಾನು ತಯಾರಿಲ್ಲ. ಈಗಾಗಲೇ ನಮ್ಮ ಪಕ್ಷದ ಶ್ರೀಮಾನ್ ಧರ್ಮಸಿಂಗ್‌ರವರು ಗದಗ್ ವಾಟರ್‌ಸಪ್ಲೈ ವಿಚಾರವಾಗಿ ಇಲ್ಲಿ ಮಾತನಾಡಿದ್ದಾರೆ, ನಾನು ಗದಗಿನಿಂದ ಚುನಾಯಿತನಾಗಿ ಬಂದಿರುವುದರಿಂದ ಗದಗ್ ವಾಟರ್‌ಸಪ್ಲೈ ಬಗ್ಗೆ ಮಾತನಾಡದೇ ಇರುವುದು ಸರಿಯಲ್ಲ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಗದಗ್ ವಾಟರ್ ಸಪ್ಲೈ ಸ್ಕೀಂ ೧೯೬೫ನೇ ಇಸವಿಯಲ್ಲಿ ಮಂಜೂರಾಯಿತು. ಮಾನ್ಯ ಮಂತ್ರಿವರ್ಯರು ಬಹಳ ಕೂಲಂಕುಷವಾಗಿ ಅವಲೋಕನೆ ಮಾಡಬೇಕು. ನಾನು ಇದರಲ್ಲಿ ನಿಮ್ಮ ಪಕ್ಷದ ತಪ್ಪು ಎಂದು ಹೇಳಲಿಕ್ಕೆ ಇಚ್ಛೆಪಡುವುದಿಲ್ಲ. ಆದರೆ ಯಾರದೋ ತಪ್ಪು ದುರ್ದೈವದಿಂದ ಗದಗಿನ ಮೇಲೆ ಈ ರೀತಿ ಆಗಿದೆ. ೧೯೬೫ನೇ ಇಸವಿಯಲ್ಲಿ ಮಂಜೂರಾದಂಥ ಯೋಜನೆ ಇದೂವರೆಗೆ ಪೂರ್ತಿಯಾಗಿಲ್ಲ. ಪೂರ್ತಿಯಾಗುವಂಥ ಭರವಸೆ ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನನಗೆ ೩–೪ ಪತ್ರಗಳನ್ನು ಬರೆದಿದ್ದಾರೆ. ಆ ಪತ್ರಗಳಲ್ಲಿ ಗದಗಿನ ಜನತೆಯ ನಿಜವಾದಂಥ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ತಾವು ಅದಕ್ಕೆ ಸಾಕಷ್ಟು ಪರಿಹಾರವನ್ನು ಕೊಡುವಂತೆ ಆಶ್ವಾಸನೆ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಉಪಕೃತ. ಆದರೆ ಈಗ ಈ ವಿಷಯವನ್ನು ತಮ್ಮ ಗಮನಕ್ಕೆ ತರದೆ ಗತ್ಯಂತರವಿಲ್ಲ. ೨೫–೧೦–೧೯೬೭ರ ಗವರ್ನಮೆಂಟ್ ಆರ್ಡರ್ ಪ್ರಕಾರ ೧೧೫ ಲಕ್ಷ ರೂಪಾಯಿಗಳ ಈ ಸ್ಕೀಂ ಮಂಜೂರಾಯಿತು. ಪಿ.ಡಬ್ಲ್ಯು.ಡಿ. ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾ ಇದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ.

In the year 1966 again a technical approval was given for the revised scheme for 132 lakhs.

೧೪–೩–೧೯೭೭ರಲ್ಲಿ ರಿವೈಸ್ಡ್ ಎಸ್ಟಿಮೇಟ್ ಮಾಡಿ, ೧೯೦ ಲಕ್ಷ ಎಂದು ಮಾಡಿದ್ದಾರೆ. ೭–೧೦–೧೯೮೭ರಲ್ಲಿ ಚೀಫ್ ಇಂಜಿನೀಯರ್ ಅವರು ಎಸ್ಟಿಮೇಟನ್ನು ೬೫೫ ಲಕ್ಷಕ್ಕೆ ಏರಿಸಿದ್ದಾರೆ. ಈಗ ಅದು ೯೦೦ ಲಕ್ಷಕ್ಕೆ ಬಂದಿದೆ. ಗದಗ್ ಮುನಿಸಿಪಾಲಿಟಿಯವರು ತಮ್ಮ ಭಾಗದ ಷೇರು ೧೦೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ದುರ್ದೈವದಿಂದ ಈ ಸ್ಕೀಮ್ ಅದೇ ವರ್ಷ ಮಂಜೂರಾಗಿದ್ದರೆ ಮುಗಿಯುತ್ತಿತ್ತು. ಇದಕ್ಕೆ ಯಾರೇ ಕಾರಣರಿರಲೀ, ಜನರಿಗೆ ನೀರು ಕೊಡುವುದು ಸರ್ಕಾರದ ಮುಖ್ಯ ಕರ್ತವ್ಯ. ಅನೇಕ ಸಂದರ್ಭಗಳಲ್ಲಿ ಮಾನ್ಯ ಲಕ್ಷ್ಮೀಸಾಗರ್‌ರವರು ಕೂಡ ಮುತುವರ್ಜಿಯಿಂದ ಕೆಲಸ ಮಾಡಿದ್ದಾರೆ. ನಾನು ಆ ವಿಚಾರದಲ್ಲಿ ಟೀಕೆ ಮಾಡಲು ತಯಾರಿಲ್ಲ. ಇವತ್ತು ಏನಾಗಿದೆ ಎಂದರೆ ೧೦–೨೦ ಯೋಜನೆಗಳನ್ನು ಕೂಡಿಸಿ, ಯೋಜನೆಗೆ ಬೇಕಾದ ಹಣವನ್ನು ಮಂಜೂರು ಮಾಡಿದರೆ, ಮಂಜೂರು ಮಾಡಿದಂತಹ ಹಣ ಅಧಿಕಾರಿಗಳ ಪಗಾರಕ್ಕೆ, ಯೋಜನೆ ಪುನರ್‌ಪರಿಶೀಲನೆಗೆ ಅದಕ್ಕೆ ಬೇಕಾದ ಪತ್ರಗಳಿಗೂ ಸಹ ಸಾಕಾಗುವುದಿಲ್ಲ. ಅಧಿಕಾರಿಗಳಿಗೆ ಪಗಾರ

ಕೊಟ್ಟು ಗದಗ್ ಮುನಿಸಿಪಾಲಿಟಿಗೆ ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದರೆ ಏನು ಪ್ರಯೋಜನ ? ಇದನ್ನು ತೆಗೆದುಬಿಡಿ, ಇಲ್ಲದಿದ್ದರೆ ಕೆಲಸ ಮಾಡಿ, ಮತ್ತೆ ಎಲ್. ಐ. ಸಿ. ಯವರನ್ನು ಹಣ ಕೇಳಿದ್ದೀರಿ, ಅವರು ಹಣ ಕೊಟರು. ಸುಮಾರು ೨೫೦ ಲಕ್ಷ ರೂಪಾಯಿಗಳನ್ನು ಕೊಟ್ಟರು. ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಎಲ್. ಐ. ಸಿ. ಯವರು ಕೊಟ್ಟಂತಹ ಹಣವನ್ನು ಕೂಡ ಖರ್ಚು ಮಾಡಲಿಕ್ಕೆ ಆಗಿಲ್ಲವೆಂದರೆ ಇದಕ್ಕೆ ಯಾರು ಜವಾಬ್ದಾರರು ? ಹಣ ಇಲ್ಲದಿದ್ದರೆ ಅದು ಬೇರೆ ವಿಚಾರ. ಸಾಲವಾಗಿ ಕೊಟ್ಟಂತಹ ಹಣವನ್ನು ಖರ್ಚು ಮಾಡದೇ ಇದ್ದರೆ ಇದಕ್ಕೆ ಯಾರು ತಪ್ಪು ? ಅಂದು ಇದ್ದಂತಹ ನಮ್ಮ ಗದುಗಿನ ಮ್ಯಾನೇಜಿಂಗ್ ಡೈರೆಕ್ಟರ್ ಪತ್ರ ಬರೆದಿದ್ದಾರೆ. ಎಲ್ಲವನ್ನೂ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಬೇಕಾದರೆ ಅದನ್ನು ಹಾಜರುಪಡಿಸುತ್ತೇನೆ, ಇವತ್ತು ತಾವು ಏನು ಮಾಡಿದ್ದೀರಿ. ಗದುಗಿನಲ್ಲಿ ಚಹಾ ಅಂಗಡಿಯುವ ದಿವಾಳಿಯಾದಾಗ ಒಂದು ಬೋರ್ ಹಾಕಿಸಿ ನೀರು ಬಂದಿದ್ದರ ಪರಿಣಾಮವಾಗಿ ಐದೂವರೆ ರೂಪಾಯಿಗೆ ಒಂದು ಕೊಡದಂತೆ ನೀರನ್ನು ಮಾರಾಟ ಮಾಡಿ ಈಗ ಶ್ರೀಮಂತನಾಗಿದ್ದಾನೆ. ನಾನು ತಪ್ಪು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅವನು ಬಡವನಿದ್ದಾನೆ, ದೈವದತ್ತವಾಗಿ ಬಂದಂಥ ಬಡತನ ಅವನಿಗೆ ಬಂತು, ಅದಕ್ಕೆ ತಕ್ಕಹಾಗೆ ಬರಗಾಲವೂ ಬಂದಿತ್ತು. ಇವತ್ತು ಟಿ. ಬಿ. ಗಳಲ್ಲಿ ಮಂತ್ರಿಗಳು ಬರುವ ಪ್ರೋಗ್ರಾಂ ಇದ್ದರೆ, ನೀರು ಬಿಟ್ಟಿರುತ್ತಾರೆ. ಇಲ್ಲದಿದ್ದರೆ ನೀರು ಇರುವುದಿಲ್ಲ. ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಕರ್ನಾಟಕದೊಳಗೆ ಅಷ್ಟೇ ಅಲ್ಲ. ಇಡೀ ದೇಶದಲ್ಲಿ ಒಂದು ಲಕ್ಷ ಜನಸಂಖ್ಯೆ ಇರುವ ನೀರು ಇಲ್ಲದೇ ಇರತಕ್ಕ ನಗರ ಇದ್ದರೆ ಅದು ಗದಗ್ ಒಂದೇ. ಇದಕ್ಕೆ ಯಾವುದಾದರೂ ಪ್ರಶಸ್ತಿ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡಿ. ಈಗ ಕಂಡಿಯುವ ನೀರಿನ ಎಸ್ಟಿಮೇಟ್ ೯೬೦ ಲಕ್ಷಕ್ಕೆ ಏರಿದೆ. ಇತ್ತೀಚೆಗೆ ಕೆಲಸ ತ್ವರಿತವಾಗಿ ನಡೆಯುವ ಹಾಗೆ ಕಾಣುತ್ತೆ. ನಾನು ಈಗಲೇ ಶಿಫಾರಸ್ಸು ಕೊಡಲಿಕ್ಕೆ ತಯಾರಿಲ್ಲ. ಟೀಕೆ ಮಾಡುವುದಕ್ಕೂ ಹೋಗುವುದಿಲ್ಲ. ಹಿಂದಿಗಿಂತ ಇಂದು ಕೆಲಸ ನಡೆಯುತ್ತಿದೆ. ಆದಕ್ಕಾಗಿ ಅಭಿನಂದನೆ ಸಲ್ಲಿಸುತ್ತೇನೆ. ಕ್ಯಾಬಿನೆಟ್ ತೀರ್ಮಾನ ಮಾಡಿದಮೇಲೆ ಸರ್ಕಾರದ ಆದೇಶ ಹೊರಡಿಸಿದ್ದಾರೆ. ನಗರಸಭೆಯ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲದಿರುವುದರಿಂದ ಇದು ದುಬಾರಿಯಾಗುತ್ತದೆಂದು ಹೇಳಿದ್ದಾರೆ, ಹೀಗಿರುವಾಗ ಕರ್ನಾಟಕ ವಾಟರ್ ಸಪ್ಲೈಬೋರ್ಡಿಗೆ ಈ ಕೆಲಸವನ್ನು ಕೊಟ್ಟಿದ್ದಾರೆ. ಗದಗ್ ನಗರ ಸಭೆಯ ಸಂಪತ್ತನ್ನು ಬೆಳೆಸುವ ಸಲುವಾಗಿ ಸರ್ಕಾರದವರು ಏನು ಸಹಾಯ ಮಾಡಿದ್ದಾರೆ ಮುನಿಸಿಪಾಲಿಟಿಯ ಅನೇಕ ಆಸ್ತಿಗಳು ಈವತ್ತು ಇವೆ.

ಆದರೆ ತಮಗೆ ಇಷ್ಟು ಮಾತ್ರ ತೊಂದರೆಯಾಗಬಹುದು. ಏನು ತೊಂದರೆ ಎಂದರೆ, ನಿಮ್ಮಿಂದ ಕೆಲಸ ಮಾಡಿಸಿಕೊಡುತ್ತೇವೆಂದು ದುಡ್ಡು ತಿನ್ನತಕ್ಕ ಜನರು ಯಾರಿದ್ದಾರೆ ಅವರು ನಿಮ್ಮ ಹತ್ತಿರ ಬರುವುದನ್ನು ಕೆಲವು ದಿವಸದವರೆಗೆ ಬಿಡಬಹುದು. ಆದ್ದರಿಂದ ಇದನ್ನು ನೀವು ಸರಿಯಾಗಿ ಗಮನಕ್ಕೆ ತೆಗೆದುಕೊಂಡರೆ ಒಳ್ಳೆಯದು ಇವತ್ತು ಒಂದೊಂದು ವಠಾರ ಸುಮಾರು ೨೦ ಲಕ್ಷ ರೂ.ಗಳಷ್ಟು ಬೆಲೆ ಬಾಳುತ್ತವೆ. ಅವುಗಳನ್ನು ನಮಗೆ ನೂರೈವತ್ತು, ಎರಡನೂರೈವತ್ತು ರೂಪಾಯಿಗಳಿಗೆ ಬಾಡಿಗೆಗೆ ಕೊಡಿ ಎಂದು ಕೇಳುವುದಕ್ಕೆ ಬರುತ್ತಿದ್ದಾರೆ. ಆದರೆ ತಾವು ಇನ್ನೂ ಅವುಗಳನ್ನು ಕೊಟ್ಟಿಲ್ಲ. ಒಮ್ಮೆಲೇ ತಾವು ಕೊಟ್ಟುಬಿಟ್ಟಿದ್ದೀರೆಂದು ನಾನು ಹೇಳುವುದಿಲ್ಲ. ಇದರಲ್ಲಿ ಲಂಚದ ವ್ಯವಹಾರ ಇದೆ ಎಂದು ನಾನು ಅನೇಕಸಲ ಹೇಳಿದ್ದೇನೆ. ಇದಕ್ಕೆ ಬಹಳಷ್ಟು ಎವಿಡೆನ್ಸ್ ಇವೆ. ಒಂದೊಂದು ವಠಾರಗಳನ್ನೂ ಅವರರು ಇರತಕ್ಕವುಗಳನ್ನು ಅವರವರಿಗೇ ನೀವು ಲಲಾವ್ ಮಾಡಿದರೆ ಸುಮಾರು ೨೦-೨೫ ಲಕ್ಷ ರೂಪಾಯಿಗಳಂತೆ ಬಂದರೂ ಕೂಡ ಹತ್ತಿರ ಹತ್ತಿರ ೧೦ ಕೋಟಿ ರೂಪಾಯಿಗಳು ನಮ್ಮ ಮುನಿಸಿಪಾಲಿಟಿಗೆ ಬರುತ್ತದೆ. ಅದು ಬಂದರೆ ೧೦ ಕೋಟಿ ರೂಪಾಯಿಗಳ ಒತ್ತಡ ನಿಮ್ಮ ಸರ್ಕಾರದ ಮೇಲೆ ಬೀಳುವುದಿಲ್ಲ. ನಮಗೆ ಯಾರ ಸಹಾಯವೂ ಬೇಡ. ನಮಗೆ ಕರ್ನಾಟಕ ವಾಟರ್ ಸಪ್ಲೈ ಬೋರ್ಡೂ ಕೂಡ ಬೇಡ. ನಾವು ನಮ್ಮ ಹಣದಮೇಲೆ ನಾವು ನಿಂತುಕೊಳ್ಳುವುದಕ್ಕೆ ಸ್ವತಂತ್ರರಾಗುತ್ತೇವೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಿಮ್ಮ ಸರ್ಕಾರ ಇದ್ದಾಗಲೇ ಇದನ್ನು ರಿಜೆಕ್ಟ್ ಮಾಡಿದಿರಿ. ನಂತರ ಇದರಮೇಲೆ ಅವರು ಹೈಕೋರ್ಟ್‌ಗೆ ಹೋದರು. ಅಲ್ಲಿ ಅವರು ರಿಜೆಕ್ಟ್ ಮಾಡಿದರು. ಅಲ್ಲಿ ರಿಜೆಕ್ಟ್ ಆದ ಮೇಲೇ ಪುನಃ ತಮ್ಮ ಕಡೆಗೆ ಅವರು ಬಂದರು. ಕಮಿಷನರ್‌ರವರ ಕಡೆಗೆ ಹೋದರು, ಪುನಃ ತಮ್ಮ ಕಡೆಗೆ ಪರಿಶೀಲನೆಗೆ ಬಂದರು. ಆ ಕಮಿಷನರ್‌ರವರು ಪರಿಶೀಲನೆ ಮಾಡುವಾಗ ಮತ್ತೆ ಮುನಿಸಿಪಾಲಿಟಿ ಠರಾವು ರಹಿತಪಡಿಸಬೇಕೆಂದು ಶಿಫಾರಸು ಮಾಡಿದರು. ಅಂದರೆ ಹೈಕೋರ್ಟ್‌ನ ಆರ್ಡರ್‌ಮೇಲೆ ಈ ಶಿಫಾರಸನ್ನು ಮಾಡುವ ಅಧಿಕಾರ, ದಾಷ್ಟ್ಯತನ ಬೇರೆ ಯಾರಿಗೆ ಬರುತ್ತದೆ ? ಅಂಥ ಕಮಿಷನರ್‌ರನ್ನು ನೀವು ಇಲ್ಲಿ ತಂದು

ಸೆಕ್ರೆಟರಿಯಾಗಿ ಹಾಕುತ್ತೀರಿ. ಅವರನ್ನು ನೀವು ಎಂದೋ ಡಿಸ್‌ಮಿಸ್ ಮಾಡಬೇಕಾಗಿತ್ತು. ಮಾನ್ಯ ರಾಮಕೃಷ್ಣ ಹೆಗಡೆಯವರು ಯೋಗ್ಯ ದಾಖಲೆಗಳಿದ್ದರೆ ಅವರಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ನಾವು ಏನನ್ನಾದರೂ ಹೇಳಿದರೆ ಅದಕ್ಕೆ ಸಾಕಷ್ಟು ದಾಖಲೆಗಳಿಲ್ಲದೆ ಹೇಳುವುದಿಲ್ಲ. ನಾವು ಯಾರಮೇಲಾದರೂ. ಏನನ್ನಾದರೂ ನಿರ್ದಿಷ್ಟವಾಗಿ ಹೇಳಿದಾಗ ಅದಕ್ಕೆ ಕಮಿಷನ್‌ನ್ನು ನೇಮಿಸತಕ್ಕಂಥವರು ಮಾನ್ಯ ರಾಮಕೃಷ್ಣ ಹೆಗಡೆಯವರು. ಇವತ್ತು ಸ್ಪಷ್ಟವಾದ ದಾಖಲೆಗಳಿದ್ದರೂ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಡಿವಿಜನಲ್ ಕಮಿಷನರ್‌ರವರು ಹಣವನ್ನು ತಿಂದು ಹೈಕೋರ್ಟ್‌ನವರು ರಿಜೆಕ್ಟ್ ಮಾಡಿದ್ದನ್ನು ಸರ್ಕಾರಕ್ಕೆ ಶಿಫಾರಸು ಮಾಡಿ ತನ್ಮೂಲಕ ಸರ್ಕಾರಕ್ಕೆ ವಂಚನೆ ಮಾಡಿದ್ದಾರೆಂದರೆ ಅವರ ಮೇಲೆ ಏನು ಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ ? ಯಾವುದಾದರೂ ಕಮಿಷನ್‌ನನ್ನು ನೇಮಕ ಮಾಡಿದ್ದೀರಾ ? ಈ ಮಾತನ್ನು ನಾನು ನೇರವಾಗಿ ಕೇಳುತ್ತಿದ್ದೇನೆ. ನಾನು ಒಂದು ಸಂತೋಷದ ಮಾತನ್ನು ಹೇಳುವುದಾದರೆ ನೀವು ಸಾವಕಾಶ ಮಾಡಿದರೂ ಸಹಿತ ಕೆಲಸ ಮಾಡುವಾಗ ಸರಿಯಾಗಿಯೇ ಮಾಡುತ್ತೀರಿ ಎನ್ನತಕ್ಕ ವಿಶ್ವಾಸ ನನಗಿದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಮುನಿಸಿಪಲ್ ಪ್ರೆಸಿಡೆಂಟ್‌ರವರು ತಮ್ಮ ಪಕ್ಷದವರಾದರೂ ಬಹಳ ಛಲೋ ಮಾತನ್ನು ಹೇಳಿದ್ದಾರೆ. ಅವರ ಬಗ್ಗೆ ನಾನು ಯಾವುದೇ ರೀತಿಯ ತಪ್ಪು ಭಾವನೆಯನ್ನೂ ವ್ಯಕ್ತಪಡಿಸುವುದಿಲ್ಲ. ಅವರು ನಿಮಗೆ ಕಾನ್‌ಫಿಡೆನ್‌ಷಿಯಲ್ ಲೆಟರ್‌ನ್ನು ಬರೆದಿದ್ದಾರೆ. ಇದರಲ್ಲಿ ದುಡ್ಡಿನ ಅವ್ಯವಹಾರವಾಗಿದೆ. ಇದರಿಂದಾಗಿ ಅವರು ಈರೀತಿ ಬರೆದಿದ್ದಾರೆ. ಇದರ ಬಗ್ಗೆ ನೀವು ನೇರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಬರೆದಿದ್ದಾರೆ. ಈ ಪತ್ರವನ್ನು ತಾವು ಹುಡುಕಿ ತೆಗೆಯಿರಿ. ನನ್ನ ಹತ್ತಿರವೂ ಅದರ ಕಾಪಿ ಇದೆ. ಆದರೆ ಅದನ್ನು ನಾನು ನಿಮಗೆ ಕೊಡುವುದಿಲ್ಲ. ನಿಮ್ಮ ಹತ್ತಿರ ಇರುವುದನ್ನು ತೆಗೆದು ನಿಜವಾಗಿ ಗದುಗಿನ ಸಂಪತ್ತು ಉಳಿಯುವಂಥ ಕಾರ್ಯವನ್ನು ನೀವು ಮಾಡಬೇಕೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಗುರು ಮಿಠ್‌ಕಲ್‌ನಲ್ಲೂ ಕೂಡ ಕುಡಿಯುವುದಕ್ಕೆ ನೀರು ಇಲ್ಲವೆಂದು ಮಾನ್ಯ ಖರ್ಗೆಯವರು ಹೇಳುತ್ತಿದ್ದಾರೆ ಇಂಥಾದ್ದು ಅನೇಕ ಉದಾಹರಣೆಗಳಿವೆ. ಮಾನ್ಯ ಬೊಮ್ಮಾಯಿಯವರು ಊರಾದ ಹುಬ್ಬಳ್ಳಿ-ಧಾರವಾಡದಲ್ಲೂ ಕೂಡ ಸಾಕಷ್ಟು ನೀರಿಲ್ಲ. ನೀರಾವರಿ ಸಲುವಾಗಿ ನೀವು ಯಾವುದೇ ಕೆಲಸವನ್ನು ಮುಂದಕ್ಕೆ ಹಾಕಿದರೂ ಸಹಿತ ಕುಡಿಯುವ ನೀರಿನ ವ್ಯವಸ್ಥೆಯನ್ನು ಹೆಚ್ಚು ತ್ವರಿತವಾಗಿ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು. ನಿನ್ನೆಯ ದಿವಸ ಮಾನ್ಯ ಧರ್ಮಸಿಂಗ್‌ರವರು ಬಹಳ ಸ್ವಾರಸ್ಯವಾಗಿ ನಿಜವಾದ ಮಾತನ್ನು ಹೇಳಿದ್ದಾರೆ. ಏಕೆಂದರೆ ಅವರು ಆ ಖಾತೆಯ ಮಂತ್ರಿಗಳಾಗಿದ್ದುದರಿಂದ ಹೆಚ್ಚು ಅರ್ಥ ಬರುವಂತೆ ಮಾತನಾಡಿದ್ದಾರೆ. ಆದ್ದರಿಂದ ನಾನು ಅವರ ಮಾತನ್ನು ತುಂಬಾ ಪುಷ್ಟೀಕರಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಗದಗ್ ಮುನಿಸಿಪಾಲಿಟಿಯಲ್ಲಿ ಹಣದ ದುರುಪಯೋಗ ಆಗಿದೆ. ಅದರಲ್ಲಿ ವಿನಾಕಾರಣ ಅಲ್ಲಿಯ ಅಧ್ಯಕ್ಷರನ್ನು ಸೇರಿಸುವುದಕ್ಕೆ ಕೆಲವರು ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ತಾವು ಎನ್‌ಕ್ವೈರಿ ಮಾಡಿದರೆ ಆ ಅಧ್ಯಕ್ಷರದ್ದು ಏನೂ ತಪ್ಪಿಲ್ಲ. ಆದರೆ ಬೇರೆಯವರು ಮಾಡಿರತಕ್ಕ ತಪ್ಪನ್ನು ಮುಚ್ಚಿಹಾಕುವ ಸಲುವಾಗಿ ಅಲ್ಲಿಯ ಅಧ್ಯಕ್ಷರನ್ನೂ ಇದರಲ್ಲಿ ಸೇರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ತಾವು ತನಿಖೆ ಮಾಡಿಸಬೇಕು ಈ ವಿಚಾರ ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ ಮತ್ತು ಲೋಕಾಯುಕ್ತ ಕಮಿಷನ್‌ಗೂ ತಾವು ಇದನ್ನು ಕಳುಹಿಸಿರಬಹುದೆಂದು ನಾನು ಆಶಯ ಮಾಡಿದ್ದೇನೆ. ಉತ್ತಮ ರೀತಿಯಿಂದ ಆಡಳಿತವನ್ನು ನಡೆಸುತ್ತಿರುವ ನಮ್ಮ ಮುನಿಸಿಪಾಲಿಟಿಗೆ ಕೆಟ್ಟ ಹೆಸರು ಬರದಂತೆ ನೋಡಿಕೊಂಡು ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ ಶಿಷ್ಟರಿಗೆ ರಕ್ಷಣೆಯನ್ನು ಕೊಡತಕ್ಕ ಕಾರ್ಯ ತಮ್ಮಿಂದಾಗಬೇಕೆಂದು ನಾನು ಹಾರೈಸುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ವಿಚಾರದಲ್ಲಿ ಹೇಳುವುದಕ್ಕೆ ಹೋದರೆ ಎಷ್ಟು ದಿವಸ ವಾದರೂ ಅದಕ್ಕೆ ಸಾಲುವುದಿಲ್ಲ. ಏಕೆಂದರೆ ಯಾವ ಊರಿನಲ್ಲಿ ನೋಡಿದರೂ ರೋಡುಗಳು ಚೆನ್ನಾಗಿಲ್ಲ. ಆ ರೋಡುಗಳು ಯಾವರೀತಿ ಇವೆ ಎಂದರೆ ಹಿಂದೆ ನಾವು ನಮ್ಮ ಹೊಲ, ಮನೆಗಳಿಗೆ ಹೋಗುವುದಕ್ಕೆ ಇದ್ದಂಥ ರಸ್ತೆಗಳು ಯಾವರೀತಿ ಇದ್ದುವೋ ಅದಕ್ಕಿಂತಲೂ ಕೆಟ್ಟ ಸ್ಥಿತಿಯಲ್ಲಿ ಅವು ಇವತ್ತು ಇವೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಇವತ್ತು ಒಂದು ರಸ್ತೆಯನ್ನು ರಿಪೇರಿ ಮಾಡಿದರೆ ಅದರ ಮಾರನೆಯ ದಿವಸವೇ ಅದು ತಗ್ಗು ಬಿದ್ದಿರುತ್ತದೆ. ಏತಕ್ಕೆ ಈ ರೀತಿ ಆಗಿದೆ ಎಂದು ನಾವು ಕೇಳಿದರೆ ಅವರು ಡಾಂಬರ್ ಕಾಂಕ್ರೀಟ್‌ನ್ನು ಹಾಕುವುದಕ್ಕೆ ಬದಲು ಮಣ್ಣನ್ನು ಹಾಕಿದ್ದಾರೆ ಆದ್ದರಿಂದ ಹೀಗಾಗಿದೆ ಎಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಲ್ಲೇ ಅಡ್ಡಾಡಿ ಇಂಥಾದ್ದನ್ನು

ಪರಿಶೀಲಿಸಬೇಕು, ತನಿಖೆ ಮಾಡಿ ನೋಡುತ್ತಿರಬೇಕು. ಇದನ್ನು ಕೇವಲ ಟೀಕೆ ಮಾಡುವವರ ಮೇಲೆ ಬಿಡದೆ ನೀವು ನಿಜವಾಗಿ ಮುತುವರ್ಜಿ ವಹಿಸಿ ಕೆಲಸ ಮಾಡಿದರೆ ನಿಮಗೇ ವಾಸ್ತವಾಂಶ ತಿಳಿಯುತ್ತದೆಂದು ನಾನು ಹೇಳುತ್ತೇನೆ. ನಮ್ಮ ಮುನಿಸಿಪಾಲಿಟಿಯ ವಿಚಾರದಲ್ಲಿ ಪತ್ರವ್ಯವಹಾರ ಮಾಡಿದ್ದು, ಪತ್ರಿಕೆಗಳಲ್ಲಿ ಬಂದಿದ್ದು, ಅದನ್ನೆಲ್ಲಾ ನಾನು ಇಲ್ಲಿ ಹಾಜರು ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ನೀವು ಇದನ್ನು ತನಿಖೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರೆಂಬ ನಂಬಿಕೆಯಿಂದ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಮೊದಲನೆಯದಾಗಿ ಲೋಕೋಪಯೋಗಿ ಇಲಾಖೆಯ ಬೇಡಿಕೆಯ ಬಗ್ಗೆ ಮಾತನಾಡುತ್ತೇನೆ, ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ದಿವಸಗಳಿಂದ ಅನೇಕ ಜನಮಾನ್ಯ ಸದಸ್ಯರು ಈ ಬೇಡಿಕೆಯ ಮೇಲೆ ಭಾಗವಹಿಸಿ ಮಾತನಾಡಿದ್ದಾರೆ. ಈ ಒಂದು ಇಲಾಖೆ ಯಾವುದೇ ಒಂದು ಸಮಾಜದ ಅಥವಾ ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುವಂಥ ಇಲಾಖೆಯಾಗಿದೆ. ಇದರಿಂದಾಗಿ ಇದರ ಕಾರ್ಯಚಟುವಟಿಕೆಗಳು ಸವಿಸ್ತಾರವಾಗಿ ಬರುವುದು ಉಂಟು ಎಲ್ಲಿ ತಪ್ಪು ಬರುತ್ತದೆ ಅಲ್ಲಿ ಟೀಕೆ ಮಾಡುವುದು ಕೂಡ ಆಗಿದೆ. ಅದೇರೀತಿಯಲ್ಲಿ ಅನೇಕ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಮುಖ್ಯವಾಗಿ ಕೆಲಸಗಳು ಸರಿಯಾಗಿ ನಡೆಯದೆ ಇರುವಾಗ ಕೂಡ ಟೀಕೆ ಮಾಡಿದ್ದಾರೆ. ಈಗ ನಮ್ಮ ಮುಂದಿರತಕ್ಕಂಥ ಕೆಲವಾರು ವಿಷಯಗಳನ್ನು ನಾನು ಪ್ರಸ್ತಾಪ ಮಾಡಿದಾಗ ಇದು ವ್ಯಕ್ತವಾಗುತ್ತದೆ, ಇಷ್ಟು ಮಾತ್ರ ಇಲಾಖೆಯ ವತಿಯಿಂದಾಗಿ ಈ ರಾಜ್ಯದಲ್ಲಿ ಹಿಂದಿನ ಕೆಲವು ವರ್ಷಗಳಲ್ಲಿ ಕೆಲಸಕಾರ್ಯಗಳಾಗಿವೆ ಎನ್ನುವುದನ್ನು ಹೇಳುತ್ತೇನೆ. ಅಧ್ಯಕ್ಷರೇ, ಮಾಹಿತಿ ಪ್ರಕಾರವಾಗಿ ೧೯೫೬ರಲ್ಲಿ ೧೦೦ ಚದುರ ಕಿಲೋ ಮೀಟರ್ ವಿಸ್ತಾರಕ್ಕೆ ೨೨ ಕಿಲೋಮೀಟರ್ ಉದ್ದದ ರಸ್ತೆ ಆಗಿದ್ದುದು ಈಗ ೧೯೮೭ರಲ್ಲಿ ೫೫ ಕಿಲೋಮೀಟರ್ ರಸ್ತೆಯಾಗಿದೆ. ಅಂದರೆ ಈ ೩೦ ವರ್ಷಗಳಲ್ಲಿ ಪ್ರಗತಿಯಾಗಿದ್ದುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಆಗಿದೆ. ನಮ್ಮ ರಾಜ್ಯದ ರಸ್ತೆ ಸಂಪತ್ತು ಈವತ್ತು ಪರಿಶೀಲನೆ ಮಾಡುವಾಗ ೧೯೭೮ ರಿಂದ ೧೯೮೩ರ ವರೆಗೆ ಈ ಐದು ವರ್ಷ, ಮತ್ತೆ ನಮ್ಮ ಸರ್ಕಾರ ಬಂದಮೇಲೆ ೧೯೮೩ ರಿಂದ ೧೯೮೭ರ ವರೆಗೆ ನೋಡಿದಾಗ ಅದರ ಮಾಹಿತಿ ಈ ರೀತಿ ಇದೆ. ೧೯೭೮ರಿಂದ ೮೩ರ ವರೆಗೆ ೧೦೦ ಚದುರ ಕಿಲೋಮೀಟರ್‌ಗೆ ೫ ವರ್ಷದ ಅವಧಿಯಲ್ಲಿ ೪ ಕಿಲೋಮೀಟರ್ ರಸ್ತೆಯಷ್ಟು ಹೆಚ್ಚಾಗುತ್ತಾ ಹೋಗಿದೆ. ಆದರೆ ೧೯೮೩–೮೭, ಈ ಐದು ವರ್ಷದ ಅವಧಿಯಲ್ಲಿ ಹೆಚ್ಚು ಕಿಲೋಮೀಟರ್ ರಸ್ತೆ ಆಗಿದೆ. ಅಂದರೆ ಈ ಐದು ವರ್ಷಗಳಲ್ಲಿ ಇಲಾಖೆ ರಾಜ್ಯದಲ್ಲಿ ರಸ್ತೆಗಳ ಸಂಪರ್ಕದ ಅಭಿವೃದ್ಧಿಯನ್ನು ಹಿಂದಿನ ವರ್ಷಕ್ಕೆ ಹೋಲಿಸಿ ನೋಡಿದಾಗ ರಸ್ತೆ ಸಂಪನ್ಮೂಲಗಳಲ್ಲಿ ಹೆಚ್ಚಿನ ಕೆಲಸವಾಗಿದೆ ಎನ್ನುವುದು ವ್ಯಕ್ತವಾಗುತ್ತದೆ. ೧೯೮೨ ಮಾರ್ಚ್ ಅಂತ್ಯದೊಳಗೆ ಈ ಇಲಾಖೆಯಲ್ಲಿ ಸುಮಾರು ೭೮,೭೭೬ ಕಿಲೋಮೀಟರು ಉದ್ದದ ರಸ್ತೆ ಇದ್ದುದು ಮುಂದೆ ೧೯೮೭ರಲ್ಲಿ ಜಿಲ್ಲಾಪರಿಷತ್ ಆದಮೇಲೆ ಪರಿಸ್ಥಿತಿ ಬದಲಾವಣೆಯಾಗಿದೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯದ ಹೆದ್ದಾರಿಗಳು ೭ ೯೧೨ ಕಿಲೋಮೀ ರ್, ಜಿಲ್ಲಾ ಮುಖ್ಯ ರಸ್ತೆಗಳು ೧೬,೦೧೬ ಕಿಲೋಮೀಟರ್. ಜಿಲ್ಲೆಯ ಇತರೇ ರಸ್ತೆಗಳು, ೭,೦೮೨, ಗ್ರಾಮೀಣ ರಸ್ತೆಗಳು ೪೫,೭೯೮, ಈ ರೀತಿ ಒಟ್ಟು ೭೮ ೭೭೬ ಕಿಲೋಮೀಟರ್ ಇಲಾಖೆಯ ಕೈಯಲ್ಲಿ ಇತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂರಲ್ ರೋಡ್ಸ್ ಏನು ಇದೆ......

ಶ್ರೀ ಎಂ. ಚಂದ್ರಶೇಖರ್.—ಅದನ್ನು ಹೇಳುತ್ತೇನೆ. ೧೯೮೭ರ ವರೆಗೆ ಇದ್ದುದನ್ನು ಹೇಳಿದೆ. ಆದಾದಮೇಲೆ ಜಿಲ್ಲಾಪರಿಷತ್ತಿಗೆ ಹೋಯಿತು. ನಾನು ಒಂದು ವರ್ಷದ್ದಲ್ಲ ಹೇಳುತ್ತಿರುವುದು. ನೀವು ಒಂದು ವರ್ಷದ್ದನ್ನು ಮಾತ್ರ ನೋಡುತ್ತಿದ್ದೀರಿ. ಹೋದ ವರ್ಷ ಯಾವುದೂ ಆಗಿಲ್ಲವೆಂದು ಹೇಳುತ್ತಿದ್ದೀರಿ. ನಾವು ೫ ವರ್ಷಗಳ ಕಾಲ ರಾಜ್ಯವನ್ನು ಆಳಿದ್ದೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು, ಆದರೆ ಹಿಂದೆ ತಾವು ೫ ವರ್ಷ......

೩–೩೦ ಪಿ. ಎಂ.

ಶ್ರೀ ಎಸ್ ಆರ್. ಬೊಮ್ಮಾಯಿ.—೧೯೮೩ ರಿಂದ ಕಂಪ್ಯಾರೆಟೀವ್ ಫಿಗರ್ ಹೇಳುತ್ತಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಏನೂ ಆಗಿಲ್ಲವೆಂದು ಅನೇಕ ದೂರುಗಳಿವೆ. ಅದರ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದೇವೇಗೌಡರ ಕ್ಷೇತ್ರದಲ್ಲಿ ಆಗಿದೆ ಅಷ್ಟು, ಬೇರೆ ಎಲ್ಲಿಯೂ ಕೆಲಸ ಆಗಿಲ್ಲ,

ಶ್ರೀ ಎಂ. ಚಂದ್ರಶೇಖರ್,—೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ ೧೯೮೦ ರಿಂದ ೧೯೮೫ರವರೆಗೆ ಒಟ್ಟು ಜಿಲ್ಲಾ ಮತ್ತು ಇತರ ರಸ್ತೆಗಳಿಗೆ ಎಂದು ಹಣ ವೆಚ್ಚ ಮಾಡಿರುವುದರಲ್ಲಿ ೧೪೪೦ ಲಕ್ಷ ರೂಪಾಯಿಗಳ ಅಂಗೀಕೃತ ವೆಚ್ಚದ ಬದಲಿಗೆ ಪ್ರತ್ಯೇಕವಾಗಿ ಗ್ರಾಮಾಂತರ ಪ್ರದೇಶಗಳ ಎಲ್ಲಾ ರಸ್ತೆಗಳು ಸೇರಿಸುವುದರಿಂದ ೫೭೭೮ ಲಕ್ಷ ರೂಪಾಯಿಗಳು ಅಂದರೆ ಸುಮಾರು ೪೦ ಕೋಟಿ ರೂಪಾಯಿಗಳು ಹೆಚ್ಚಿಗೆ ಈ ಗ್ರಾಮೀಣ ಜಿಲ್ಲಾ ಮತ್ತಿತರ ರಸ್ತೆಗಳ ಅಭಿವೃದ್ಧಿ ಕಾರ್ಯಗಳಿಗೆ ಈ ಹಣ ವೆಚ್ಚವಾಗಿದೆ. ಇದರಲ್ಲಿ ಒಂದು ಅಭಿಪ್ರಾಯ ಏನು ಬಂದಿದೆ ಎಂದರೆ ರಾಷ್ಟ್ರೀಯ ಹೆದ್ದಾರಿಗಳ ಮೇಲೆ ವಾಹನಗಳ ಒತ್ತಡ ಸಮೀಕ್ಷೆ ಪ್ರಕಾರ ಹೆಚ್ಚಾಗುತ್ತಾ ಬಂದಿದೆ. ಜಿಲ್ಲಾ ರಸ್ತೆಗಳ ಮೇಲೆ ವಾಹನಗಳ ಒತ್ತಡ, ಸಂಪರ್ಕ ಒತ್ತಡ ದಿನೇ ದಿನೇ ಹೆಚ್ಚಾಗುತ್ತಿದೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಯಾವ ರೀತಿ ಆಗಬೇಕೋ ಅದೇ ಮಟ್ಟದಲ್ಲಿ ಜಿಲ್ಲೆಯಿಂದ ಅಂದರೆ ತಾಲ್ಲೂಕು ಮತ್ತು ಗ್ರಾಮಗಳಿಂದ ಮುಖ್ಯ ರಸ್ತೆಗಳಿಗೆ ಸಂಪರ್ಕ ಕೂಡಿಸುವ ರಸ್ತೆಗಳ ಅಭಿವೃದ್ಧಿಯಾದರೆ ಅವುಗಳ ಬೆಳವಣಿಗೆ ಚೆನ್ನಾಗಿ ಆಗುತ್ತದೆ, ಇದು ವಾಹನಗಳ ಒತ್ತಡದಿಂದ ಗೊತ್ತಾಗುತ್ತದೆ. ಆದ್ದರಿಂದ ಹೆಚ್ಚಿನ ಹಣವನ್ನು ಈ ಬಾಬಿಗೆ ವೆಚ್ಚ ಮಾಡುವುದಕ್ಕೆ ಕಾರಣವಾಯಿತು. ಅದೇ ರೀತಿ ಗ್ರಾಮೀಣ ರಸ್ತೆಗಳನ್ನು ೧೧೬೧ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕನಿಷ್ಟ ಅಗತ್ಯ ಯೋಜನೆಯ ಕಾರ್ಯಕ್ರಮದಡಿಯಲ್ಲಿ ತೆಗೆದುಕೊಂಡು ಕಳೆದ ೫ ವರ್ಷಗಳಲ್ಲಿ ೧೬೦೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ನಮ್ಮ ಸರ್ಕಾರ ಬಂದಮೇಲೆ ಹರಿಜನವಾಡ ಕೂಡು ರಸ್ತೆಗಳು ಎಂಬ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದು ಅದರ ಪ್ರಕಾರ ೮೪–೮೫ ರಿಂದ ೪೨೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ಇನ್ನೊಂದು ಹೊಸ ಕಾರ್ಯಕ್ರಮ ಹಳ್ಳಿ ಹೆದ್ದಾರಿ ಎಂದು. ಅದಕ್ಕೆ ೧೨.೫೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ಮತ್ತೊಂದು ಹೊಸ ಕಾರ್ಯಕ್ರಮ ಅಂದರೆ ಸೇತುಬಂಧನ ಎಂದು, ಅದಕ್ಕೆ ೪೨ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ಇವೆಲ್ಲ ಹೊಸ ಹೊಸ ಯೋಜನೆಗಳು. ೮೪–೮೫ ರಿಂದ ಗ್ರಾಮಾಂತರ ಪ್ರದೇಶಗಳ ಸಂಪರ್ಕಕ್ಕೆ ಬೇಕಾದ ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ ಕಾರ್ಯವನ್ನು ಹೆಚ್ಚಿನ ಆದ್ಯತೆ ಕೊಟ್ಟು ಮಾಡುತ್ತಿದ್ದೇವೆಂದು ಹೇಳುತ್ತೇನೆ. ಒಟ್ಟಿನಲ್ಲಿ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೬೬ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ತೆಗೆದುಕೊಂಡಂತ ಕಾಮಗಾರಿಗಳು ಪೂರ್ಣವಾಗುವ ವೇಳೆಗೆ ೧೦೪ ಕೋಟಿ ರೂಪಾಯಿಗಳು ಆಗಿರುತ್ತವೆ. ಅಂದರೆ ಸುಮಾರು ೪೦ ಕೋಟಿ ರೂಪಾಯಿಗಳು ಹೆಚ್ಚಿಗೆ ಹಣವನ್ನು ವೆಚ್ಚ ಮಾಡಿ ರಸ್ತೆ ಕಾಮಗಾರಿಗಳನ್ನು ಮಾಡಲಾಗುತ್ತದೆ ಈ ರೀತಿ ಹೆಚ್ಚಾಗುವುದರಿಂದ ಕಷ್ಟವಾಗುತ್ತದೆ ಭೌತಿಕ ಸಾಧನೆಯಾಗಿ ೧೬೦೦ ಕಿಲೋಮೀಟರ್ ಸಾಧಿಸಬೇಕೆಂದು ಗುರಿ ಇಟ್ಟಿದ್ದು ೫ ವರ್ಷಗಳಲ್ಲಿ ೩೪೯೫ ಕಿಲೋಮೀಟರ್‌ಗಳ ರಸ್ತೆ ರಚನೆಯಾಗಿದೆ.

ಅದೇರೀತಿ ರಸ್ತೆಗಳನ್ನು ಉತ್ತಮ ಮಾಡಬೇಕೆಂದು ಹೇಳಿ ಡಾಂಬರ್ ಹಾಕುತ್ತಿದ್ದೇವೆ. ಆದರೆ ೪೫೦ ಕಿಲೋಮೀಟರ್ ಅಂದಾಜಿತ್ತು. ಆದರೆ ೧೩೩೦ ಕಿಲೋಮೀಟರ್‌ನಷ್ಟು ಹಾಕಿದ್ದೇವೆ. ಇನ್ನೂ ಬಹಳಷ್ಟು ಆಗಬೇಕಾಗಿದೆ. ಆದರೂ ಇಷ್ಟು ಮಾತ್ರ ಮಾಡಿದೆ. ಸೇತುವೆಗಳು, ಗುರಿ ಇದ್ದುದು ೬೦. ಆದರೆ ೧೪೪ ಸೇತುವೆಗಳ ನಿರ್ಮಾಣ ಆಗಿದೆ. ೬ನೇ ಪಂಚವಾರ್ಷಿಕ ಯೋಜನೆ ಕೊನೆಯೊಳಗೆ ಲೋಕೋಪಯೋಗಿ ಇಲಾಖೆಯಲ್ಲಿ ೭೬,೩೯೯ ಕಿಲೋಮೀಟರ್ ರಸ್ತೆಗಳ ಪೈಕಿ ೫೭,೨೫೪ ಕಿಲೋಮೀಟರ್‌ನಷ್ಟು ಪಕ್ಕಾ ರಸ್ತೆಗಳು, ೧೯.೦೫೫ ಕಿಲೋಮೀಟರ್‌ನಷ್ಟು ಕಚ್ಚಾ ರಸ್ತೆಗಳು ಉಳಿದಿದೆ. ಅದನ್ನು ಮುಂದೆ ಅಭಿವೃದ್ಧಿ ಮಾಡಬೇಕು ಎಂದು ಯೋಜನೆ ಮಾಡಿದ್ದು ಅದರ ಪ್ರಕಾರ ಈ ವರ್ಷದಲ್ಲಿ ಸರ್ಕಾರದ ಆಜ್ಞೆ ಪ್ರಕಾರ ಸುಮಾರು ೩೦೪೦ ಕಿಲೋಮೀಟರ್ ಉದ್ದ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನು ಮೇಲ್ದರ್ಜೆಗೇರಿಸಿ ರಾಜ್ಯ ಹೆದ್ದಾರಿಯಾಗಿ ಮಾಡಿದ್ದೇವೆ, ಅದೇರೀತಿ ಗ್ರಾಮೀಣ ರಸ್ತೆಗಳನ್ನು ೫೬೬೪ ಕಿಲೋಮೀಟರ್‌ನಷ್ಟು ಉದ್ದದ ರಸ್ತೆಯನ್ನು ಎಂ.ಡಿ.ಆರ್.ರಸ್ತೆಯನ್ನಾಗಿ ಮಾಡಿದ್ದೇವೆ. ರಾಷ್ಟ್ರೀಯ ಹೆದ್ದಾರಿಗಳಿಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ ಆದರೆ ಅದಕ್ಕೆ ಗ್ರಾಮಗಳಿಂದ, ಪ್ರತಿಯೊಂದು ಪ್ರದೇಶದಿಂದ ಇಂಟರ್‌ಲ್ಯಾಂಡ್ ಸಂಪರ್ಕ ಒದಗಿಸಬೇಕು ಎಂದಾಗ ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ರಸ್ತೆಗಳು ಕೂಡ ಅಭಿವೃದ್ಧಿ ಆದಾಗ ಮಾತ್ರ ಸಾಧ್ಯವಾಗುತ್ತದೆಂದು ನಾವು ಈ ವರ್ಷದಲ್ಲಿ ಇಷ್ಟೊಂದು ರಸ್ತೆಗಳನ್ನು ಮೇಲ್ದರ್ಜೆಗೆ ವರ್ಗಾಯಿಸಿರುವುದು,

10. Statement made by the Chief Minister

re · Communal riot at Shidlaghatta

SRI R. VENKATARAMAIAH.—Sir, Some of our collegues who have gone to Shidlaghatta have been assaulted. This is a very serious matter. They have gone on a noble mission. I request the hon. Chief Minister to make a statement on this. After all, they are our own colleagues. They have been hospitalised. It is very unfortunate thing.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ರಮೇಶ್ ಕುಮಾರ್ ಅವರಿಗೆ ಹಾಗೂ ರೋಷನ್ ಬೇಗ್ ಅವರಿಗೆ ತುಂಬಾ ಏಟು ಬಿದ್ದಿದೆ. ಅಲ್ಲಿ ಪರಿಸ್ಥಿತಿ ಏನಿದೆಯೋ ಗೊತ್ತಾಗುತ್ತಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಇನ್‌ಫರ್ಮೇಷನ್ ಇದ್ದರೆ ಈಗ ಅಥವಾ ಅರ್ಧ ಗಂಟೆಬಿಟ್ಟು ಸ್ಟೇಟ್‌ಮೆಂಟ್ ಮಾಡಲಿ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಇಂದು ಬೆಳಿಗ್ಗೆ ಈ ಸದನದ ಸದಸ್ಯರಾದ ಮಾನ್ಯ ರಮೇಶ್ ಕುಮಾರ್ ಅವರು, ಡಾ. ಮಹದೇವಪ್ಪ ಅವರು ಮಾನ್ಯ ರೋಶನ್‌ಬೇಗ್ ಅವರು ಮತ್ತು ಪಕ್ಷದ ಕಾರ್ಯಕರ್ತರಾದ ಮಾನ್ಯ ಸುದರ್ಶನ್ ಅವರು ನಾಲ್ಕು ಜನ ಶಿಡ್ಲಘಟ್ಟಕ್ಕೆ ಹೋಗುವಾಗ ದಾರಿಯಲ್ಲಿ ಅವರ ಮೇಲೆ ಅಸಾಲ್ಟ್ ಮಾಡಿದ್ದು ನಿಜ. ಈಗತಾನೆ ಅವರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದಾರೆ. ನಮ್ಮ ಮಾನ್ಯ ವಾರ್ತಾ ಮಂತ್ರಿಗಳಾದ ಎಂ. ಪಿ. ಪ್ರಕಾಶ್ ಅವರು, ಜೀವರಾಜ ಆಳ್ವ ಅವರು ಮತ್ತು ಕೆಲವು ಜನ ನೋಡಿಕೊಂಡು ಬಂದಿದ್ದಾರೆ. ರಮೇಶ್‌ಕುಮಾರ್ ಅವರಿಗೆ ಬಹಳ ಘಾಸಿಯಾಗಿದೆ. ನಾನೂ ಕೂಡ ಸ್ವಲ್ಪ ಹೊತ್ತಿನಲ್ಲೇ ಹೋಗ ಬೇಕೆಂದಿದ್ದೇನೆ. ಇದು ನಿಜವಾಗಿಯೂ ದುರ್ದೈವದ ಘಟನೆ. ಹೋದ ಉದ್ದೇಶ ಅವರದು ಏನೆಂದರೆ ಅಲ್ಲಿಯ ಜನರನ್ನು ಭೇಟಿಯಾಗಿ ಶಾಂತಿಯನ್ನು ಸ್ಥಾಪನೆ ಮಾಡಬೇಕು ಎಂಬುದು. ಆದರೆ ಹೋಗುವುದಕ್ಕಿಂತ ಮೊದಲೇ ಈ ರೀತಿ ಅವರು ಅಸಾಲ್ಟ್‌ಗೆ ಒಳಗಾಗುತ್ತಾರೆಂದು ಯಾರೂ ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ಪಂಪಾಪತಿ.—ಪೋಲೀಸರನ್ನು ಜಾಸ್ತಿ ಕಳುಹಿಸಿದ್ದೇವೆ ಎಂದು ಹೇಳಿದ್ದಿರಿ. ಆದರೂ...

ಉಪಾಧ್ಯಕ್ಷರು.—ತಾವು ಬೇರೆ ರೂಪದಲ್ಲಿ ಕೇಳಿ ಇವನ್ನು. ಮಾನ್ಯ ಮಂತ್ರಿಗಳು ದಯವಿಟ್ಟು ಮುಂದುವರೆಸಿ.

೧೯೮೮–೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

(ಮುಂದುವರೆದುದು)

ಶ್ರೀ ಎಂ. ಚಂದ್ರಶೇಖರ್.—೭ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿನ ಪ್ರಗತಿಯನ್ನು ನಾನು ತಿಳಿಸಿದೆ. ೭ನೇ ಪಂಚವಾರ್ಷಿಕ ಯೋಜನೆ ಆದಮೇಲೆ ೧೯೮೪–೮೫ರಿಂದ ಮೂರು ವರ್ಷಗಳಲ್ಲಿ ಜಿಲ್ಲಾ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಯೋಜನೆಗೆ ೧೭ ಕೋಟಿ ೭೭ ಲಕ್ಷ ರೂಪಾಯಿಗಳ ವೆಚ್ಚ ಆಗಿತ್ತು. ಇತರೆ ರಸ್ತೆಗಳು ಮತ್ತು ಸೇತುವೆಗಳಿಗೆ ೨೭ ಕೋಟಿ ರೂಪಾಯಿ ವೆಚ್ಚ ಆಗಿತ್ತು. ಗ್ರಾಮೀಣ ಸೇತುವೆಗಳ ಕಾಮಗಾರಿಗಳಿಗೆ ೨೧ ಕೋಟಿ ೭೧ ಲಕ್ಷ ರೂಪಾಯಿ ವೆಚ್ಚ ಆಗಿದೆ. ಇದರಿಂದಾಗಿ ಮೂರು ರಾಜ್ಯ ಹೆದ್ದಾರಿಗಳ ೨೨೦ ಕಿಲೋಮೀಟರ್ ಉದ್ದ ಹೆಚ್ಚಾಯಿತು. ಸೇತುವೆಗಳು ೭೭, ಹಾಗೂ ಜಿಲ್ಲಾ ರಸ್ತೆಗಳು ೫೮೯, ಗ್ರಾಮಾಂತರ ರಸ್ತೆಗಳು ೨೨೨ ಕಿಲೋಮೀಟರ್, ಹರಿಜನವಾಡ ರಸ್ತೆ ೪೯೩.

ಶ್ರೀ ಎಂ. ರಾಮಪ್ಪ.—ತಾವು ಸೇತುವೆಗಳನ್ನು ಕಟ್ಟಿದ್ದೇವೆಂದು ಹೇಳಿದ್ದೀರಿ. ಹಗರಿ ಬ್ರಿಡ್ಜ್ ಮಾಡಲಿಕ್ಕೆ ಸೆಂಟ್ರಲ್ ಫಂಡ್ಸ್ ತೆಗೆದುಕೊಂಡಿದ್ದೀರಿ, ಮೂರು ವರ್ಷಗಳಿಂದ ಏನೂ ಮಾಡಿಲ್ಲ.

ಫೌಂಡೇಷನ್ ಸ್ಟೋನ್ ಅನ್ನು ಮಾನ್ಯ ದೇವೇಗೌಡರು ಹಾಕಿದರು. ಫೌಂಡೇಷನ್ ಸ್ಟೋನ್ ಮಾತ್ರ ಕಾಣುತ್ತಿದೆ. ನೀವು ವಿಷಯಗಳನ್ನು ಬೇರೆ ಕಡೆಗೆ ಡೈವರ್ಟ್ ಮಾಡುತ್ತಿದ್ದೀರಿ.

ಉಪಾಧ್ಯಕ್ಷರು.—ಮಾನ್ಯ ರಾಮಪ್ಪನವರೇ, ತಾವು ಆ ಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಚಂದ್ರಶೇಖರ್.—೫೩ ಹಳ್ಳಿಗಳ ಹೆದ್ದಾರಿಗಳಲ್ಲಿ ಸೇತುಬಂಧನ ಕಾರ್ಯಕ್ರಮದಲ್ಲಿ ಮೂರು ವರ್ಷಗಳಲ್ಲಿ ೬೯೯ ಸೇತುವೆಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿ ೪೫೦ ಸೇತುವೆಗಳನ್ನು ಮುಗಿಸಿದ್ದು ಉಳಿದ ಸೇತುವೆಗಳ ಕೆಲಸಗಳು ನಡೆಯುತ್ತಿವೆ. ಹಿಂದಿನ ವರ್ಷ ೧೯೮೭-೮೮ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಪರಿಷತ್‌ಗೆ ರಸ್ತೆಗಳ ಕೆಲಸ ವರ್ಗಾವಣೆ ಆಯಿತು. ಲೋಕೋಪಯೋಗಿ ಇಲಾಖೆಯಲ್ಲಿ ೨೯, ೩೪೩ ಕಿಲೋಮೀಟರ್ ಉದ್ದದ ರಸ್ತೆ ಇದ್ದರೆ, ೪೭,೬೮೪ ಕಿಲೋಮೀಟರ್ ಉದ್ದ ರಸ್ತೆ ಜಿಲ್ಲಾ ಪರಿಷತ್‌ಗಳಿಗೆ ವರ್ಗಾವಣೆಯಾಗಿದೆ. ಜಿಲ್ಲಾಮಟ್ಟದ ಎಂ.ಡಿ.ಆರ್ ರಸ್ತೆಗಳನ್ನು ಬಿಟ್ಟು. ಕಳೆದ ವರ್ಷ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ವೆಚ್ಚಕ್ಕಾಗಿ ೭೦೦ ಲಕ್ಷ ರೂಪಾಯಿಗಳನ್ನು ಅಂದಾಜು ವೆಚ್ಚದಲ್ಲಿ ಇಡಲಾಗಿತ್ತು. ಅದರಲ್ಲಿ ೫೮೩ ಲಕ್ಷ ರೂಪಾಯಿಗಳು ವೆಚ್ಚವಾಗಿದೆ. ಜಿಲ್ಲಾ ಪರಿಷತ್‌ಗೆ ೧೮೦೦ ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. ಅದರಲ್ಲಿ ೧೭೧೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ, ಕಳೆದ ವರ್ಷ ಸಂಪರ್ಕಕ್ಕೆ ೨೯ ಕೋಟಿ ರೂಪಾಯಿ ಇಲಾಖೆಯ ವತಿಯಿಂದ ವೆಚ್ಚವಾಗಿರುವುದು ಕಂಡುಬರುತ್ತದೆ. ಇದರಿಂದಾಗಿ, ಭೌತಿಕ ಪ್ರಗತಿ ಇಲಾಖೆಯ ವತಿಯಿಂದ ಹೋದ ವರ್ಷ ೧೦೨ ಕಿಲೋಮೀಟರ್ ರಸ್ತೆ ಅಭಿವೃದ್ಧಿಯಾಗಿದೆ. ೧೨೨ ಕಿಲೋಮೀಟರ್ ರಸ್ತೆಗೆ ಡಾಮರು ಹಾಕಲಾಗಿದೆ. ೨೪ ಸೇತುವೆಗಳು ನಿರ್ಮಾಣವಾಗಿವೆ. ಜಿಲ್ಲಾ ಪರಿಷತ್ ಅಂಕಿಅಂಶಗಳು ಬೇರೆ ಇದೆ. ೧೯೮೮-೮೯ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆಗಳ ಕೆಲಸಕ್ಕಾಗಿ ೮.೮೨ ಕೋಟಿ ರೂಪಾಯಿಗಳು ಇವೆ. ಜಿಲ್ಲಾ ಪರಿಷತ್‌ನಲ್ಲಿ ರಸ್ತೆಗಳ ಕೆಲಸಕ್ಕಾಗಿ ೨೧.೦೮ ಕೋಟಿ ರೂಪಾಯಿಗಳು ಇವೆ. ಒಟ್ಟು ೩೦.೬೦ ಕೋಟಿ ರೂಪಾಯಿಗಳ ಅನುದಾನವನ್ನು ಕೊಡುವಂತಹ ತೀರ್ಮಾನವಾಗಿದೆ. ರಸ್ತೆಗಳಿಗಾಗಿ ಈ ವರ್ಷ ೫ ಕೋಟಿ ರೂಪಾಯಿಗಳನ್ನು ಹೆಚ್ಚು ಅನುದಾನವನ್ನು ಕೊಡಲಾಗಿದೆ. ೧೯೮೮ನೇ ಮಾರ್ಚಿನಲ್ಲಿ ೨೬,೦೨೮ ಹಳ್ಳಿಗಳ ಪೈಕಿ ೨೬೩ ಹಳ್ಳಿಗಳನ್ನು ಬಿಟ್ಟು ಮಿಕ್ಕೆಲ್ಲಾ ಹಳ್ಳಿಗಳಿಗೆ ಸಂಪರ್ಕ ಏರ್ಪಾಟಾಗಿದೆ. ೨೬೩ ಹಳ್ಳಿಗಳ ಪೈಕಿ ೫೦೦ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳಂತಹ ೨೨೦ ಹಳ್ಳಿಗಳು ಸೇರಿವೆ. ೫೦೦ಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ೨೭ ಸಾವಿರ ಹಳ್ಳಿಗಳಿಗೆ ಸಂಪರ್ಕ ಏರ್ಪಾಟಾಗಿದೆ. ಸರ್ವಋತು ರಸ್ತೆಗಳು ೧೦,೯೯೨. ಒಳ್ಳೆಯ ಹವಾಗುಣ ಫೇರ್ ವೆದರ್ ರಸ್ತೆಗಳು ೬,೮೪೧. ಕಚ್ಚಾರಸ್ತೆಗಳು ೮೯೯೨ ಸೇರಿದೆ.

೧೯೮೦-೮೧ ರಿಂದ ೧೯೮೮-೮೯ರವರೆಗೆ ಈ ೯ ವರ್ಷಗಳಲ್ಲಿ ದುರಸ್ತಿ ಕಾರ್ಯಗಳು ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ ಎನ್ನುವಂತಹ ದೂರು ಇದೆ. ರಸ್ತೆಗಳಾಗಲೀ, ಸೇತುವೆಗಳಾಗಲೀ ಇವುಗಳ ಕೆಲಸಗಳು ಸರಿಯಾಗಿ ಆಗುತ್ತಿಲ್ಲ ಎನ್ನುವಂತಹದ್ದು ಇದೆ. ಈ ೯ ವರ್ಷಗಳಲ್ಲಿ ಇದಕ್ಕಾಗಿ ೨೩೬ ಕೋಟಿ ರೂಪಾಯಿಗಳು ವೆಚ್ಚವಾಗಿದೆ. ನಂತರ ಈವರೆವಿಗೂ ೨೬೨ ಕೋಟಿ ರೂಪಾಯಿಗಳು ಖರ್ಚಾಗಿವೆ. ಆದರೆ ೮ನೇ ಆರ್ಥಿಕ ಆಯೋಗದ ಶಿಫಾರಸ್ಸಿನ ಪ್ರಕಾರವಾಗಿ ನಮ್ಮ ರಾಜ್ಯದ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕಾಗಿದ್ದರೆ ವರ್ಷಕ್ಕೆ ೧೩೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಆದರೆ ವೆಚ್ಚ ಮಾಡುವಂತಹ ಹಣವನ್ನು ನೋಡಿದರೆ ಇದು ಕಡಿಮೆ, ಆದಕಾರಣ ಇವತ್ತು ನಮ್ಮ ರಸ್ತೆಗಳನ್ನು ಸರಿಯಾದ ಮಟ್ಟದಲ್ಲಿ ಇಲ್ಲದಿರುವುದನ್ನು ಕಾಣಬಹುದು. ದುರಸ್ತಿ ಕೆಲಸಕ್ಕೇ ಇಷ್ಟೊಂದು ಹಣ ಬೇಕಾಗಿದ್ದಾಗ ನಮ್ಮ ಸಂಪನ್ಮೂಲಗಳು ಇನ್ನೆಷ್ಟು ಬೇಕಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬಹುದು.

ಇದೂ ಅಲ್ಲದೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ರಾಮಗಳ ಮೇಲೆ ಹಾದು ಹೋಗುವ ರಸ್ತೆಗಳಿಗೆ ಗ್ರಾಮಗಳ ಎಲ್ಲೆ ಇರುವವರೆಗೂ ಡಾಮರ್‌ನ್ನು ಹಾಕಬೇಕೆಂಬ ತೀರ್ಮಾನವನ್ನು ೧೯೮೬-೮೭ರಲ್ಲಿ ತೆಗೆದುಕೊಂಡಿತು. ಅನೇಕ ರಸ್ತೆಗಳಲ್ಲಿ ವಾಹನಗಳು ಓಡಾಡುವ ಕಾಲ ಬಂದಿರುವಾಗ ಗ್ರಾಮಗಳು ಮತ್ತು ರಸ್ತೆಯ ಅಕ್ಕಪಕ್ಕದಲ್ಲಿರುವ ನಾಗರೀಕರಿಗೆ ತೊಂದರೆಯಾಗುತ್ತದೆ ಎಂಬುದನ್ನು ತಿಳಿದುಕೊಂಡ ಮೇಲೆ ಗ್ರಾಮದ ಎಲ್ಲೆಗಳ ಮಟ್ಟಿಗಾದರೂ ರಸ್ತೆಗಳಿಗೆ ಡಾಮರ್ ಹಾಕಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಇದಕ್ಕಾಗಿ ೪೬ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ೫೩೫ ಗ್ರಾಮಗಳ ಮಧ್ಯದಲ್ಲಿರುವ ರಸ್ತೆಗಳಿಗೆ ಡಾಮರನ್ನು ಹಾಕಿಸಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—೧೯೮೬–೮೭ರಲ್ಲಿ ಈ ಯೋಜನೆಗಾಗಿ ಖರ್ಚು ಮಾಡಿರುವಂತಹ ಹಣ ವೆಷ್ಟು ? ಎಷ್ಟು ಕಿಲೋಮೀಟರ್ ರಸ್ತೆಯನ್ನು ಡಾಮರ್ ಮಾಡಲಾಗಿದೆ ? ಈ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಬೇಕೆಂದು ತೀರ್ಮಾನಿಸಲಾಗಿತ್ತು. ಎಷ್ಟು ಹಣ ಬಿಡುಗಡೆ ಯಾಗಿದೆ ಇವುಗಳಲ್ಲಿ ಎಷ್ಟು ಪೂರ್ತಿಯಾಗಿವೆ ಎಂಬುದನ್ನು ಹೇಳಿ.

ಶ್ರೀ ಎಂ. ಚಂದ್ರಶೇಖರ್.—೫೩೫ ಹಳ್ಳಿಗಳಿಗೆ ಆ ಹಳ್ಳಿಗಳ ಮಧ್ಯದಲ್ಲಿ ಬರುವಂತಹ ರಸ್ತೆಗಳಿಗೆ ಡಾಮರ್ ಅನ್ನು ಹಾಕಿಸಲಾಗಿದೆ. ಅರ್ಧ ಕಿಲೋಮೀಟರ್ ಇರಬಹುದು, ಒಂದು ಕಿಲೋಮೀಟರ್ ಇರಬಹುದು. ವಿಲೇಜ್ ಲಿಮಿಟ್‌ನಲ್ಲಿ ಬರತಕ್ಕ ರಸ್ತೆಗಳು, ೧೯೮೭–೮೮ನೇ ಸಾಲಿನಲ್ಲಿ ೫೦ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಬಿಡುಗಡೆ ಮಾಡಲಾಗಿದೆ. ಎಷ್ಟು ಕಿಲೋಮೀಟರ್ ರಸ್ತೆಯನ್ನು ಈ ಯೋಜನೆಯಲ್ಲಿ ಡಾಮರ್ ಮಾಡಲಾಗಿದೆ ಎಂಬುದರ ಮಾಹಿತಿ ಇನ್ನೂ ಬಂದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—೫೦ ಕಿಲೋಮೀಟರ್ ರಸ್ತೆಗೆ ಡಾಮರ್ ಮಾಡಿಸಬಹುದಷ್ಟೆ.

ಶ್ರೀ ಎಂ. ಚಂದ್ರಶೇಖರ್.—ಈ ರೀತಿಯ ಕೆಲಸಗಳನ್ನು ಮಾಡಿದ್ದೇವೆ. ಅವರ ಪ್ರಗತಿಯನ್ನು ನೋಡಬೇಕಾಗಿದೆ. ೭ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಿ ಇಲ್ಲಿಯವರೆಗೆ ೩ ವರ್ಷಗಳಾಗಿವೆ. ಸಂಪರ್ಕದ ಬಾಬಿನಲ್ಲಿ ಸಾಕಷ್ಟು ಕೆಲಸಗಳಾಗಿವೆ. ಆದರೆ ನಾನು ಈಗಾಗಲೇ ಹೇಳಿದ ಹಾಗೆ ಕಚ್ಚಾ ರಸ್ತೆಗಳೇ ಬಹುಭಾಗ ಇದೆ. ಅವುಗಳನ್ನೆಲ್ಲಾ ಪಕ್ಕಾ ರಸ್ತೆಗಳಾಗಬೇಕಾದರೆ ಬಹಳಷ್ಟು ಹಣದ ಅಗತ್ಯ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಏನು ಮಾಡುತ್ತಿದ್ದೀರಿ ಸರ್ಕಾರ ಏನು ಮಾಡುತ್ತಿದೆ ಎಂಬುದನ್ನು ಹೇಳಿ. ಹಣವನ್ನು ಕೊಡುತ್ತಿದ್ದೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ —ನಿಜ ಹೇಳಬೇಕಾದರೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೇ ಬಿಡಬಾರದು, ಹೊಸದಾಗಿ ಈ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ನಾನು ಈ ಮಾತನ್ನು ಟೀಕೆ ಮಾಡುವುದಕ್ಕೋಸ್ಕರ ಹೇಳುತ್ತಿಲ್ಲ. ಇವರು ಮಾಡಿರುವಂತಹ ಎಷ್ಟೋ ರಸ್ತೆಗಳ ಆಸ್‌ಫಾಲ್ಟ್ ಎಲ್ಲಾ ಹಾಳಾಗಿ ಇವತ್ತು ಆ ರಸ್ತೆಗಳೆಲ್ಲಾ ಮಣ್ಣಿನ ರಸ್ತೆಗಳಾಗಿವೆ.

ಉಪಾಧ್ಯಕ್ಷರು —ಮಂತ್ರಿಗಳ ಉತ್ತರ ಮುಗಿದ ಮೇಲೆ ವಿವರಣೆಯನ್ನು ಕೇಳಿ. ಮಧ್ಯದಲ್ಲಿ ಕೇಳಬಾರದು.

ಶ್ರೀ ಬಿ. ಬಸವಲಿಂಗಪ್ಪ.—ಮಂತ್ರಿಗಳು ಉತ್ತರ ಕೊಡುವಾಗ ನಾವು ಏನು ಕೇಳಿದ್ದೇವೆ ಅದಕ್ಕೆ ಅವರು ಉತ್ತರ ಕೊಡಬೇಕು.

ಉಪಾಧ್ಯಕ್ಷರು.—ತಾವು ಸ್ವಲ್ಪ ದಯವಿಟ್ಟು ಕೂಡಿ. ಅವರ ಉತ್ತರ ಮುಗಿಯಲಿ.

ಶ್ರೀ ಕೆ. ಮಲ್ಲಪ್ಪ.—ಅವರ ಉತ್ತರ ಪೂರ್ಣ ಮುಗಿದಿಲ್ಲ, ಹೇಗೆ ಹೇಳುತ್ತಾರೆ ?

ಶ್ರೀ ಎಂ. ಚಂದ್ರಶೇಖರ್ —ಅಂಕಿ ಅಂಶಗಳ ಪ್ರಕಾರವಾಗಿ ಆಗಿರುವಂತಹ ಕೆಲಸವನ್ನು ಆಗಿಲ್ಲ ವೆಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಯಾವುದು ಸಿವಿಲ್ ವರ್ಕ್ಸ್ ಇದೆ ಅದನ್ನು ಮುಚ್ಚಿಡು ವುದಕ್ಕೆ ಆಗುವುದಿಲ್ಲ. ಬೇರೆ ಇಲಾಖೆಗಳಲ್ಲಿ ಮುಚ್ಚಿಡುವುದಕ್ಕೆ ಸಾಧ್ಯವಾದರೂ ಇಲ್ಲಿ ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ಸರಿಯಾಗಿದ್ದರೆ ಚೆನ್ನಾಗಿ ಕಾಣುತ್ತದೆ, ಸರಿಯಿಲ್ಲದಿದ್ದರೆ ಮಾರನೆಯ ದಿವಸವೇ ಹೋಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಕಂಡರೆ ನಮಗೆ ಬಹಳ ಸಂಕಟವಾಗುತ್ತದೆ. ಆದರೆ ಏನು ಮಾಡುವುದು ?

ಶ್ರೀ ಎಂ. ಚಂದ್ರಶೇಖರ್.—ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಹೇಳುವುದಾದರೆ, ೧೬೮ ಕಿಲೋಮೀಟರ್ ಉದ್ದ ರಸ್ತೆ ನಮ್ಮ ಇಲಾಖೆಯ ವಶದಲ್ಲಿದೆ. ಹಿಂದಿನ ವರ್ಷ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–೪, ಬೆಂಗಳೂರು–ಪೂನ ರಸ್ತೆಯಲ್ಲಿ ನೆಲಮಂಗಲ–ಬೆಂಗಳೂರುವರೆಗೆ ರಸ್ತೆ ಕಾಮಗಾರಿ ಕೆಲಸ ಪೂರ್ಣವಾಗಿದೆ. ಯಶವಂತಪುರ ಸಮೀಪದಲ್ಲಿ ಕಿರ್ಲೋಸ್ಕರ್ ಹಾಗೂ ಸೋಪ್ ಫ್ಯಾಕ್ಟರಿ ಎದುರು ೩೦ ಲಕ್ಷ ರೂಪಾಯಿ ವೆಚ್ಚದಲ್ಲಿ ಸಬ್ ವೇ ನಿರ್ಮಾಣ ಕೆಲಸ ನಡೆಯುತ್ತಿದೆ. ಆ ಕೆಲಸ ಈ ವರ್ಷದಲ್ಲಿ ಮುಗಿಯುತ್ತದೆ. ಹೆದ್ದಾರಿಯ ಅಕ್ಕಪಕ್ಕದ ಸರ್ವೀಸ್ ರಸ್ತೆಗಳ ಕೆಲಸಕ್ಕೆ ೧೯೮೮–೮೯ನೇ ಸಾಲಿನಲ್ಲಿ

೧೩೦ ಲಕ್ಷ ರೂಪಾಯಿಗಳಿಗೆ ಕಾಮಗಾರಿಯನ್ನು ಒಪ್ಪಿಸಲಾಗಿದೆ. ಅವುಗಳನ್ನು ಈ ವರ್ಷ ತೆಗೆದು ಕೊಂಡು ಮಾಡುತ್ತೇವೆ. ನಮಗೆ ಅನೇಕ ವರ್ಷಗಳಿಂದ ಪೂನ ರಸ್ತೆಯಲ್ಲಿ ವಾಹನಗಳ ಒತ್ತಡ ಬಹಳ ಇರುತ್ತಿತ್ತು. ಬೆಂಗಳೂರು ನಗರಕ್ಕೆ ಹೊರಗಡೆಯಿಂದ ಬರುವ ಜನರಿಗೆ ಅರ್ಥವಾಗುತ್ತಿತ್ತು. ಅವರು ಎಲ್ಲಿಂದ ಬರುತ್ತಿದ್ದರೋ ಅಷ್ಟು ಸಮಯವನ್ನು ನೆಲಮಂಗಲದಿಂದ ಬೆಂಗಳೂರಿಗೆ ಬರಬೇಕಾದರೆ ತೆಗೆದುಕೊಳ್ಳುತ್ತಿದ್ದರು, ಅಷ್ಟು ಕಾಲ ಹಿಡಿಯುತ್ತಿತ್ತು, ಇವತ್ತು ಸುವ್ಯವಸ್ಥಿತ ರಸ್ತೆಯಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅದು ನಿಮ್ಮ ಹಣ ಅಲ್ಲ. ಮಂತ್ರಿಗಳು ರಾಜ್ಯದ ಪರವಾಗಿ ಉತ್ತರ ಕೊಡಲಿ. ನೆಲಮಂಗಲದ ರಸ್ತೆ ಉತ್ತರ ಬೇಡ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರು ಬೆಂಗಳೂರಿನ ಯಲಹಂಕ ಕ್ಷೇತ್ರವನ್ನು ರೆಪ್ರಸೆಂಟ್ ಮಾಡುತ್ತಿದ್ದಾರೆ. ಅದು ರಾಜ್ಯದ ಭಾಗವಲ್ಲವೆ? ನೆಲಮಂಗಲದ ಏರಿಯಾ ಇವರ ಕ್ಷೇತ್ರಕ್ಕೆ ಬರುತ್ತದೆ, ಅಂಕೋಲ-ಹುಬ್ಬಳ್ಳಿ-ಬಳ್ಳಾರಿ ರಸ್ತೆಗಳನ್ನು ಉತ್ತಮ ಪಡಿಸುವುದಕ್ಕೆ ೧೦೦ ಕೋಟಿ ರೂಪಾಯಿಗಳ ಅಂದಾಜು ಯೋಜನೆಯಿದೆ. ಅದಕ್ಕೆ ಸಮೀಕ್ಷೆ ಕಾರ್ಯ ನಡೆಸುವುದಕ್ಕೋಸ್ಕರ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಹಣವನ್ನು ಪಡೆಯುವುದಕ್ಕೆ ಪ್ರಾವಿಜನ್ ಮಾಡಿಕೊಂಡು ೪೮ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸಮೀಕ್ಷೆ ನಡೆಸುವುದಕ್ಕೆ ರೈಟ್ಸ್ ಏಜೆನ್ಸಿಗೆ ವಹಿಸಿಕೊಡಲಾಗಿದೆ. ಈ ಬಗ್ಗೆ ವಿವರವಾದ ಪ್ಲಾನ್ ಎಸ್ಟಿಮೇಟ್ ಕೊಡುವುದಕ್ಕೆ ಕೇಳಿದ್ದೇವೆ. ೧೦೦ ಕೋಟಿ ರೂಪಾಯಿಗಳ ಕೆಲಸ ಮಾಡುವುದಕ್ಕೆ ಅವರು ಸಧ್ಯದಲ್ಲಿಯೇ ಎಸ್ಟಿಮೇಟ್ ಸರ್ವೆ ಕೆಲಸ ಇವುಗಳೆಲ್ಲದರ ಬಗ್ಗೆ ಒಂದು ವರದಿಯನ್ನು ಕೊಡುತ್ತಾರೆ. ಅವರಿಗೆ ಈ ಕೆಲಸ ಮಾಡುವುದಕ್ಕೆ ೪೮ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಹಾಗೆಯೇ ಬೆಂಗಳೂರು-ಮೈಸೂರು ರಸ್ತೆಯನ್ನು ಎಕ್ಸ್‌ಪ್ರೆಸ್‌ವೇ, ನಾಲ್ಕು ಲೈನುಗಳ ಎಕ್ಸ್‌ಪ್ರೆಸ್‌ವೇ ಮಾಡುವ ಬಗ್ಗೆ ಸಮೀಕ್ಷೆಯ ವರದಿಯನ್ನು ಕೊಡುವುದಕ್ಕೆ ಇಂಟರ್ ಕಾಂಟಿನೆಂಟಲ್ ಕನ್ಸಲ್‌ಟೆಂಟ್‌ನವರಿಗೆ ೧೫ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಅವರಿಂದ ವರದಿಯನ್ನು ಪಡೆಯುವುದು ಇದೆ. ಇದರ ಅಂದಾಜು ವೆಚ್ಚ ೮೦ ಕೋಟಿ ರೂಪಾಯಿಗಳು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಹೀಗೆ ಏಕೆ ಮಾಡಿದಿರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮವರನ್ನೇ ಉಪಯೋಗ ಮಾಡಿಕೊಳ್ಳಿ.

ಶ್ರೀ ಎಂ. ಚಂದ್ರಶೇಖರ್.—೨೧ನೇ ಶತಮಾನಕ್ಕೆ ಹೋಗುವ ಜನ ನಾವು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೀಗೆ ಅಡಚಣೆ ಮಾಡಿದರೆ ಹೇಗೆ? ತಾವೆಲ್ಲಾ ಹಿರಿಯ ಸದಸ್ಯರು ಇದ್ದೀರಿ, ನಂತರ ಬೇಕಾದರೆ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಇದು ಗುಮಾನಿಗೂ ಆಸ್ಪದ ಆಗುತ್ತದೆ. ಇದನ್ನು ಪಬ್ಲಿಷ್ ಮಾಡಿ ಟೆಂಡರ್ ಕರೆಯಬೇಕಿತ್ತು. ಅದನ್ನು ಮಾಡಿದ್ದೀರಾ?

ಶ್ರೀ ಎಂ. ಚಂದ್ರಶೇಖರ್.—ಅದನ್ನು ಮಾಡಿಯೇ ಕೊಟ್ಟಿರುವುದು. ನಮ್ಮಲ್ಲಿ ಕಟ್ಟಡಗಳ ವಿಭಾಗ ಇದೆ. ೧೯೮೦-೮೧ ರಿಂದ ೧೯೮೬-೮೭ರ ವರೆಗೆ ಒಟ್ಟು ೧೦೦.೩೮ ಕೋಟಿ ಬಂಡವಾಳ ವೆಚ್ಚವಾಗಿರತಕ್ಕಂಥ ಕಟ್ಟಡಗಳ ಒಂದು ನಿರ್ವಹಣೆಯನ್ನು ಈ ಇಲಾಖೆ ತೆಗೆದುಕೊಂಡಿದೆ. ಇದರಲ್ಲೂ ಇಷ್ಟೆ ಇಲ್ಲಿಯೂ ಅಷ್ಟೆ. ಕಟ್ಟಡಗಳಲ್ಲಿ ೧೯೭೭-೮೩ರಲ್ಲಿ ಆಗಿರುವುದಕ್ಕಿಂತ ಹೆಚ್ಚಿಗೆ ಈ ೧೯೮೩-೮೭ರಲ್ಲಿ ಆಗಿದೆ. ಅಂದರೆ ವಾರ್ಷಿಕವಾಗಿ ಈ ಹಿಂದೆ ೨೨.೩೦ ಕೋಟಿ ಆಗಿದ್ದರೆ ಈಗ ಈ ನಾಲ್ಕು ವರ್ಷಗಳಲ್ಲಿ ೪೩.೧೧ ಕೋಟಿ ವೆಚ್ಚ ಆಗಿದೆ. ಅಂದರೆ ಎರಡರಷ್ಟು ಈ ಕಟ್ಟಡಗಳಲ್ಲಿ ವೆಚ್ಚ ಕಾಮಗಾರಿಗಳಲ್ಲಿ ಆಗಿದೆ. ಈ ಇಲಾಖೆಯಲ್ಲಿ ಈಗ ಕೆಲವು ಕಡೆ ಕಾಲೇಜು ಅಂದರೆ ಜೂನಿಯರ್ ಕಾಲೇಜಿನ ಕಟ್ಟಡಗಳು ಮಾತ್ರ ಉಳಿದಿರುವುದು. ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆ ಕಟ್ಟಡಗಳು ಮತ್ತು ಇಲಾಖೆಗಳ ಆಡಳಿತ ಕಟ್ಟಡಗಳು, ಅಡ್ಮಿನಿಸ್ಟ್ರೇಟಿವ್ ಬಿಲ್ಡಿಂಗ್ಸ್ ಇಷ್ಟು ಮಾತ್ರ ಉಳಿದಿದೆ. ಮಿಕ್ಕ ಎಲ್ಲಾ ಕೆಲಸಗಳು ಜಿಲ್ಲಾ ಪರಿಷತ್‌ಗಳಿಗೆ ವರ್ಗಾವಣೆ ಆಗಿದೆ. ಇದರಲ್ಲಿ ಕೆಲಸ ಕಾರ್ಯಗಳು ಆಗಬೇಕಾಗಿರುವುದು ಇದು. ಈ ಬಗ್ಗೆ ಒತ್ತಾಯ ಈ ಸಭೆಯಲ್ಲಿ ಬಂದಿದೆ. ಸರಿಯಾದ ರೀತಿಯಲ್ಲಿ ಕಟ್ಟಡಗಳ ದುರಸ್ತಿಯಾಗಲೀ ಆಗಿಲ್ಲ ಮತ್ತು

ಹೊಸ ಕಟ್ಟಡ ಕೆಲಸ ಆಗಿಲ್ಲವೆಂದು ಹೇಳಿದ್ದಾರೆ. ಈಗ ಆಗಬೇಕಾಗುವುದಕ್ಕೆ ಪ್ರಯತ್ನ ಪಡಬೇಕಾಗುತ್ತದೆ. ಈ ಇಲಾಖೆಯ ಅಡಿಯಲ್ಲಿ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ಎನ್ನುವ ಒಂದು ಸಂಸ್ಥೆ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಕಟ್ಟಡಗಳು ಮುಗಿಯಿತಾ? ೪೦೨೨ ಕಟ್ಟಡಗಳು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿದ್ದು ಇವೆ. ಇವುಗಳಲ್ಲಿ ಎಷ್ಟು ಕಂಪ್ಲೀಟ್ ಆಗಿದೆ ಮತ್ತು ಎಷ್ಟು ಪೂರ್ಣ ಆಗಬೇಕಾಗಿದೆ ?

ಶ್ರೀ ಎಂ. ಚಂದ್ರಶೇಖರ್.—ಇವು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಆಗಿವೆ. ಬಾಕಿ ಉಳಿದಿರುವುದು ಏನೇ ಇದ್ದರೂ ಬಹಳ ಕಡಿಮೆ.

ಶ್ರೀ ಎಂ. ರಾಮಪ್ಪ.—ಐದು ವರ್ಷ ಆಯಿತು. ಒಂದು ಸಿಂಗಲ್ ರೂಮ್ ಕೂಡ ಕೊಟ್ಟಿಲ್ಲ.

ಉಪಾಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಚಂದ್ರಶೇಖರ್.—ಅನೇಕ ಕಟ್ಟಡಗಳು ಜಿಲ್ಲಾ ಪರಿಷತ್ತುಗಳಿಗೆ ಹೋಗಿರುವುದರಿಂದ ಈ ಕೆಲಸಗಳು ಮುಂದೆ ಜಿಲ್ಲಾ ಪರಿಷತ್ತುಗಳಲ್ಲಿ ಆಗುತ್ತವೆ ಹೋದವರ್ಷ ೨೫ ಕೋಟಿ ಮತ್ತು ಈ ವರ್ಷ ೩೦ ಕೋಟಿ ಕೊಟ್ಟಿದ್ದೇವೆ. ಅದೇ ರೀತಿ ಹೆಚ್ಚು ಹೆಚ್ಚು ಹಣ ಬಿಡುಗಡೆಯಾಗುತ್ತದೆ. ಆದ್ದರಿಂದ ಜಿಲ್ಲಾ ಪರಿಷತ್ತುಗಳ ವತಿಯಿಂದ ಕಾಮಗಾರಿಗಳು ನಡೆಯುತ್ತಿವೆ.

೪-೦೦ ಪಿ.ಎಂ.

ಜಿಲ್ಲಾ ಪರಿಷತ್ತಿನಿಂದ ಕಾಮಗಾರಿ ಕೆಲಸಗಳು ನಡೆಯುತ್ತಿವೆ. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ರಚನೆಯಾದ ಉದ್ದೇಶ ತಮಗೆ ಗೊತ್ತಿದೆ. ಒಂದನೆಯದು, ಖಾಸಗಿ ಗುತ್ತಿಗೆದಾರರು, ಏನಾದರೂ ಪರತ್ತುಗಳನ್ನು ಪೂರ್ಣಗೊಳಿಸದೇ, ಕೆಲಸಗಳನ್ನು ತೆಗೆದುಕೊಂಡು ಹೆಚ್ಚು ದರಗಳನ್ನು ಡಿಮ್ಯಾಂಡ್ ಮಾಡಿದಲ್ಲಿ, ಅದನ್ನು ತಪ್ಪಿಸುವ ಸಲುವಾಗಿ ಈ ಸಂಸ್ಥೆ ಮುಖಾಂತರ ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಪ್ರಾರಂಭಿಸಲಾಯಿತು. ಟೆಂಡರ್ ಹಾಕುವ ಸಮಯದಲ್ಲಿ ಎಲ್ಲಾ ಖಾಸಗಿ ಗುತ್ತಿಗೆದಾರರೇ ಇದ್ದಾಗ ಅವರುಗಳು ಒಂದು ಕಾಮಗಾರಿಗೆ ಹೆಚ್ಚು ಅಂದಾಜು ವೆಚ್ಚವನ್ನು ತೋರಿಸಬಹುದು ಎಂಬ ಕಾರಣಕ್ಕಾಗಿ, ಅಂತಹ ಕಾಮಗಾರಿಕೆಗಳನ್ನು ಸರ್ಕಾರದಿಂದ ಈ ಸಂಸ್ಥೆಯೇ ತೆಗೆದುಕೊಂಡರೆ ಆ ಕಾಮಗಾರಿ ಹಣ ಎಷ್ಟಾಗುತ್ತದೆ ಎನ್ನುವುದನ್ನು ಸರಿಯಾಗಿ ನಿಗದಿ ಮಾಡುತ್ತಾರೆ ಮತ್ತು ಖಾಸಗಿಯವರು ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಳ್ಳಬಾರದು ಎನ್ನುವ ಉದ್ದೇಶದಿಂದ ಕರ್ನಾಟಕ ನಿಗಮದ ರಚನೆಯಾಗಿದೆ, ಇದರಲ್ಲಿ ಎರಡು ಕೋಟಿ ರೂಪಾಯಿಗಳ ಷೇರು ಬಂಡವಾಳವಾಗಿ ಈ ನಿಗಮಕ್ಕೆ ಇಟ್ಟಿದ್ದು ಇದುವರೆಗೆ, ಅಂದರೆ ೧೯೮೭-೮೮ರ ವೇಳೆಗೆ ೧೪೦ ಲಕ್ಷ ರೂಪಾಯಿಗಳ ಬಂಡವಾಳವನ್ನು ಕೊಟ್ಟಿದ್ದೇವೆ......

SRI B. BASAVALINGAPPA.—Rs. 2.25 crores have already been given to this institution by the Government. What is the turnover now ? What is the balance-sheet now ?

ಶ್ರೀ ಎಂ. ಚಂದ್ರಶೇಖರ್.—ಈ ಸಂಸ್ಥೆ ೧೯೬೮ರಲ್ಲಿ ಪ್ರಾರಂಭವಾಗಿದ್ದು, ಮೂರು ವರ್ಷಗಳು ೨.೭೩ ಕೋಟಿ ರೂಪಾಯಿಗಳ ನಷ್ಟ ಅನುಭವಿಸಿದೆ. ಈ ನಷ್ಟ ಬಹಳ ಹಿಂದಿನ ಕಾಲದಿಂದ ಬಂದಿರುವುದು. ಕಳೆದ ವರ್ಷದಿಂದ ಇದು ತನ್ನ ಕೆಲಸವನ್ನು ಉತ್ತಮ ಮಾಡಿಕೊಂಡಿದೆ.

SRI B. BASAVALINGAPPA.—Very good. It has easten up the capital: ಇದಕ್ಕೆ ಯಾವ ಯಾವ ಅಧಿಕಾರಿಗಳು ಕಾರಣರು ಎಂಬುದನ್ನೂ ಹೇಳಿ......

ಶ್ರೀ ಎಂ. ಚಂದ್ರಶೇಖರ್.—೧೯೮೪-೮೫ರಲ್ಲಿ ಟರ್ನ್ ಓವರ್ ೧೫೦ ಲಕ್ಷ ಇದ್ದುದು ಇವತ್ತು ೭೪೧ ಲಕ್ಷ ಆಗಿದೆ. ಇದರಿಂದಾಗಿ ೧೯೮೫-೮೬ರಲ್ಲಿ ೩೧ ಲಕ್ಷ ರೂಪಾಯಿಗಳ ಲಾಭ ಬಂದಿದೆ. ಮತ್ತು ೧೯೮೬-೮೭ರಲ್ಲಿ ೧೩.೪೩ ಲಕ್ಷ ಲಾಭ ಬಂದಿದೆ. ೧೯೮೭-೮೮ರಲ್ಲಿ ಏನಾಗಿದೆಯೋ ಗೊತ್ತಿಲ್ಲ. ಈ ಮೂರು ವರ್ಷದಲ್ಲಿ ಈ ನಿಗಮ ಇರುವುದರಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾ ಇದೆ ಎನ್ನುವುದನ್ನು ನಾವು ನೋಡಬಹುದು. ಉದಾಹರಣೆಗೆ ಎರಡು ಕೆಲಸಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಷ್ಟ್ರೀಯ ಹೆದ್ದಾರಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಮುಖ್ಯಮಂತ್ರಿಗಳ ಬ್ರಾಂಚ್, ಈ ಕರ್ನಾಟಕ ನಿಗಮ ಮಾನ್ಯ ದೇವೇಗೌಡರ ಬ್ರಾಂಚು.....

ಶ್ರೀ ಎಂ. ಚಂದ್ರಶೇಖರ್,— ಮಾನ್ಯ ದೇವೇಗೌಡರು ಮಂತ್ರಿಗಳಾಗಿದ್ದಾಗ ರಾಷ್ಟ್ರೀಯ ಹೆದ್ದಾರಿ ಕೆಲಸಗಳು ಆಗಿದೆ. ಆ ಮೇಲೆ ಮತ್ತೊಂದು ಬೆಳಗಾಂ ನಾನು ಒಂದು ಸಾರಿ ಹೋಗಿದ್ದೆ. ಅಲ್ಲಿ ೫೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ವಾಣಿಜ್ಯ ಸಂಕೀರ್ಣವನ್ನು ಬಹಳ ಉತ್ತಮ ಮಟ್ಟದಲ್ಲಿ ನಿಗದಿತ ವೇಳೆಯೊಳಗೇ ಕಟ್ಟಿದ್ದಾರೆ. ಆ ಕಟ್ಟಡವನ್ನು ನೀವೂ ನೋಡಬೇಕು ಇದರ ಕಾರ್ಯಾಚರಣೆಯನ್ನು ಹೆಚ್ಚು ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಆಗಮಾತ್ರ ಇದು ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ರಾಜ್ಯ ಸರಕಾರದ ಮೂಲ ಬಂಡವಾಳದಿಂದ ರಚನೆಯಾಗಿರ ತಕ್ಕಂಥ ಈ ಸಂಸ್ಥೆಯನ್ನು ಇಟ್ಟುಕೊಳ್ಳಬಾರದು, ಇದನ್ನು ಮುಚ್ಚಬೇಕೆಂದರೆ ನಾವು ಯಥಾಪ್ರಕಾರ ಖಾಸಗಿ ಸಂಸ್ಥೆಗಳ ಮೊರೆ ಹೋಗಬೇಕಾಗುತ್ತದೆ. ೧೯೮೪-೮೫ರಿಂದ ಇದರ ಪರಿಸ್ಥಿತಿ ಉತ್ತಮವಾಗುತ್ತಿದೆ, ಹಿಂದೆ ಈ ರೀತಿ ಇರಲಿಲ್ಲ. ಹಿಂದೆ ನೀವು ಅಧಿಕಾರ ವಹಿಸಿಕೊಂಡಿದ್ದಾಗ ಈ ರೀತಿ ಇತ್ತೋ ಇಲ್ಲವೋ ಗೊತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಆಗಲೂ ಅಷ್ಟೇ ಕೆಲಸ, ಈಗಲೂ ಅಷ್ಟೇ ಕೆಲಸ. ಅವರಿಗೆ ಕೆಲಸ ಕೊಟ್ಟು ಮಾಡಿಸಿ. ಆಗ ಸರಿಯಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಹಿಂದೆ ೧೫೦ ಲಕ್ಷ ರೂಪಾಯಿಗಳ ವಹಿವಾಟು ಇದ್ದುದು. ಈಗ ೭೪೧ ಲಕ್ಷ ರೂಪಾಯಿಗಳಾಗಿದೆ. ಹಿಂದೆ ಏನೂ ಇರಲಿಲ್ಲ. ಇದು ಇನ್ನೂ ಹೆಚ್ಚಾಗಬೇಕು. ಇಲಾಖೆಯ ಕೆಲಸ ಕಾರ್ಯಗಳು ಇದರ ಮೂಲಕ ನಡೆಯುತ್ತಿದೆ. ನಾನು ಕೊಟ್ಟಿರುವಂತಹ ಅಂಕಿ ಅಂಶಗಳ ಮೂಲಕ, ಕಳೆದ ಐದು ವರ್ಷಗಳಲ್ಲಿ ಸಾಕಷ್ಟು ಸಮರ್ಪಕವಾಗಿ ಕಟ್ಟಡಗಳ ಕೆಲಸದಲ್ಲಿ ಪ್ರಗತಿಯಾಗಿದೆ. ಹೊಸ ಹೊಸ ಯೋಜನೆಗಳನ್ನು ನಾವು ಹಾಕಿಕೊಂಡು ಇಲಾಖೆಯ ಮುಖಾಂತರ ಕಾರ್ಯಗತ ಮಾಡುತ್ತಿದ್ದೇವೆ. ಗ್ರಾಮೀಣ ಪ್ರದೇಶಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಕಾಮಗಾರಿಗಳನ್ನು ಮಾಡುತ್ತಿರುವುದು ಇದರಿಂದ ಗೊತ್ತಾಗುತ್ತದೆ.

ಶ್ರೀ ಧರ್ಮಸಿಂಗ್.—ಗುಲಬರ್ಗಾದಲ್ಲಿ ಮಿನಿ ವಿಧಾನಸೌಧದ ಕೆಲಸ ಸ್ಟಾಪ್ ಆಗಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಹೇಳಿರಿ.

ಉಪಾಧ್ಯಕ್ಷರು.—ಉತ್ತರ ಮುಗಿದ ಮೇಲೆ ಕೇಳಿರಿ, ಆಗ ಸರಿಯಾಗಿ ಹೇಳಬಹುದು. ಈ ರೀತಿ ಆದರೆ ಮುಗಿಸುವುದು ಹೇಗೆ ?

ಶ್ರೀ ಎಂ. ಚಂದ್ರಶೇಖರ್.—ಇಲಾಖೆಗೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಾನು ಹೇಳಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಹೆಚ್ಚಾಗಿ ಬೇರೆ ಏನೂ ಮಾತನಾಡಲಿಲ್ಲ ಅವರು ಮುಖ್ಯವಾಗಿ ಸರ್ವೀಸ್ ಮ್ಯಾಟರ್ಸ್ ಬಗ್ಗೆ ಪ್ರಸ್ತಾಪ ಮಾಡಿದರು, ನಮ್ಮ ಕ್ಷೇತ್ರದಲ್ಲಿ ಏನೂ ಕೆಲಸ ಆಗಿಲ್ಲ ಎಂದು ಒಂದು ಮಾತು ಹೇಳಿದರು. ಅದಕ್ಕೂ ಕೂಡಾ ನಾನು ಬರುತ್ತೇನೆ. ಬೇಕಾದಷ್ಟು ಕೆಲಸ ಆಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಮಾಡಿಸಿಕೊಂಡಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ನಾವೂ ನೀವೂ ಕೆಲಸ ಮಾಡಿಸಿಕೊಳ್ಳುವುದು ಸರ್ಕಾರದ ದುಡ್ಡಿನ ಮುಖಾಂತರವೇ ತಾನೆ. ಮಾನ್ಯ ಬಸವಲಿಂಗಪ್ಪನವರು ಮುಖ್ಯವಾಗಿ ಇಲಾಖೆಯ ಸರ್ವೀಸ್ ಮ್ಯಾಟರ್ಸ್ ಬಗ್ಗೆ ಕೆಲವು ವಿಚಾರಗಳನ್ನು ಇಟ್ಟಿದ್ದಾರೆ. ಈಗಾಗಲೇ ಹಿಂದಿನ ವರ್ಷದವರೆಗೂ ಅನೇಕ ಬಾರಿ ಅವರು ಈ ವಿಚಾರವನ್ನು ಎತ್ತಿದ್ದಾರೆ ಹಾಗೂ ಅದಕ್ಕೆ ವಿವರಣೆಯನ್ನೂ ಕೊಟ್ಟಿದ್ದೇವೆ. ಆದರೂ ಸಹ ಈ ಸರಿಯೂ ಅವರು ಈ ವಿಚಾರವನ್ನು ಎತ್ತಿರುವುದರಿಂದ ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ನಿಮಗೆ ಹಾಗೂ ಎಲ್ಲರಿಗೂ ಗೊತ್ತಿರುವ ಹಾಗೆ ಲೋಕೋಪಯೋಗಿ ಇಲಾಖೆಯಲ್ಲಿ ಎಕ್ಸಿಕ್ಯುಟೀವ್ ಇಂಜಿನಿಯರ್ಸ್ (ಕಾರ್ಯಪಾಲಕ ಅಭಿಯಂತರು) ಹುದ್ದೆಗೆ ಬಡ್ತಿ ನೀಡಬೇಕಾದರೆ ವಿದ್ಯಾರ್ಹತೆಯನ್ನು ಅನ್ವಯಿಸುವಂತಹ ಒಂದು ಆಜ್ಞೆಯನ್ನು ೨೭-೪-೧೯೮೭ರಲ್ಲಿ ಲೋಕೋಪಯೋಗಿ ಇಲಾಖೆಗೆ ಅನ್ವಯವಾಗುವಂತೆ ಹೊರಡಿಸಲಾಯಿತು. ಈ ಕಾರ್ಯಪಾಲಕ ಅಭಿಯಂತರ ಹುದ್ದೆ ಕ್ಲಾಸ್ ಒನ್ ಜೂನಿಯರ್ ಸ್ಕೇಲ್ ಆಗಿದ್ದ ಕಾರಣ, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಹುದ್ದೆಯಿಂದ, ಎಕ್ಸಿಕ್ಯುಟೀವ್ ಎಂಜಿನಿಯರ್ ಹುದ್ದೆಗೆ ಪ್ರಮೋಷನ್ ಕೊಡುವುದಕ್ಕೆ ಈ ಒಂದು

ಹುದ್ದೆಗೆ ಅನ್ವಯುವಾಗುವಂತೆ ಮೀಸಲಾತಿ ಅನ್ವಯುವಾಯಿತು. ಇದು ೧೯೭೮ರಲ್ಲಿ ಆಯಿತು. ೩೧-೧೦-೧೯೮೫ರಲ್ಲಿ ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಹುದ್ದೆಗೆ ಕ್ಲಾಸ್ ಒನ್ ಜೂನಿಯರ್ ಸ್ಕೇಲ್ ಬಂತು. ಎಕ್ಸಿಕ್ಯೂಟೀವ್ ಎಂಜಿನಿಯರ್ ಗಳು ಕ್ಲಾಸ್ ಒನ್ ಸೀನಿಯರ್ ಸ್ಕೇಲ್‌ಗೆ ಹೊರಟು ಬಿಟ್ಟರು. ಆದುದರಿಂದ ಹಿಂದಿನ ಒಂದು ಆಜ್ಞೆಯ ಮುಖಾಂತರ ಪ್ರಮೋಷನ್‌ಗೆ ಏನು ಒಂದು ಅವಕಾಶ ಕೊಡಲಾಗಿತ್ತು. ಅದು ಅವರಿಗೆ ಅನ್ವಯು ಆಗದೇ ಹೋಯಿತು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳೇ, ಸ್ಯಾಲರಿ ಜಾಸ್ತಿ ಮಾಡುವುದರಿಂದ ಒಬ್ಬ ನೌಕರನಿಗೆ ಅನುಕೂಲವಾಗುತ್ತದೆ ಎಂದು ನೀವು ಅದನ್ನು ಜಸ್ಟಿಫೈ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ಚಂದ್ರಶೇಖರ್.—ಇದು ಆದ ಮೇಲೆ ಏನಾಯಿತು ಎಂದು ನಾನು ಪೂರ್ತಿ ಹೇಳುತ್ತೇನೆ, ಕೇಳಿಬಿಡಿ. ಸ್ಯಾಲರಿ ಜಾಸ್ತಿ ಆಯಿತು, ಸ್ಯಾಲರಿ ಜಾಸ್ತಿ ಆಗಬಾರದು ಎಂಬುದು ನೀತಿಯ ವಿಚಾರವಾಗುತ್ತದೆ, ಇಲ್ಲಿ ಅದಲ್ಲ ಪ್ರಶ್ನೆ. ನೀತಿ ವಿಚಾರ ಆದರೆ ಅದರ ಬಗ್ಗೆ ತೀರ್ಮಾನ ತೆಗೆದು ಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕ್ಲಾಸ್ ಒನ್ ಪೋಸ್ಟ್ ಎಂದರೆ ಕ್ಲಾಸ್ ಒನ್ ಪೋಸ್ಟೇ, ಅವರಿಗೆ ಸ್ಯಾಲರಿ ಜಾಸ್ತಿಯಾಗಬಹುದು, ಕಡಿಮೆಯಾಗಬಹುದು, ಅದರ ವಿಚಾರ ಬೇರೆ.

ಶ್ರೀ ಬಿ. ಬಸವಲಿಂಗಪ್ಪ.—ಸಂಬಳ ಜಾಸ್ತಿ ಮಾಡುವುದರಿಂದ ಯಾರೋ ಒಬ್ಬ ನೌಕರರಿಗೆ ಅನುಕೂಲ ಆಗುವುದನ್ನು ತಪ್ಪಿಸುವುದಕ್ಕೆ ಅದನ್ನು ಜಸ್ಟಿಫೈ ಮಾಡಬೇಡಿ.

ಶ್ರೀ ಎಂ. ಚಂದ್ರಶೇಖರ್.—ಸಂಬಳ ಜಾಸ್ತಿಯಾಯಿತು, ಆಗಬಾರದೆಂಬುದು ಒಂದು ನೀತಿಯ ವಿಚಾರ ಅದಕ್ಕೆ ಒಂದು ತೀರ್ಮಾನ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕ್ಲಾಸ್ ಒನ್ ಪೋಸ್ಟ್ ಅಂದರೆ, ಪೋಸ್ಟ್ ಅಲ್ಲದೆ ಸಂಬಳ ಹೆಚ್ಚಾಗಬಹುದು, ಕಡಿಮೆಯಾಗಬಹುದು.

SRI M. MALLIKARJUNA KHARGE.—Class I post is Class-I Post. Salary is immaterial.

ಶ್ರೀ ಎಂ. ಚಂದ್ರಶೇಖರ್.—ಜೂನಿಯರ್ ಕ್ಲಾಸ್ ೧ಗೇ ಅನ್ವಯವಾಗುವ ಹಾಗೆ Executive Engineer Junior Class I.................................ರಿಂದ ಮೇಲಕ್ಕೆ ಹೋದರು. Assistant Executive Engineer Junior Class I ಆಗಿದ್ದಾರೆ. ಅಲ್ಲಿಯವರೆಗೆ ಪ್ರೊಮೋಷನ್ನಿಗೆ ಅವಕಾಶವಿದೆ ಎನ್ನುವಂತಹ ಒಂದು ತಾಂತ್ರಿಕವಾದ ನೀತಿ, ೩೧-೧೦-೧೯೮೫ರವರೆಗೆ ಅನ್ವಯುವಾಯಿತು. ಅದಕ್ಕೆ ತಕ್ಕಂತೆ ಪ್ರೊಮೋಷನ್ ಮಾಡುವುದಕ್ಕೆ ವ್ಯವಸ್ಥೆ ಆಯಿತು, ಈಗ ೧೯೮೫ರ ಪರಿಷ್ಕರಣದಲ್ಲಿ Assistant Executive Engineer ಸ್ಕೇಲ್ ೧೧೦೦-೨೨೫೦ ಇದ್ದುದ್ದನ್ನು ೧೨೦೦-೨೧೭೫ಕ್ಕೆ Assistant Executive Engineer Scale ನಿಗದಿಯಾಯಿತು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಇಂಜಿನಿಯರ್ ಸಂಘದವರು ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿದರು. ಅದು ಕರ್ನಾಟಕ ನ್ಯಾಯ ಮಂಡಲಿ (Karnataka Administrative Tribunal) ಯಲ್ಲಿ ೯-೯-೧೯೮೭ರಲ್ಲಿ ತೀರ್ಮಾನವಾಗಿ, ಈ ಮೀಸಲಾತಿ ನಿಯಮವನ್ನು ಕಾರ್ಯ ಪಾಲಕ ಅಭಿಯಂತರರಿಗೆ Assistant Executive Engineer..........ಸ್ಕೇಲ್ ಆಗಿದ್ದರಿಂದ ಅನ್ವಯುವಾಗುವುದಿಲ್ಲವೆಂದು ತೀರ್ಮಾನ ಕೊಟ್ಟಿತು. ಈಗ ಎಕ್ಸಿಕ್ಯೂಟೀವ್ ಇಂಜಿನಿಯರ್ ಯಾವ ರೀತಿ ಸೀನಿಯರ್ ಕ್ಲಾಸ್ I ಆಗಿದ್ದಾರೆ ಅದೇ ರೀತಿ ಸರ್ಕಾರದ ಇತರೆ ಇಲಾಖೆಗಳಲ್ಲೂ ಕೂಡ, ಆ ಮಟ್ಟಕ್ಕೆ ಸರಿಸಮಾನವಾದ ಹುದ್ದೆಗಳು ಇದೆ ಇವತ್ತು ಕೇವಲ ಲೋಕೋಪಯೋಗಿ ಇಲಾಖೆಗೆ ಮಾತ್ರ ಇದು ಅನ್ವಯುವಾಗುವ ಆಗಿಲ್ಲ. ಬೇರೆ ಇಲಾಖೆಗಳಿಗೂ ಕೂಡ ಅನ್ವಯ ಆಗಬೇಕು. ಇದು ನಾನು ಹೇಳುವುದು ಒಂದು ನೀತಿ. ಆಗ ಮಾತ್ರ ಇದು ಎಲ್ಲರಿಗೂ ಅನ್ವಯುವಾಗುತ್ತದೆ. ಸೀನಿಯರ್ ಸ್ಕೇಲ್

ಕ್ಲಾಸ್ I ಅಂತ ಹೇಳಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಅಲ್ಲವೆಂದು ಹೇಳಿ ಬೇರೆ ಬೇರೆ ಇಲಾಖೆಗಳಲ್ಲಿ ಈ ಮಟ್ಟದಲ್ಲಿರುವವರಿಗೆಲ್ಲಾ ಅನ್ವಯುವಾಗುತ್ತದೆ. ಇವರೊಬ್ಬರಿಗೆ ಮಾಡಿದರೆ ಬೇರೆಯವರಿಗೆ ಅನ್ಯಾಯ ವಾಗುತ್ತದೆ. ಲೋಕೋಪಯೋಗಿ ಇಲಾಖೆಗೆ ಮಾತ್ರವಾಗದೇ ಎಲ್ಲ ಇಲಾಖೆಗಳಿಗೂ ಇದು ಅನ್ವಯು ಆಗಬೇಕು.

SRI M. MALLIKARJUNA KHARGE.—If D P.A R. takes a decision it will be applicable to all.

ಶ್ರೀ ಎಂ. ಚಂದ್ರಶೇಖರ್.—ಇವತ್ತು ಅದು ಡಿ.ಪಿ.ಎ.ಆರ್. ಮುಂದೆ ಇದನ್ನು ಅನ್ವಯು ಮಾಡುವುದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಎಲ್ಲ ಇಲಾಖೆಯನ್ನು ಪರಿಶೀಲನೆ ಮಾಡಿ ಆರ್ಥಿಕವಾಗಿ ಏನಾಗುತ್ತದೆಂದು ನೋಡಬೇಕು. ಇದರ ಬಗ್ಗೆ ಒಂದು ತೀರ್ಮಾನ ತೆಗೆದು ಕೊಳ್ಳಬೇಕು. ಈ ಕಾರಣಗಳಿಂದಾಗಿ ೭೮ರ ಆಜ್ಞೆಯ ಪ್ರಕಾರ ಆ ಬಡ್ತಿಯನ್ನು ಕೊಡಲಿಕ್ಕೆ ಸಾಧ್ಯ ವಾಗಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಇದರ ಬಗ್ಗೆ ನಾವು ಬಹಳ ದಿವಸದಿಂದ ಹೋರಾಟ ಮಾಡುತ್ತಿದ್ದೇವೆ. ಹುದ್ದೆಗಳಲ್ಲಿ ಕ್ಲಾಸ್ ೧, ೨, ೩, ೪ ಎಂದು ಇಟ್ಟುಕೊಂಡಿದ್ದಾರೆ. ಇದರಲ್ಲಿ ಕ್ಲಾಸ್ ೨ನವರು ಕ್ಲಾಸ್ ೩ಯುವರಿಗೆ ಸಂಬಳ ಜಾಸ್ತಿ ಮಾಡಿದರೆ ಅವರು ಕ್ಲಾಸ್ I ಆಗುತ್ತಾರೊ ? ಆಗಬಾರದೆಂಥಾ ಒಂದು ನೀತಿಯನ್ನು ಹೇಳುತ್ತಿದ್ದಾರೆ. ನಾವು ೧೯೭೮ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಇದನ್ನು ಮಾಡಿದ್ದೆವು. ಯಾರು ಯಾರು Assistant Executive Engineer ಆಗಿದ್ದಾರೆ ಅವರಿಗೆ Executive Engineer ಆಗಿ ಬಡ್ತಿ ನೀಡಿದ್ದೆವು. ಕಾರಣವೇನೆಂದರೆ ೧೯೬೧ನೇ ಇಸವಿಯಿಂದ Assistant Executive Engineer ನವರನ್ನು ನೇರ ನೇಮಕಾತಿ ಮಾಡಿಲ್ಲ. ಸರ್ವೇ ಸಾಮಾನ್ಯವಾಗಿ ದೇಶ ದಲ್ಲಿರುವ ಎಲ್ಲರನ್ನು ಮಾಡಿದರೆ ರಿಸರ್ವೇಷನ್ ಬಂದು ಬೇರೆ ಯಾರ್‍ಯಾರು ಪಾಸು ಮಾಡಿದವರೆಲ್ಲರಿಗೂ ಕೆಲಸ ಸಿಗುತ್ತಿತ್ತು. ಆದ್ದರಿಂದ ಚಿಕ್ಕವರನ್ನು ದೊಡ್ಡವರನ್ನಾಗಿ ಮಾಡುತ್ತಾ, ಪ್ರೊಮೋಷನ್ ಕೊಡತಕ್ಕ ಒಂದು ನೀತಿ ಬಂದಿದೆ. ತಾವು ಲೋಕೋಪಯೋಗಿ ಮಂತ್ರಿಯಾಗಿ ಹೊಸದಾಗಿ ಬಂದಿ ದ್ದೀರಿ. ತಾವು ಸೌಹಾರ್ದದಿಂದ ಮಾತನಾಡಿದ್ದೀರಿ, ನಾನು ಮಾನ್ಯ ದೇವೇಗೌಡರೊಂದಿಗೆ ಇದೇ ಹೋರಾಟ ಮಾಡಿದ್ದೇನೆ. ಅವರು ಹೇಳಿದ್ದನ್ನು ಹೇಳಿಬಿಟ್ಟು ತಮ್ಮದೇ ಸರಿಯೆಂದು ಹೇಳಿಕೊಂಡು ಹೋದರು. ಅವರು ಈವತ್ತು ಮಂತ್ರಿಯಾಗಿಲ್ಲ. ತಾವು ಮಂತ್ರಿಯಾಗಿದ್ದೀರಿ.

ನಾನು ಒಂದು ಮಾತನ್ನು ಹೇಳುವುದೇನೆಂದರೆ ಮಾನ್ಯ ದೇವೇಗೌಡರ ಜೊತೆ ನಾನು ಹೋರಾಟ ಮಾಡಿದ್ದೆನು. ಅವರು ಹೇಳಿದ್ದನ್ನೇ ಹೇಳಿ ಹೇಳಿ ಹೋದರು. ಅವರು ಈಗ ಮಂತ್ರಿಗಳಾಗಿಲ್ಲ ತಾವು ಮಂತ್ರಿಗಳಾಗಿದ್ದೀರಿ. ತಾವು ಆ ಕೆಲಸ ಮಾಡಿ. ಸ್ಯಾಲರಿ ಮೇಲೆ ನಿರ್ಣಯಾತ್ಮಕ ನಿರ್ಧಾರವನ್ನು ತೆಗೆದುಕೊಳ್ಳುವುದಾದರೆ ಆ ಹುದ್ದೆಯಲ್ಲಿ Assistant Executive Engineer is the Executive Engineer by promotion. Why do you say he is a Class-I Officer ?

ನಾನು ಮಾಡಿದ ತಪ್ಪು ಅದು. ಕ್ಯಾಬಿನೇಟ್‌ನಲ್ಲಿ ಮೊದಲ ಸ್ಟೆಪ್ ತೆಗೆದುಕೊಂಡಿದ್ದು ನಾನು. ಆಗ ಜ್ಯೂನಿಯರ್ ಕ್ಲಾಸ್ ಓನ್ ಎಂದು ಮಾಡಿದೆವು. ಅದು ತಪ್ಪಾಯಿತು, ಅದನ್ನು ಮಾಡಬಾರ ದಾಗಿತ್ತು. ಆಗ ಎಲ್ಲಾ ಹುದ್ದೆಗಳಿಗೂ ಮಾಡಬಹುದಾಗಿತ್ತು. ಮಾಡಲಿಲ್ಲ. ತಾವು ದಯಮಾಡಿ ಇದನ್ನು ಪರಿಶೀಲನೆ ಮಾಡಬೇಕು. ಲೋಕೋಪಯೋಗಿ ಇಲಾಖೆಯಲ್ಲಿರತಕ್ಕಂಥವರಿಗೆ ಸರಿಯಾದ ಪ್ರಾತಿನಿಧ್ಯವಿಲ್ಲ. Backlog vacancies are too many. ಅಂಕಿ ಅಂಶ ಗಳು ಇವೆ. ಅದನ್ನು ನೋಡಿ ತಾವು ನೇರ ನೇಮಕಾತಿ ಮಾಡಬೇಕು. ಹೋಮ್ ಮಿನಿಸ್ಟ್ರಿ ಆಫ್ ಇಂಡಿಯಾ ನಿರ್ಧಾರ ಕೊಟ್ಟ ಹಾಗೆ ತೀರ್ಮಾನ ತೆಗೆದುಕೊಂಡಿದ್ದು. ತಾವು ರಿಯಾಯಿತಿ ಕೊಡಿ. ಎಲ್ಲಾ ಕಡೆ ಸಂಬಳದ ಮೇಲೆ ನಿರ್ಣಯ ಮಾಡಬೇಕೆಂದು ಹೇಳಿದರೆ ಅದನ್ನು ತಾವು ಮಾಡಿ.

ಶ್ರೀ ಎಂ. ಚಂದ್ರಶೇಖರ್.—ಹಿಂದೆ ತೆಗೆದುಕೊಂಡಂತಹ ಏನು ನೀತಿ ಇದೆ ಎನ್ನುವುದನ್ನು ಹಾಗೂ ಇದು ಕೇವಲ ಲೋಕೋಪಯೋಗಿ ಇಲಾಖೆಗೆ ಮಾತ್ರ ಅನ್ವಯುವಾಗುವುದಿಲ್ಲ. ಇತರೇ ಎಲ್ಲಾ ಇಲಾಖೆಗಳಿಗೆ ಅನ್ವಯುವಾಗುತ್ತದೆ. ಈ ಆಜ್ಞೆ ಸಮಗ್ರವಾಗಿ ಎಲ್ಲಾ ಇಲಾಖೆಗಳಿಗೂ ಅನ್ವಯ

ವಾಗುವಂತೆ ಮಾಡಬೇಕೆನ್ನುವುದನ್ನು ನಾನು ಹೇಳಿದ್ದುದು. ಎರಡನೆಯದಾಗಿ ೨-೯-೧೯೮೨ರ ಆಜ್ಞೆಯ ಪ್ರಕಾರ ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ಎಕ್ಸಿಕ್ಯೂಟೀವ್ ಇಂಜಿನೀಯರ್ಸ್‌ಗೆ ಪ್ರಮೋಷನ್ಸ್‌ಗೆ ಸಾಕಷ್ಟು ಪ್ರಾತಿನಿಧ್ಯ ಎಸ್. ಸಿ. ಮತ್ತು ಎಸ್. ಟಿ. ಗಳಿಗೆ ಇಲ್ಲವೆಂದು ಹೇಳಿ ೫ ವರ್ಷಗಳ ಕಾಲಮಿತಿಯನ್ನು ತೆಗೆದು ಮೂರು ವರ್ಷಗಳೆಂದು ಸಡಿಲ ಮಾಡಲಾಗಿದೆ. ಆ ಪ್ರಕಾರ ಸರ್ಕಾರದವರು ಸಾಕಷ್ಟು ಕ್ರಮ ತೆಗೆದುಕೊಂಡು ಎಷ್ಟು ಹುದ್ದೆಗಳು ಇದ್ದವೋ ಅವುಗಳನ್ನೆಲ್ಲಾ ತುಂಬ ಲಾಗಿದೆ. "This amendment shall be in force for the purpose of filling up of vacancies existing as on the date of issue of this Notification amending the rules Therefore, this could be one time decision only. ತಮ್ಮ ಕಾಲದಲ್ಲಿಯೇ ಈ ನಿರ್ಧಾರ ಮಾಡಿರುವುದು. ಏತಕ್ಕೆ ಮಾಡಿರುವುದಕ್ಕೆ ಹೋದಿರಿ ? ಮಾಡಲೇ ಬಾರದಿತ್ತು. ಅದರಲ್ಲೂ ಒನ್ಲಿ ಎನ್ನುವ ಪದ ಬೇರೆ ಹಾಕಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ಈ ಡ್ರಾಫ್ಟ್‌ಮ್ಯಾನ್‌ಗಳು ನಿಮ್ಮನ್ನು ನಮ್ಮನ್ನೂ ಕೂಡ ಫೂಲ್ ಮಾಡುತ್ತಾರೆ. ಅವರು ಮಾಡುವುದೇ ಸರಿ. ನಾವು ಏನೂ ಹೇಳುವ ಹಾಗೆ ಇಲ್ಲ.

ಶ್ರೀ ಎಂ. ಚಂದ್ರಶೇಖರ್.—ನಾವು ಬಂದ ಮೇಲೆ ಏನು ಮಾಡಿದ್ದೇವೆನ್ನುವುದನ್ನು ಹೇಳುವುದಾದರೆ ದಿನಾಂಕ ೧೩-೯-೧೯೮೩ರಲ್ಲಿ ಒಟ್ಟು ಪೋಸ್ಟ್‌ಗಳಲ್ಲಿ ಶೇಕಡ ಎಸ್.ಸಿ.ಗೆ ೮ ಪೋಸ್ಟ್‌ಗಳು ಎಸ್.ಟಿ.ಗೆ ಒಂದು ಪೋಸ್ಟ್ ಪ್ರಮೋಷನ್ ಮಾಡಿದ್ದೇವೆ, ನಾವೇ ಫಸ್ಟ್ ಮಾಡಿದ್ದು. ಆಮೇಲೆ ೨೬-೪-೧೯೮೩ರಲ್ಲಿ ಒಟ್ಟು ಇದ್ದ ಪೋಸ್ಟ್‌ಗಳಲ್ಲಿ ೯ ಜನರಿಗೆ ಪ್ರಮೋಷನ್ ಕೊಟ್ಟಿದ್ದೇವೆ. ನಿಮ್ಮ ಕಾಲದಲ್ಲಿ ಇಂತಹ ಒಂದು ಆರ್ಡರ್ ಮಾಡಿದ್ದರೂ ಕೂಡ ಸರ್ಕಾರ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಈ ವರ್ಗದ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ೧೯೮೩ನೇ ಇಸವಿಯಲ್ಲಿಯೇ ಎರಡು ಭಾರಿ ಪ್ರಮೋಷನ್ಸ್ ಮಾಡಿದ್ದೇವೆ. ಇದರ ಉದ್ದೇಶವೇನೆಂದರೆ ಈ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಸಿಗಲೆನ್ನುವ ದೃಷ್ಟಿಯಿಂದ. ಇದೇ ರೀತಿಯಲ್ಲಿ ಈ ವರ್ಗದ ಪ್ರಾತಿನಿಧ್ಯ ಎಷ್ಟು ಇರುತ್ತದೆಯೋ ಅಷ್ಟು ಫಿಲಪ್ ಮಾಡುತ್ತಾ ಹೋಗುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಇರತಕ್ಕಂಥ ಹುದ್ದೆಗಳಲ್ಲಿ ಫಿಲಪ್ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಆ ನಿಯಮವನ್ನು ನೀವೇ ಏಕೆ ಮುಂದುವರಿಸಲಿಲ್ಲ ? ನಿಮ್ಮ ಕಾಲದಲ್ಲಿ ಒಂದು ವರ್ಷಕ್ಕೆ ಮಾತ್ರ ಈ ನಿಯಮವನ್ನು ಅನುಸರಿಸಲಾಗಿತ್ತು. "It is only one time operation and that too filling up vacancies."

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದೇನೂ ವೇದ ವಾಕ್ಯ ಅಲ್ಲ. That can be amended. ೩೦ ವರ್ಷದ ಅವಧಿಯಲ್ಲಿ ಅನೇಕ ಸರ್ಕಾರಗಳು ಆಡಳಿತ ಮಾಡಿದ್ದವು. ಆದರೆ ಯಾರೂ ಈ ನಿಯಮವನ್ನು ಮಾಡಿರಲಿಲ್ಲ. ಸಮಾಜದ ದುರ್ಬಲ ವರ್ಗದವರಿಗೆ ನ್ಯಾಯ ಸಿಗಲಿ ಎನ್ನುವ ಉದ್ದೇಶದಿಂದ ಮಾತ್ರ ಈ ಹಿಂದಿನ ಸರ್ಕಾರ ಆ ನಿಯಮವನ್ನು ಮಾಡಿತ್ತು. If candidates are not available, so many times we relax the conditions. It is a cabinet decision. You can change it anytime.

ಶ್ರೀ ಎಂ. ಚಂದ್ರಶೇಖರ್.—೧೯೮೫ರಿಂದ ಎಕ್ಸಿಕ್ಯುಟಿವ್ ಇಂಜಿನೀಯರ್ಸ್‌ಗಳಿಗೆ ಪ್ರಮೋಷನ್ನೇ ಇಲ್ಲವಾಗಿದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಈ ನಿಯಮವನ್ನು ಸಮಗ್ರವಾಗಿ ಎಲ್ಲಾ ಇಲಾಖೆಗಳಿಗೂ ಅನ್ವಯವಾಗುವ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುತ್ತದೆಯೇ ಹೊರತು ಒಂದೇ ಇಲಾಖೆಗೆ ಈ ನಿಯಮವನ್ನು ಅನ್ವಯ ಮಾಡುವುದಕ್ಕಾಗುವುದಿಲ್ಲವೆಂದು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಒಂದಕ್ಕೊಂದು ವಿಷಯವನ್ನು ಕಲಬೆರಿಕೆ ಮಾಡಬೇಡಿ. ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಏಕೆ ಇಷ್ಟು ಹಿಂಜರಿಯುತ್ತಿದ್ದೀರಿ ? ನೀವು ಯಾವಾಗ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುವುದು ?

ಶ್ರೀ ಎಂ. ಚಂದ್ರಶೇಖರ್.—ಯಾವ ರೀತಿ ಪರಿಸ್ಥಿತಿ ಇದೆ ಎಂಬುದನ್ನು ತಿಳಿಸಿದ್ದೇನೆ. ಈ ಸಭೆಗೆ ಪೂರ್ಣವಾದ ಅಧಿಕಾರ ಇದೆ; ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ರೀತಿ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆ ಇದೆ. ಪಬ್ಲಿಕ್ ಸರ್ವೀಸ್ ಕಮಿಷನ್ ಮೂಲಕ ಅಸಿಸ್ಟೆಂಟ್ ಇಂಜಿನೀಯರ್‌ಗಳ ಪೋಸ್ಟನ್ನು ನೀವು ನೇರವಾಗಿ ರಿಕ್ರೂಟ್ ಮಾಡುತ್ತಿಲ್ಲ. ಅಸಿಸ್ಟೆಂಟ್ ಇಂಜಿನೀಯರ್‌ಗಳನ್ನು ನೇರವಾಗಿ ರಿಕ್ರೂಟ್ ಮಾಡಿದರೆ ಆಟೋಮ್ಯಾಟಿಕಲಿ ಅಸಿಸ್ಟೆಂಟ್ ಇಂಜಿನೀಯರ್‌ಗಳು ಎಕ್ಸಿಕ್ಯೂಟಿವ್ ಇಂಜಿನೀಯರ್ ಪೋಸ್ಟ್‌ನಲ್ಲಿ ಬರುತ್ತಾರೆ. ಆದ್ದರಿಂದ, ಅಸಿಸ್ಟೆಂಟ್ ಇಂಜಿನೀಯರ್‌ಗಳನ್ನು ನೇರವಾಗಿ ರಿಕ್ರೂಟ್ ಮಾಡಿಕೊಳ್ಳಬೇಕು. ಆ ರೀತಿ ಮಾಡಿದರೆ ಬ್ಯಾಕ್‌ಲಾಗ್ ಫಿಲಪ್ ಆಗುತ್ತದೆ.

ಶ್ರೀ ಎಂ. ಚಂದ್ರಶೇಖರ್ —ತಾತ್ವಿಕವಾಗಿ ಆಯಾ ವೇಳೆಗೆ ಎಷ್ಟೆಷ್ಟು ಬ್ಯಾಲೆನ್ಸ್ ಇರುತ್ತದೆಯೋ ಅದನ್ನು ಫಿಲಪ್ ಮಾಡುವುದಕ್ಕೆ ಅಭ್ಯಂತರ ಏನೂ ಇಲ್ಲ.

SRI M. MALLIKARJUN KHARGE.—To fill up the backlog only, you take the decision. Otherwise you don't take it. You reject it.

ಶ್ರೀ ಎಂ ಚಂದ್ರಶೇಖರ್.—ಆ ತರಹ ನಿಯಮವನ್ನು ಒಂದೇ ಇಲಾಖೆಗೆ ಅನ್ವಯ ಮಾಡುವುದಕ್ಕಾಗುವುದಿಲ್ಲ. ಸಮಗ್ರವಾಗಿ ಆ ನಿಯಮವನ್ನು ಮಾಡಬೇಕಾಗುತ್ತದೆ. ಈ ಸರ್ಕಾರ ಬಂದ ಮೇಲೆ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ನ್ಯಾಯವಾಗಿ ಯಾವ ರೀತಿ ಕೆಲಸಗಳನ್ನು ಕೊಡಬೇಕೋ ಆ ರೀತಿಯಲ್ಲಿ ಕೊಡಲಾಗಿದೆ. ಮೊದಲು ೧೮ ಪರ್‌ಸೆಂಟ್ ಇದ್ದ ಮೀಸಲಾತಿಯನ್ನು ನಾವು ೨೫ ಪರ್‌ಸೆಂಟ್‌ಗೆ ಏರಿಸಿದ್ದೇವೆ, ಅಸಿಸ್ಟೆಂಟ್ ಇಂಜಿನೀಯರ್‌ಗಳ ಮತ್ತು ಜೆ.ಇ.ಗಳ ರಿಕ್ರೂಟ್‌ಮೆಂಟ್‌ನಲ್ಲಿ ನಾವು ೨೫ ಪರ್‌ಸೆಂಟ್ ಮೀಸಲಾತಿಯನ್ನು ಕೊಟ್ಟಿದ್ದೇವೆ. ಯಾವ ಜನತೆಗೆ ಅನುಕೂಲವಾಗಲೀ ಎನ್ನುವ ಉದ್ದೇಶದಿಂದ ಮತ್ತು ಪರಿಶಿಷ್ಟ ಹಾಗೂ ಪರಿಶಿಷ್ಟ ಜನಾಂಗದವರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಮೀಸಲಾತಿಯ ಪರ್‌ಸೆಂಟೇಜ್‌ನ್ನು ಏರಿಸಿದ್ದೇವೆ. ೨೫ ಪರ್‌ಸೆಂಟ್ ಮಾಡಿರುವುದರಿಂದ ಬ್ಯಾಕ್‌ಲಾಗ್ ತುಂಬಿಕೊಳ್ಳುವುದಕ್ಕೆ ಅನುಕೂಲವಾಗಿದೆ. ನಿಮ್ಮ ಸರ್ಕಾರ ಇದ್ದಾಗ ಎಷ್ಟು ಪರ್‌ಸೆಂಟೇಜ್ ಪರಿಶಿಷ್ಟ ವರ್ಗ ಮತ್ತು ಜನರಿಗೆ ಉದ್ಯೋಗಗಳನ್ನು ಕೊಡಲಾಗಿದೆ ಎಂಬ ಬಗ್ಗೆ ಮಾಹಿತಿ ಕೊಡುತ್ತೇನೆ. ೧೯೭೭ನೇ ಇಸವಿ ಡಿಸೆಂಬರ್‌ನಿಂದ ೧೯೮೨ನೇ ಇಸವಿ ಅಕ್ಟೋಬರ್‌ವರೆಗೆ ಒಟ್ಟು ೨೩೦೦ ಜನ ಎ.ಇ.ಗಳನ್ನು ರಿಕ್ರೂಟ್ ಮಾಡಲಾಗಿದೆ. ಅದರಲ್ಲಿ ೯೫ ಜನ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ, ೨೧ ಜನ ಪರಿಶಿಷ್ಟ ಪಂಗಡದವರಾಗಿದ್ದಾರೆ. ಅಂದರೆ ಎಸ್.ಸಿ. ಮತ್ತು ಎಸ್.ಟಿ.ಯವರಿಗೆ ಒಟ್ಟು ೧೧೬ ಪೋಸ್ಟ್‌ಗಳನ್ನು ಕೊಡಲಾಗಿದೆ. ಇದರ ಪರ್‌ಸೆಂಟೇಜ್ ೪.೯ ಆಯಿತು. ನಮ್ಮ ಸರ್ಕಾರ ಬಂದ ಮೇಲೆ ಅಂದರೆ, ಜನವರಿ ೧೯೮೪ನೇ ಇಸವಿಯಿಂದ ಸೆಪ್ಟೆಂಬರ್ ೧೯೮೭ನೇ ಇಸವಿಯವರೆಗೆ ೧೩೫೫ ಜನರನ್ನು ರಿಕ್ರೂಟ್ ಮಾಡಲಾಗಿದೆ. ಅದರಲ್ಲಿ ೧೬೧ ಎಸ್.ಸಿ. ಯವರು ೩೩ ಜನ ಎಸ್.ಟಿ.ಯವರು. ಒಟ್ಟು ೧೯೪ ಜನಕ್ಕೆ ಕೊಟ್ಟಿದ್ದೇವೆ. ಅಂದರೆ ಶೇಕಡಾ ೧೪.೫ರಷ್ಟಾಯಿತು.

ಜನವರಿ ತಿಂಗಳಿಂದ ಸೆಪ್ಟೆಂಬರ್ ೧೯೮೭ರ ವರೆಗೆ ೧,೩೫೫ ರಿಕ್ರೂಟ್‌ಮೆಂಟ್ ಮಾಡಿದುದರಲ್ಲಿ ೧೬೧ ಎಸ್.ಸಿ. ಮತ್ತು ೩೩ ಎಸ್.ಟಿ. ಅಭ್ಯರ್ಥಿಗಳು ಇದ್ದು ಒಟ್ಟು ೧೯೪ ಅಂದರೆ ೧೪.೫ ಪರ್‌ಸೆಂಟ್ ಆಯಿತು. ಆ ಕಾಲದಲ್ಲಿ ಅರ್ಹತೆ ಪಡೆದಿರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಜನಾಂಗದ ಪ್ರತಿಯೊಬ್ಬರಿಗೂ ಅವಕಾಶ ಸಿಕ್ಕಿದೆ. ಯಥಾ ಪ್ರಕಾರ ಆ ಕಾಲದಲ್ಲಿ ನಾವೂ, ನೀವು ಕೂಡ ಹೆಚ್ಚಿಗೆ ಪ್ರಯತ್ನವನ್ನು ಮಾಡಿಲ್ಲವಾದ ಕಾರಣ ಅವರ ಸಂಖ್ಯೆ ಕಡಿಮೆಯಾಗಿತ್ತು. ಒಂದು ವೇಳೆ ಈ ಪ್ರಯತ್ನವನ್ನು ನಾವೆಲ್ಲರೂ ಮೊದಲೇ ಮಾಡಿದ್ದರೆ ಅವರು ಇನ್ನೂ ಹೆಚ್ಚಿಗೆ ಬರುತ್ತಾ ಇದ್ದರು. ಆ ಒಂದು ಲೋಪ ನಮ್ಮ ಸಮಾಜದಲ್ಲಿ ಇತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲಿಫ್ಟ್ ಇರಿಗೇಷನ್ ಕಾರ್ಪೊರೇಶನ್‌ನವರು ಬಿಜಾಪುರ, ಹಾಸನ ಮತ್ತು ಮೈಸೂರುಗಳಲ್ಲಿ ರಿಕ್ರೂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಅದರಲ್ಲಿ ಅವರು ರೋಸ್ಟರ್ ಸಿಸ್ಟಮನ್ನು ಪಾಲಿಸಿಲ್ಲ. ಒಟ್ಟಾರೆ ರಿಕ್ರೂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಈಗ ಸೇರಿದವರು ಆರುತಿಂಗಳ ಕಾಲ ಕೆಲಸ ಮಾಡಿ ನಮ್ಮನ್ನು ಖಾಯಂ ಮಾಡಿ ಎಂದು ವಿಧಾನ ಸೌಧಕ್ಕೆ ಜಾಥಾ ಬರುತ್ತಾರೆ......

ಶ್ರೀ ಎಂ. ಚಂದ್ರಶೇಖರ್.—ಹಾಗೆ ಅವರು ರಿಕ್ರೂಟ್‌ಮೆಂಟ್ ಮಾಡುವಾಗ ರೋಸ್ಟರ್ ಸಿಸ್ಟಮ್ ಪಾಲಿಸಿದ್ದಾರೆ ಎಂದು ನನ್ನ ಭಾವನೆ ಹಾಗೆ ಅವರು ತಪ್ಪು ಮಾಡುವುದಕ್ಕೆ ಸಾಧ್ಯತೆ ಇಲ್ಲ. ಆದರೂ ಕೂಡ ಆ ಬಗ್ಗೆ ವಿಚಾರ ಮಾಡಿ ಹೇಳುತ್ತೇನೆ.

ಇನ್ನು ಜ್ಯೂನಿಯರ್ ಇಂಜಿನೀಯರ್ಸ್ ೧೯೮೧ರಲ್ಲಿ ತೆಗೆದುಕೊಂಡ ಪ್ರಕಾರ, ೪೫೦ ಜನರಲ್ಲಿ ೨೩ ಎಸ್.ಸಿ. ಮತ್ತು ೫ ಎಸ್.ಟಿ ಯವರು ಮಾತ್ರ ಇದ್ದಾರೆ. ಅಂದರೆ ಕೇವಲ ೬ ಪರ್ಸೆಂಟ್ ಆದ ಹಾಗೆ ಆಯಿತು. ಅದೇ ಏಪ್ರಿಲ್ ೧೯೮೩ ಮತ್ತು ಅಕ್ಟೋಬರ್ ೧೯೮೫ರಲ್ಲಿ ರಿಕ್ರೂಟ್‌ಮೆಂಟ್ ಆದ ೧,೦೭೫ ಜನರ ಪೈಕಿಯಲ್ಲಿ ೨೦೮ ಜನರು ಎಸ್.ಸಿ. ಮತ್ತು ೩೪ ಜನರು ಎಸ್.ಟಿ.ಯವರು ಅಂದರೆ ಒಟ್ಟು ೨೪೨ ಜನರು ರಿಕ್ರೂಟ್ ಆದರು. ೧೭ ಪರ್ಸೆಂಟ್ ಆದಂತಾಯಿತು. ಅಂದರೆ ೬ ಪರ್ಸೆಂಟ್ ಎಲ್ಲಿ ? ಮತ್ತು ೧೭ ಪರ್ಸೆಂಟ್ ಎಲ್ಲಿ ? ಎಂದು ತಾವು ವಿಚಾರ ಮಾಡಬೇಕು. ಶೇಕಡಾ ೨೫ರಷ್ಟು ಮೀಸಲಾತಿಯನ್ನು ನಾವು ತೆಗೆದುಕೊಳ್ಳುವಾಗ ಎಕ್ಸಿಕ್ಯೂಟಿವ್ ಇಂಜಿನೀಯರ್ಸ್ ಮಟ್ಟದಲ್ಲಿ ಇರುವುದರಲ್ಲಿ ಹೆಚ್ಚಿನ ಪ್ರಮಾಣ ಇದೆ. ಈಗ ಅಭ್ಯರ್ಥಿಗಳು ಅಧಿಕ ಸಂಖ್ಯೆಯಲ್ಲಿ ಬರಬೇಕಾಗಿದೆ. ಅದಕ್ಕಾಗಿ ವಿದ್ಯಾಕ್ಷೇತ್ರದಲ್ಲಿ ಏನು ಮಾಡಬೇಕೋ ಅದು ಸಾಧಿಸಬೇಕಾಗಿದೆ. ಒಟ್ಟಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಂಬಂಧಪಟ್ಟಂಥ ಅಭ್ಯರ್ಥಿಗಳಿಗೆ ಇಲಾಖೆಯ ವತಿಯಿಂದ ನ್ಯಾಯ ದೂರಕಂತಾ ಇದೆ ಎನ್ನುವುದನ್ನು ನಾನು ಅಂಕಿಅಂಶಗಳ ಮುಖಾಂತರ ವಿವರಣಾತ್ಮಕವಾಗಿ ಸ್ಪಷ್ಟವಾಗಿ ತಿಳಿಸಿದ್ದೇನೆ. ಇದನ್ನು ಮಾನ್ಯ ನಾಯಕರು ಕೂಡ ಒಪ್ಪಿಕೊಳ್ಳಬೇಕು. ಅಂತೆಯೇ ಮುಂದೆಯೂ ಮಾಡಿ ಎಂದು ಹೇಳಿದ್ದೀರಿ ಅದನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾಡುತ್ತೇವೆ ಎಂದು ಹೇಳಿ ಸ್ವಾಮಿ.

ಶ್ರೀ ಎಂ. ಚಂದ್ರಶೇಖರ್.—ಅದನ್ನು ಇವತ್ತಲ್ಲ ನಾಳೆಯಾದರೂ ನಾವು, ನೀವು, ಮಾಡಲೇ ಬೇಕಾಗುತ್ತದೆ. ನಾವೆಲ್ಲರೂ ಸಮಾಜದ ಒಂದು ನ್ಯಾಯವನ್ನು ಸಂಬಂಧಪಟ್ಟವರಿಗೆ ದೊರಕಿಸಿ ಕೊಡಲೇ ಬೇಕಾಗುತ್ತದೆ, ಅದನ್ನು ಮಾಡಬೇಕಾಗುತ್ತದೆ.

ಇನ್ನು ದಿನಗೂಲಿ ನೌಕರರ ವಿಚಾರದಲ್ಲಿ ಮಾನ್ಯ ಭೂಪತಿಯವರು ಹೇಳಿದರು. ಅವರದ್ದು ಒಂದು ರೀತಿಯ ಸಮಸ್ಯೆ ಯಥಾ ಪ್ರಕಾರ ಈ ಸರಕಾರ ಬಂದಮೇಲೆ ಅವರ ಬಗ್ಗೆ ಕಾಳಜಿ ವಹಿಸಿದೆ. ಇದರಲ್ಲಿ ಆರ್ಥಿಕವಾಗಿ ಹಿಂದುಳಿದವರು ಇದ್ದಾರೆ. ಅವರ ಸಮಸ್ಯೆಗಳ ಬಗ್ಗೆ ತಮಗೆ ಈ ಸರಕಾರ ಏನು ಮಾಡಿದೆ ಎಂಬುದು ತಿಳಿದಿದೆ. ೨೪-೪-೧೯೭೮ರ ವರೆಗೆ ೨೮-೪-೧೯೮೭ರ ವರೆಗೆ ಸಾವಿರಾರು ಜನರನ್ನು ದಿನಗೂಲಿ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಂಡಿದ್ದು ಉಂಟು. ಅದಕ್ಕೆ ೨೮-೪-೧೯೮೭ರಲ್ಲಿ ಒಂದು ಬ್ಯಾನ್ ಮಾಡಿದರು. ಇನ್ನು ಮುಂದೆ ಯಾವುದೇ ನೇಮಕಾತಿಯನ್ನು ಈ ರೀತಿಯಲ್ಲಿ ಮಾಡಿಕೊಳ್ಳಬಾರದು ಎಂದು ಹೇಳಿದ್ದು ಆಯಿತು. ಆದರೆ ಅನೇಕ ಕಾಮಗಾರಿಗಳಿಗೆ ಅವರ ಅಗತ್ಯ ಇತ್ತು. ರಿಕ್ರೂಟ್‌ಮೆಂಟ್ ಸರಿಯಾಗಿ ಆ ಕಾಲದಲ್ಲಿ ಆಗುತ್ತಾ ಇರಲಿಲ್ಲ ಮತ್ತು ಅನೇಕ ನೀರಾವರಿ ಯೋಜನೆಗಳನ್ನು ಆಗ ತೆಗೆದುಕೊಂಡಿದ್ದಾರೆ ಆ ಕಾರಣದಿಂದಾಗಿ ಅಧಿಕಾರಿಗಳು ಕೆಲಸ ಮಾಡಲೇ ಬೇಕಾದ ಅಗತ್ಯ ಇತ್ತು. ಮತ್ತು ನಿಯಮಗಳ ಪ್ರಕಾರವೂ ಸ್ಥಳೀಯ ಅಧಿಕಾರಿಗಳ ನೇಮಕ ಮಾಡಿಕೊಳ್ಳುವುದಕ್ಕೆ ಅಧಿಕಾರವೂ ಇತ್ತು. ಹಾಗಾಗಿ ಅವರು ನೇಮಕ ಮಾಡಿಕೊಂಡು ಹೋದರು. ಅದಕ್ಕೆ ೧೯೮೭ರಲ್ಲಿ ಬ್ಯಾನ್ ಮಾಡಿದರು.

೪-೩೦ ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ.—ಆಡಿಟರ್ ಜನರಲ್ ಅಬ್ಜೆಕ್ಷನ್ ಕೊಟ್ಟಿದ್ದಾರಲ್ಲಾ, ಅದಕ್ಕೆ ಉತ್ತರ ಕೊಡಿ. ೧೯೮೨ನೇ ಇಸವಿಯವರೆಗೆ ಮಾಡಿದ್ದಾರಲ್ಲಾ, ಅವರ ಮೇಲೆ ಮತ್ತು ಅದರ ನಂತರ ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಹೇಳಿ.

ಶ್ರೀ ಎಂ. ಚಂದ್ರಶೇಖರ್.—ಧಾರವಾಡ ವಿಭಾಗದಲ್ಲಿ ಕೆಲವರನ್ನು ತೆಗೆದುಹಾಕಿದಾಗ ಅವರು ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲಿ ಅವರಿಗೆ ತಡೆ ಸಿಕ್ಕಿತು. ಆಮೇಲೆನಾಯಿತೆಂದರೆ ತಡೆ ಇದ್ದರೂ ಕೂಡ ೫೫೦೦ ಇದ್ದದ್ದು ಮುಂದುವರಿದುಕೊಂಡೇ ಹೋಯಿತು. ಆಮೇಲೆ ಏಪ್ರಿಲ್ ೧೯೮೫ರಲ್ಲಿ ೧-೪-೧೯೮೨ರ ಆಜ್ಞೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ನಾವು ೧೯೮೩ರ ವರೆಗಿದ್ದವರನ್ನು ಬಿಟ್ಟು ಉಳಿದವರನ್ನು ತೆಗೆದುಹಾಕಿದಾಗ ಮತ್ತೆ ಅವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಈ ಮಧ್ಯೆ ನಿಯಮಗಳ ವಿರುದ್ಧ ಯಾರೆಲ್ಲರನ್ನೂ ತೆಗೆದುಕೊಂಡು ಕಂಟೆಂಪ್ಟ್ ಆಫ್ ಕೋರ್ಟ್ ಆಗಲು ಕಾರಣವಾಯಿತೋ ಅವರಿಗೆಲ್ಲಾ ಕೋರ್ಟ್ ಆದೇಶದಂತೆ ಬ್ಯಾಕ್‌ವೇಜಸನ್ನು ೫೮೩೩ ಮಂದಿಗೆ ಕೊಡಬೇಕಾಗಿ ಬಂತು.

ಶ್ರೀ ಬಿ. ಬಸವಲಿಂಗಪ್ಪ.—ಯಾರ್ಯಾರು ಇಷ್ಟಕ್ಕೆಲ್ಲಾ ಕಾರಣರು ಎಂದು ನೀವು ಇಲ್ಲಿ ಹೇಳಬೇಕು ಅಂಥವರ ಮೇಲೆ ಏನೇನು ಕ್ರಮ ಜರುಗಿಸಿದ್ದೀರಿ ಎಂಬುದನ್ನೂ ತಿಳಿಸಬೇಕು ಮತ್ತು ಅಡ್ವೋಕೇಟ್ ಜನಗೆಲ್ಲರ ಅಬ್ಜೆಕ್ಷನ್ ಬಗ್ಗೆಯೂ ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಕೋಟ್ಯಂತರ ರೂ,ಗಳ ಅನುದಾನದ ಕೆಲಸಗಳು ನಡೆಯುತ್ತಿರುತ್ತವೆ ಕೆಲವೊಮ್ಮೆ ಸ್ಥಳೀಯ ಅಧಿಕಾರಿಗಳು ನೇಮಕ ಮಾಡಿಕೊಂಡಿರಬಹುದು. ಕೋರ್ಟ್ ಸ್ಟೇ ಇರುವುದನ್ನು ಗಮನಿಸಿ ಅವರು ನಿಲ್ಲಿಸಬೇಕಾಗಿತ್ತು, ಅದನ್ನು ಅವರು ಮಾಡಲಿಲ್ಲ. ಆಮೇಲೆ ಮತ್ತೊಂದು ಸಮಸ್ಯೆ ೨೧ ಜನ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳದು......

ಶ್ರೀ ಬಿ. ಬಸವಲಿಂಗಪ್ಪ.—ಅವರ ಮೇಲೂ ಆಕ್ಷನ್ ತೆಗೆದುಕೊಳ್ಳಬೇಕೆಂದು ಈಗಾದರೂ ನೀವು ಹೇಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ನಾನು ಎಕ್ಸ್‌ಮಿನ್ ಮಾಡುತ್ತೇನೆ. ನಾವು ಕ್ರಮ ತೆಗೆದು ಕೊಳ್ಳುತ್ತೇವೆ. ಇದಕ್ಕೆ ಕಾನೂನಿನ ಅಡೆತಡೆಯೂ ಇದೆ. ಅದನ್ನು ಹೇಗೆ ತೆಗೆಯಬೇಕು ಎಂಬುದನ್ನೂ ನೋಡೋಣ. ಲೋಕಲ್ ಆಫೀಸರ್ಸ್‌ಗೆ ಅಧಿಕಾರ ಇರಬೇಕೋ ಬೇಡವೋ ಎಂಬುದನ್ನೂ ನೋಡೋಣ.

ಶ್ರೀ ಬಿ.ಬಸವಲಿಂಗಪ್ಪ.—ಒಂದು ಪಕ್ಷ ಅವರಿಗೆ ಅವಕಾಶವಿದ್ದರೆ ಕಾನೂನು ಮೀರಿ ರಿಕ್ರೂಟ್ ನಡೆ ಮಾಡಿಕೊಳ್ಳಲು ಅವರಿಗ ಅಧಿಕಾರ ಕೊಡಬಾರದು. ಬಹಳ ವರ್ಷಗಳಿಂದ ತಪ್ಪು ದಾರಿಯಲ್ಲಿಯುತ್ತಿದ್ದೀರಿ. ದಯಮಾಡಿ ನೀವು ಸ್ಥಿರವಾದ ಮನಸ್ಸನ್ನು ಇಟ್ಟುಕೊಳ್ಳಿ. ಕಠಿಣವಾದ ಮನಸ್ಸನ್ನು ತಾವು ಇಟ್ಟು ಕೊಳ್ಳಬೇಕು. ಮಾಡಿದರೆ ಮಾಡಲೀ ನೋಡುತ್ತೇನೆಂದು ಹೇಳಿದರೆ ಹೇಗೆ ? ದಯಮಾಡಿ ನೋಡಿ.

ಶ್ರೀ ಎಂ. ಚಂದ್ರಶೇಖರ್.—ನೋಡುತ್ತೇನೆ ದಿನಾಂಕ ೨೪-೩-೭೮ರಲ್ಲಿ ೨೫ ಜನ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್‌ಗಳ ಡೈರೆಕ್ಟ್ ರೆಕ್ರೂಟ್‌ಮೆಂಟ್ ಬಗ್ಗೆ ಪ್ರಶ್ನೆ ಕೇಳಿದ್ದಾರೆ ಇದನ್ನು ಜಾರಿ ಮಾಡಿಲ್ಲವೆಂದು ಹೇಳಿದ್ದಾರೆ ಇದಕ್ಕೆ ಕಾರಣವೇನು ಎಂದು ಗೊತ್ತಿದೆ ಆದರೂ ಹೇಳಬೇಕೆಂದು ಹೇಳಿದ್ದೀರಿ ೧೯೫೮ ರಿಂದ ೧೯೭೮ರ ಒಳಗಾಗಿ ಅನೇಕ ಜನ ಬಡ್ತಿ ಹೊಂದಿದಂತಹ ಪರಿಶಿಷ್ಟ ಜಾತಿ ಜನಾಂಗದ ಅಧಿಕಾರಿಗಳು ಯಾರಿದ್ದಾರೆ ಅವರು ಆ ಸ್ಥಾನದಲ್ಲಿದ್ದು ಈ ನಿಯಮವನ್ನು ಪಾಲನೆ ಮಾಡಿದರೆ ಅವರು ರಿವರ್ಟ್ ಆಗುವಂತಹ ಸೂಚನೆಗಳು ಕಂಡು ಬಂತು ಎಂದು ಅವರಲ್ಲಿ ಒಬ್ಬರು ಕೋರ್ಟಿಗೆ ಹೋದರು ಅದರಿಂದಾಗಿ ಇದನ್ನು ಮುಂದುವರೆಸುವುದಕ್ಕೆ ಆಗಲಿಲ್ಲ. ಅದನ್ನು ಮಾಡಿದರೆ ಪ್ರಮೋಷನ್ ಕೊಟ್ಟಿರುವವರನ್ನು ಡಿಟ್ರೆಂಚ್ ಮಾಡಬೇಕಾಗಿತ್ತು ಆದ್ದರಿಂದ ಇದನ್ನು ಚಾಲೂ ಮಾಡುವುದಕ್ಕಾಗಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ದಯಮಾಡಿ ಸದನವನ್ನು ದಾರಿಯಲ್ಲಿಡಿ. ದಾರಿ ತಪ್ಪಿಸಬೇಡಿ ಹೈಕೋರ್ಟಿಗೆ ಹೋಗಿ ಸ್ಟೇ ತಂದರು ಎಂದು ಹೇಳುತ್ತಿದ್ದೀರಿ. ಕೆಲವು ಜನರಿಗೆ ಅನ್ಯಾಯವಾದರೆ ಆಗಲೀ ನೀವು ಮಾಡಬೇಕಾಗಿತ್ತು. ನೀವು ಮಾತನಾಡುವ ಭಾಷೆ ಸರಿಯಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಪ್ರಮೋಷನ್ ಕೊಟ್ಟು ಅವನು ಮೇಲೆ ಹೋಗಿ ಮತ್ತೆ ರಿವರ್ಟ್ ಆದರೆ ಆ ನೋವು ಅವರಿಗೇ ಗೊತ್ತಾಗುವುದು. ಬೇರೆಯವರಿಗೆ ಗೊತ್ತಾಗುವುದಿಲ್ಲ ಹೈಕೋರ್ಟಿಗೆ ಹೋಗಿ ತಗಾದೆ ಮಾಡಿದರೆ ನಾವೇನು ಮಾಡುವುದಕ್ಕಾಗುತ್ತದೆ ?

ಅಧ್ಯಕ್ಷರು.—ತಾವು ಯಿಲ್ಡ್ ಆಗಬೇಡಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಚಂದ್ರಶೇಖರ್‌ರವರು ಬಹಳ ಒಳ್ಳೆಯವರು ಅವರ ಮನಸ್ಸು ಒಳ್ಳೆಯದು ಆದರೆ ಉತ್ತರ ಕೊಡುವುದಕ್ಕೆ ಅವರನ್ನು ಸರಿಯಾಗಿ ತರಬೇತಿ ಮಾಡಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಇದುವರೆಗೆ ನಡೆದಿದ್ದೆಲ್ಲಾ ಸರಿ ಇನ್ನು ಮುಂದೆ ಸರಿ ಮಾಡಿಕೊಳ್ಳಿ ಎಂದು ಹೇಳುತ್ತಿದ್ದೀರಿ. ನೀವು ಹೇಳಿದ್ದು ಅದೇ ತಾನೇ ? ಹೈಕೋರ್ಟಿನಿಂದ ರಿಜೆಕ್ಟ್ ಆಗಿದೆ. Case was transferred to Karnataka Administrative Tribunal. It was submitted that the aforesaid rule has been repealed. ಹೈಕೋರ್ಟ್ ನಿರ್ದೇಶನದ ಮೇಲೆ ವಾಪಸ್ ತೆಗೆದುಕೊಳ್ಳಬೇಕಾಯಿತು. Karnataka PWD Services Amendment) rule, 1982, which has been published in the Karnataka

Gazette in 15-3-1984. ಶ್ರೀ ಜನರನ್ನು ಬೇರೆ ಯಾವುದೇ ಭಾವನೆಯಿಂದ ತೆಗೆದುಕೊಳ್ಳುವುದಿಲ್ಲ ವೆಂದು ಅಲ್ಲ. ಅದೇ ವರ್ಗಕ್ಕೆ ಸೇರಿದಂತಹ ಆಗಲೀ ಬಡ್ತಿ ಹೊಂದಿದಂತಹ ಜನರಿಗೆ ಅವರ ಬೇಡಿಕೆ ಒತ್ತಾಯದ ಮೇಲೆ ಇವರನ್ನು ಮುಂದುವರಿಸುವುದಕ್ಕಾಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ರೆವಿನ್ಯೂ ಅಧಿಕಾರಿಗಳಿಲ್ಲವೇ...

ಶ್ರೀ ಎಂ. ಚಂದ್ರಶೇಖರ್.—ನೀವು ಆ ಸ್ಥಾನದಲ್ಲಿದ್ದರೆ ಅದರ ಕಷ್ಟಸುಖ ಗೊತ್ತಾಗುತ್ತದೆ.

ಅಧ್ಯಕ್ಷರು.—ನೀವು ಅವರ ಕಡೆಗೆ ನೋಡಬೇಡಿ ಅವರು ಅಟ್ಯಾಕ್ ಮಾಡುತ್ತಾರೆ.

ಶ್ರೀ ಎ.ಲಕ್ಷ್ಮೀಸಾಗರ್.—ಮಾನ್ಯ ಬಸಲಿಂಗಪ್ಪನವರ ವಿಚಾರದಲ್ಲಿ ನಾನು ತುಂಬಾ ಗೌರವವನ್ನು ಇಟ್ಟುಕೊಂಡಿದ್ದೇನೆ. ಅನಿರ್ವಚನೀಯವಾದಂತಹ ಗೌರವ, ಮರ್ಯಾದೆ, ಅವರ ಪ್ರತಿಷ್ಠೆಗೆ ಮತ್ತು ಅವರು ತಾಳತಕ್ಕಂತಹ ನಿಲುವಿಗೆ ನಾನು ಗೌರವವನ್ನು ಕೊಡುತ್ತೇನೆ. ಅವರು ಇಲ್ಲಿ ಮಂತ್ರಿಯಾಗಿ ಕೆಲಸ ಮಾಡುತ್ತಿದ್ದುದನ್ನು ನಾನು ಬಹಳ ಚೆನ್ನಾಗಿ ನೋಡಿದ್ದೇನೆ. ಅವರು ಮಂತ್ರಿಯಾಗಿ ಉತ್ತರ ಕೊಡುವ ಸಮಯದಲ್ಲಿ ನಾವು ಯಾರೂ ಅಡ್ಡಿ ಬರಲಿಲ್ಲ. ಏನೇನು ಸ್ಪಷ್ಟೀಕರಣ ಕೇಳಬೇಕೋ......

ಶ್ರೀ ಕೆ.ಹೆಚ್. ಪಾಟೀಲ್.—ಅವರು ಮಂತ್ರಿಯಾಗಿದ್ದಾಗ ನೀವು ಇಲ್ಲಿ ಕುಳಿತಿದ್ದಿರಿ ಆಗ ನೀವು ಮಂತ್ರಿಯಾಗಿ ಕೆಲಸ ಮಾಡಿರಲಿಲ್ಲ. ತಮಗೆ ಬೇಕಾದ ಹಾಗೆ ವಾಕ್ ಸ್ವಾತಂತ್ರ್ಯ ಇತ್ತು. ಆದರೆ ಈಗ ದುರ್ದೈವ ಏನಾಗಿದೆ ಎಂದರೆ ನೀವುಗಳು ನಾವು ಏನೂ ಮಾಡಿಲ್ಲ ಎಂದು ಹೇಳುತ್ತೀರಿ ಅದೇ ರೀತಿ ನೀವು ಏನು ಮಾಡಿದ್ದೀರಿ ಎಂಬುದನ್ನೂ ಸಹ ಹೇಳಬೇಕು. ನಾವು ಇದ್ದಾಗ ಮಾಡಲಿಲ್ಲ ಎಂದು ಹೇಳಿದರೆ ನೀವು ಅದನ್ನು ಸರಿ ಮಾಡಬೇಕು, ನಾವೇ ಮಾಡಿದ್ದರೆ ಅಲ್ಲೇ ಇರುತ್ತಿದ್ದೆವು, ಇಲ್ಲಿಗೆ ಏತಕ್ಕೆ ಬರುತ್ತಿದ್ದೆವು ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಪಾಟೀಲರು ಬಹಳ ಜಾಣರಾಗಿ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್.—ನಿಮ್ಮನ್ನು ಸೋಲಿಸಿದ್ದು ಒಂದೇ ನಾವು ಮಾಡಿದ್ದುದು. ಇದಕ್ಕಿಂತ ಏನು ಬೇಕು ?

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಬ್ರಾಂದಿ ಷಾಪ್ಸ್‌ಗಳನ್ನು ಓಪನ್ ಮಾಡಿದಿರಿ ಅಷ್ಟೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್.—ಕುಡಿಯುವ ನೀರನ್ನು ಕೊಟ್ಟಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಕಟ್ಟುನಿಟ್ಟಾಗಿ ಇರಿ. ಅವರೇ ತಕರಾರು ಮಾಡಿದ್ದಾರೆ, ಇದು ವಿಪರೀತಕ್ಕೆ ಹೋಯಿತು.

ಅಧ್ಯಕ್ಷರು.—ಹೌದು ಟೂ ಮಚ್.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ ಇಂಗ್ಲೀಷ್ ಶಬ್ದ ಸರಿ ಇಲ್ಲ. ಟೂ ಮಚ್ ಎನ್ನುವುದು ಸರಿಯಲ್ಲ. ಅಸಹ್ಯವಾಗಿಬಿಟ್ಟಿದೆ. ನಿಮಿಷ ನಿಮಿಷಕ್ಕೂ ಎದ್ದೇಳುತ್ತಾರೆ, ಫುಟ್ ಬಾಲ್ ಎದ್ದ ಹಾಗೆ, ಅವರ ಈ ಅದಮ್ಯ ಶಕ್ತಿಯನ್ನು ಅವರು ಉತ್ತರ ಕೊಡುವವರೆಗೆ ಸ್ವಲ್ಪ ಅದನ್ನು ದಮ್ಯ ಮಾಡಿ ಹಿಡಿದಿಟ್ಟುಕೊಂಡು ಏನೇನು ಕೇಳಬೇಕೋ ಕೇಳಿದರೆ ಸಭ್ಯಮನೋಭಾವ ತೋರಿದಂತಾಗುತ್ತದೆ, ಅಲ್ಲಿಯವರೆಗೂ ಈ ಸಭೆಯಲ್ಲಿ ಎಲ್ಲರೂ ಸಭ್ಯ ಮನೋಭಾವದಿಂದ ಇರಬೇಕು.

ಅಧ್ಯಕ್ಷರು.—ಮಾನ್ಯ ಚಂದ್ರಶೇಖರ್‌ರವರೇ, ನೀವು ಉತ್ತರವನ್ನು ನೇರವಾಗಿ ಸದನಕ್ಕೇ ಹೇಳಿಬಿಡಿ ಮಾನ್ಯ ಬಸವಲಿಂಗಪ್ಪನವರಿಗೆ ಹೇಳಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್ನಡ ಸಾಹಿತ್ಯಪರಿಷತ್ತನ್ನು ಸೂಪರ್‌ಸೀಡ್ ಮಾಡಿ ಡೆಪ್ಯುಟಿ ಕಮಿಷನರಿಗೆ ಛಾರ್ಜ್ ಕೊಟ್ಟಿದ್ದೀರಿ. ಇವರಿಗೆ ಸ್ವಲ್ಪ ಛಾರ್ಜ್‌ಕೊಡಿಸಿ ಇವರನ್ನೇ ಛೇರ್ಮನ್ ಗೀರ್ಮನ್ ಮಾಡಿ.

ಅಧ್ಯಕ್ಷರು.—ಆಯಿಂತು ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಸವಲಿಂಗಪ್ಪನವರ ಭಾಷೆ ಉಪಯೋಗಿಸಿದರೆ ನೆಗೆದು ಬಿದ್ದು ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು.—ಅದು ಅವರ ಭಾಷೆ ಅಲ್ಲ. ಅದು ಪ್ರಭಾಕರ್‌ರವರ ಭಾಷೆ...

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಬಗ್ಗೆ ಮಾತನಾಡಿದ್ದಾರೆ. ಹಿಂದೆ ಮಧ್ಯೆ ಪ್ರವೇಶ ಮಾಡಿ ಕೇಳಿದ್ದನ್ನು ನೋಡಿದ್ದೀರಾ ? ಎದ್ದೆದ್ದು ಮಾತನಾಡುತ್ತೇನೆ ಎಂದು ಇಟ್ಟುಕೊಳ್ಳೋಣ. ಏತಕ್ಕೆ ಮಾಡುತ್ತಿದ್ದೇನೆಂದರೆ ಮಾನ್ಯ ಮಂತ್ರಿಗಳು ಏನು ಇದ್ದಾರೆ, ಅವರಿಗೆ ಹೊಸದಾಗಿ ಪಿ.ಡಬ್ಲ್ಯೂ.ಡಿ ಡಿಪಾರ್ಟ್‌ಮೆಂಟನ್ನು ಕೊಟ್ಟಿದ್ದಾರೆ. ಎರಡು ವರ್ಷ ಆದರೆ ಅನುಭವದ ಹಿನ್ನೆಲೆಯಲ್ಲಿ ನೋಡದೆ ಹೇಳಿಬಿಡುತ್ತಿದ್ದರು. ಈಗ ಪ್ರತಿಯೊಂದಕ್ಕೂ ನೋಡಿನೋಡಿ ಉತ್ತರವನ್ನು ಹೇಳುತ್ತಿದ್ದಾರೆ. ಅಸಹ್ಯ ಎಂಬ ಪದವನ್ನು ಹೇಳಿದ್ದಾರೆ, ಅದಕ್ಕೋಸ್ಕರ ನಾನು ಹೇಳುತ್ತೇನೆ. ಮೊದಲು ಅರ್ಬನ್ ಡೆವಲಪ್‌ಮೆಂಟ್ ಇತ್ತಲ್ಲಾ, ಅಲ್ಲಿ ಕೊಳಚೆ ನೋಡಿ ನೋಡಿ ಆ ಭಾಷೆ ಅಭ್ಯಾಸವಾಗಿಬಿಟ್ಟಿದೆ. ದಯಮಾಡಿ ಈ ಕೆಲಸ ಮಾಡಬೇಡಿ. ನಾನು ಇದ್ದೆ. ಇಂಥ ಭಾಷೆ ಉಪಯೋಗಿಸಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸಲ್ಲದ ಭಾಷೆ ಅಸಹ್ಯ, ಇದರಲ್ಲಿ ತಪ್ಪೇನಿದೆ ?

ಶ್ರೀ ಎಂ. ಚಂದ್ರಶೇಖರ್.—ಇದರಲ್ಲಿ ಸುಮಾರು ೧೧,೬೬೦ ಗ್ಯಾಂಗ್‌ಮೆನ್ ಮತ್ತು ೧೮೦೦ ಚೌಡೀಸ್ ಮತ್ತು ಇತರೆ ೧೭೩೯ ಇಷ್ಟು ಜನರಿಗೂ ಇವತ್ತು ರೆಗ್ಯುಲರೈಸ್ ಆಗಿದೆ, ಅವರ ಒಂದು ಬೇಡಿಕೆ ಏನು ಇದೆ, ನಾವು ನಮ್ಮ ಸರ್ಕಾರ ಬಂದಾದ ಮೇಲೆ ಖಾಯಂ ಮಾಡಿ ತಿಂಗಳಿಗೆ ಮೂರು ನೂರು ರೂಪಾಯಿ ಸಂಬಳ ಕೊಡುತ್ತಿದ್ದು ಅವತ್ತಿಗೆ ಸರಿ ಹೋಯಿತು, ಖಾಯಂ ಅಯಿತಲ್ಲಾ ಎಂದು ಒಪ್ಪಿಗೆಯಾಯಿತು. ಆದರೆ ಈಗ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಕೊಡಬೇಕು ಎಂದು ಒತ್ತಾಯ ಇದೆ. ಅದು ನ್ಯಾಯಬದ್ಧವಾದಂಥ ಒಂದು ಬೇಡಿಕೆ ಎಂತಲೇ ಪರಿಗಣನೆ ಮಾಡ ಬೇಕಾಗುತ್ತದೆ. ಆದ್ದರಿಂದ ಇದನ್ನು ನಾವು ನಮ್ಮ ಸರ್ಕಾರದಲ್ಲಿ ನಾನು ಈಗ ನಗರಾಭಿವೃದ್ಧಿ ಸಚಿವನಾಗಿದ್ದೇನೆ, ನಮ್ಮ ಇಲಾಖೆಯಲ್ಲಿ ಹೋದವರ್ಷ ಈ ಮಿನಿಮಮ್ ಸ್ಕೇಲನ್ನು ಜಾರಿ ಮಾಡಿದ್ದೇವೆ. ಹಂಗಾಮಿ ನೌಕರರನ್ನು ಕನ್‌ಫರ್ಮ್ ಮಾಡುವ ಬಗ್ಗೆ ಹೇಳಬೇಕೆಂದರೆ ಇದುವರೆಗೆ ಸ್ವಲ್ಪ ಜನರನ್ನು ಖಾಯಂ ಮಾಡಿದ್ದೇವೆ. ಉಳಿದವರನ್ನು ಪರಿಶೀಲನೆಯಲ್ಲಿದೆ. ಡಿ.ಪಿ.ಎ.ಆರ್. ಮುಖಾಂತರವಾಗಿ ಅದು ಪರಿಶೀಲನೆಯಲ್ಲಿದೆ. ಆದ್ದರಿಂದ ಅವರ ಬೇಡಿಕೆ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದು ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಸಂಪುಟಕ್ಕೆ ಬರಬೇಕು. ಸಂಪುಟಕ್ಕೆ ಬಂದಮೇಲೆ ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಪಿ.ಡಬ್ಲ್ಯೂ.ಡಿ. ಬಗ್ಗೆ ಕೆಲವು ವಿಷಯಗಳನ್ನು ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ಅವರ ಮನಸ್ಸಿನಲ್ಲಿ ಇದ್ದ ಅನೇಕ ಅನುಮಾನಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಅವರೂ ಇದನ್ನು ಒಪ್ಪಿಕೊಳ್ಳುತ್ತಾರೆಂದು ನನ್ನ ಭಾವನೆ, ಇಲ್ಲದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಅವರು ಏನು ಹೇಳಿದ್ದಾರೆ ಎಂದರೆ ಹಿಂದೆ ನಾವು ಮಾಡಿದ ತಪ್ಪನ್ನು ನೀವು ಸರಿ ಮಾಡಿ ಎಂದು. ಅದರ ಬಗ್ಗೆ ನಮಗೂ ಕಾಳಜಿ ಇದೆ. ಕೆಲವು ವಿಷಯಗಳನ್ನು ಮಾನ್ಯ ಬ್ಲೇಸಿಯಸ್ ಡಿಸೋಜ ರವರು ಹೇಳಿದ್ದಾರೆ, ಅವುಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಬಸವಲಿಂಗಪ್ಪ.—ಅಕ್ಟ್ರಾಯಿ ವಿಚಾರ ಹೇಳಲಿಲ್ಲ,

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಡಿಸೋಜರವರು ಡಿಸ್ಟ್ರಿಕ್ಟ್ ಆಫೀಸ್ ಬಿಲ್ಡಿಂಗ್ ನಿರ್ಮಾಣ ಕಾರ್ಯದಲ್ಲಿ ಬಹಳ ವಿಳಂಬ ಆಗಿದೆ, ಸರಿಯಾದ ರೀತಿಯಲ್ಲಿ ಕಾಮಗಾರಿಗಳು ಆಗುತ್ತಿಲ್ಲ ವೆಂದು ಹೇಳಿದ್ದಾರೆ. ಕಾರಣ ಇಷ್ಟೇ, ಪಾಯ ತೆಗೆಯುವ ಕಾಲದಲ್ಲೇ ಮಣ್ಣಿನ ಗುಣ ಸರಿಯಾದ ರೀತಿಯಲ್ಲಿ ಇಲ್ಲದೇ ಇದ್ದುದರಿಂದ ಅದನ್ನು ಪರೀಕ್ಷೆ ಮಾಡಿ ಅಂದಾಜನ್ನು ಬೇರೆ ಮಾಡುವ ಪ್ರಸಂಗ ಬಂತು. ಆಮೇಲೆ ಫೈಲ್ ಫೌಂಡೇಷನ್ ಹಾಕಬೇಕಾಗಿ ಬಂತು. ಹಿಂದಿನ ಕಂಟ್ರಾಕ್ಟರ್

ಫೈಲ್ ಫೌಂಡೇಷನ್‌ಗೆ ಒಪ್ಪಿಕೊಳ್ಳಲಿಲ್ಲ. ಬೇರೆಯವರಿಗೆ ಕೆಲಸವನ್ನು ವಹಿಸಿದ್ದರಿಂದ ಕೆಲಸ ನಿಧಾನವಾಯಿತು. ಇದುವರೆಗೆ ೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ, ಮೇಲ್ಛಾವಣಿ ಬಂದಿದೆ. ಸಾಧ್ಯವಾದಷ್ಟು ಬೇಗ ಹಣಕಾಸಿನ ಅನುಕೂಲಗಳನ್ನು ನೋಡಿಕೊಂಡು ಅದನ್ನು ಮುಂದುವರೆಸುತ್ತೇವೆ. ಹ್ಯಾಮಿಲ್ಟನ್ ಸರ್ಕಲ್, ಬೇಡಿ ಹಿಲ್ ಸರ್ಕಲ್ ಅಭಿವೃದ್ಧಿ ಮಾಡ ಬೇಕೆಂದು ಹೇಳಿದ್ದಾರೆ. ಇದು ಸುಮಾರು ೯ ಲಕ್ಷ ರೂಪಾಯಿಗಳ ಕಾಮಗಾರಿ ಸಾಧ್ಯವಾದರೆ ಲೋಕೋಪಯೋಗಿ ಇಲಾಖೆಯ ಪತಿಯಿಂದ ಮಾಡುತ್ತೇವೆ. ಆದರೆ ಇವೊತ್ತು ನಗರಾಭಿವೃದ್ಧಿ ಯೋಜನೆಯಲ್ಲಿ ಬೆಟರ್‌ಮೆಂಟ್ ಛಾರ್ಜ್ ಅನ್ನು ವಸೂಲು ಮಾಡುತ್ತಿದ್ದೇವೆ. ಅದನ್ನು ವಸೂಲು ಮಾಡುವಾಗ ಯಾವ ರೀತಿ ನಗರದಲ್ಲಿ, ಬೆಂಗಳೂರು ಪ್ರಾಧಿಕಾರದ ಮುಖಾಂತರ ಕಾಮಗಾರಿಗಳಿಗೆ ಉಪಯೋಗ ಆಗಬಹುದೋ ಅಂಥದ್ದನ್ನು ನಗರಾಭಿವೃದ್ಧಿ ಯೋಜನೆ ಪತಿಯಿಂದ ೯ ಲಕ್ಷ ರೂಪಾಯಿ ಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಲೋಕೋಪಯೋಗಿ ಇಲಾಖೆ ಮುಖಾಂತರ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಹೆಲಿಕಾಪ್ಟರ್ ಬಗ್ಗೆ ಹೇಳಿದ್ದಾರೆ, ಎರಡು ಮೂರು ವರ್ಷದಿಂದ ಫೈಲಟ್‌ಗಳಿಗೆ ಬೇಕಾದಂತಹ ಹಣವನ್ನು ವೆಚ್ಚ ಮಾಡಿದ್ದೇವೆ. ಅದನ್ನು ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ತಮ್ಮ ವರದಿಯಲ್ಲಿ ರಿಮಾರ್ಕ್ ಮಾಡಿದ್ದಾರೆ. ಎಂದು ಹೇಳಿದ್ದಾರೆ. ಅದನ್ನು ತೆಗೆದುಕೊಂಡು ಇಬ್ಬರು ಫೈಲಟ್ ಬೇಕು ಎಂದು ಡಿಫೆನ್ಸ್ ಮಿನಿಸ್ಟ್‌ಗೆ ಕೇಳಿದಾಗ, ಸಿವಿಲ್ ಏವಿಯೇಷನ್ ಟ್ರೈನಿಂಗ್ ಸರ್ಟಿಫಿಕೇಟ್ ಬೇಕು ಎಂದು ಹೇಳಿದರು, ಖಾಸಗಿಯಾಗಿ ಓಡಿಸಬೇಕಾದರೆ ಸಿವಿಲ್ ಏವಿಯೇಷನ್ ಟ್ರೈನಿಂಗ್ ಸರ್ಟಿಫಿಕೇಟ್ ಬೇಕು ಎಂದು ಕೇಳಿದ ಪ್ರಯುಕ್ತ ಅದು ಬೇಕಾಯಿತು, ಮೊದಲು ಈ ಪದ್ಧತಿ ಇರಲಿಲ್ಲ. ವೆಸ್ಟ್ ಬೆಂಗಾಲ್‌ನ ಇಂಡಿಯನ್ ಕಮರ್ಷಿಯಲ್ ಪೈಲಟ್ ಅಸೋಸಿಯೇಷನ್ ರವರು ಕೋರ್ಟಿಗೆ ಹೋದ ಪ್ರಯುಕ್ತ ಅದು ನಿಧಾನವಾಯಿತು. ಅವರನ್ನು ಟ್ರೈನಿಂಗ್ ಕೊಟ್ಟು ಕೆಲಸ ಮುಗಿಸಲು ನಿಧಾನವಾಯಿತು. ಇವರುಗಳನ್ನು ಉಪಯೋಗಿಸಿಕೊಳ್ಳುವಾಗ ಇನ್‌ಶ್ಯೂರೆನ್ಸ್ ಛಾರ್ಜ್, ಸರ್ವೀಸ್ ಛಾರ್ಜ್ ಇವೆಲ್ಲಾ ಎಕ್ಸ್‌ಪೆಂಡಿಚರ್ ಆಗಿರುವುದು ನಿಜ. ಅದು ಆಗಿದೆ ಎನ್ನುವುದನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ನಾನು ಹೇಳಲಿಲ್ಲ. ಅಕೌಂಟೆಂಟ್ ಜನರಲ್‌ರವರು ರಿಮಾರ್ಕ್ ಮಾಡಿದ್ದಾರೆ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಚಂದ್ರಶೇಖರ್.—ಈ ಕಾರಣದಿಂದ ವಿಳಂಬ ಆಗಿದೆ, ಅವರನ್ನು ಉಪಯೋಗ ಮಾಡಿಕೊಳ್ಳದೇ ಇರುವುದಕ್ಕೆ ಕಾರಣ ಹೇಳಿದ್ದೇನೆ. ಎರಡನೆಯದು ಟ್ರೈನಿಂಗ್ ಇಲ್ಲದೇ ಹೋದರೆ ಅವರು ಓಡಿಸುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಯಾಕೆ ಖರೀದಿ ಮಾಡಬೇಕಾಗಿತ್ತು ? ೨೪ ತಿಂಗಳುಗಳಿಂದ ಸುಮ್ಮನೆ ಇದ್ದು ಖರ್ಚು ಮಾಡಿದ್ದೀರಿ, ಅದಕ್ಕೆ ಅಕೌಂಟೆಂಟ್ ಜನರಲ್‌ರವರು ಕೇಳಿದ್ದಾರೆ, ಅದಕ್ಕೆ ಸಮಾಜಾಯಿಷಿ ಕೊಡಿ.

ಶ್ರೀ ಎಂ. ಚಂದ್ರಶೇಖರ್.—ಆಮೇಲೆ ಕಾಳಿ ನದಿ ಸೇತುವೆ ಬಗ್ಗೆ ಸಹ ಹೇಳಿದ್ದಾರೆ. ಈ ಸೇತುವೆ ಕಟ್ಟಲು ಪಾಯ ತೆಗೆಯುವಾಗ ಪಾಯಕ್ಕೆ ಅನುಕೂಲವಾಗುವಂತಹ ಮಣ್ಣಿನ ಗುಣ ಇರಲಿಲ್ಲ ಇದರ ಜೊತೆಗೆ ಇದು ನ್ಯಾಷನಲ್ ಹೈ-ವೇಗೆ ವರ್ಗವಾದ ಕಾರಣ ಅವರ ಒಂದು ಡೈರೆಕ್ಷನ್ ಪ್ರಕಾರ ಮತ್ತು ಅವರ ಒಂದು ಅಂದಾಜಿನ ಪ್ರಕಾರ ಕಟ್ಟಬೇಕಾಗಿ ಬಂತು. ಇದರಿಂದ ಖರ್ಚು ಹೆಚ್ಚಾಯಿತು. ಈ ಕೆಲಸ ೧೯೭೭ ರಲ್ಲಿ ಪ್ರಾರಂಭವಾಗಿ ೧೯೮೨ ರಲ್ಲಿ ಮುಗಿದಿದೆ. ಮುಖ್ಯವಾಗಿ ಇದು ರಾಷ್ಟ್ರೀಯ ಹೆದ್ದಾರಿಯಾದ ಕಾರಣ ಕೇಂದ್ರ ಸರ್ಕಾರದ ಡೈರೆಕ್ಷನ್ ಪ್ರಕಾರ ಇದನ್ನು ಕಟ್ಟಬೇಕಾಗಿ ಬಂತು. ಈ ಕೆಲಸ ನಿಧಾನವಾಗುವುದಕ್ಕೆ ಇದು ಕಾರಣವೇ ಹೊರತು ಬೇರೆ ಕಾರಣಗಳು ಯಾವುವೂ ಇಲ್ಲ.

ಇನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿ ದ್ದಾರೆ. ಆದರೆ ಕಳೆದ ಮೂರು ವರ್ಷಗಳಿಂದ ಇದು ಯಾವ ರೀತಿ ಲಾಭ ಮಾಡುತ್ತಿದೆ ಎಂಬುದನ್ನು ಹೇಳಿದ್ದೇನೆ. ಮಾನ್ಯ ಫರ್ನಾಂಡೀಸ್ ಅವರು ಬೆಂಗಳೂರು ಏರ್‌ಪೋರ್ಟ್‌ನ್ನು ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಮಟ್ಟಕ್ಕೆ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ, ಈ ಕೆಲಸ ಆಗಬೇಕಾಗಿದೆ,

ನಮ್ಮೆಲ್ಲರ ಆಶೆ ಇದೇ ಆಗಿದೆ. ಆದರೆ ಸಿವಿಲ್ ಏವಿಯೇಷನ್ ಡಿಪಾರ್ಟ್‌ಮೆಂಟ್‌ನವರು ಈ ಬಗ್ಗೆ ಮೊದಲು ಕೇಂದ್ರದ ಹಣಕಾಸು ಇಲಾಖೆಯ ಮತ್ತು ಕೇಂದ್ರದ ಗೃಹ ಇಲಾಖೆಯ ಅನುಮತಿ ಪಡೆದು ಕೊಳ್ಳಿ ಎಂದು ಹೇಳಿದ್ದಾರೆ. ಏಕೆಂದರೆ, ಕಸ್ಟಮ್ಸ್ ಮತ್ತು ಎಮಿಗ್ರೇಷನ್ ಪ್ರಾಬ್ಲಮ್ಸ್ ಇರುವುದ ರಿಂದ ಕೇಂದ್ರದ ಈ ಎರಡು ಇಲಾಖೆಗಳ ಅನುಮತಿ ಅಗತ್ಯವೆಂದು, ಅವರು ಒಪ್ಪಿಗೆ ಕೊಟ್ಟಮೇಲೆ ಈ ಯೋಜನೆಯನ್ನು ಕ್ಲಿಯರ್ ಮಾಡೋಣವೆಂದು ಸಿವಿಲ್ ಏವಿಯೇಷನ್ ಡಿಪಾರ್ಟ್‌ಮೆಂಟ್‌ನವರು ಹೇಳಿದ್ದಾರೆ. ಆದ್ದರಿಂದ ಈಗ ಸಧ್ಯಕ್ಕೆ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ.

ಇನ್ನು ಮಾನ್ಯ ಪಂಪಾಪತಿ ಅವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ದಾವಣಗೆರೆ ಭದ್ರಾವತಿ ರಸ್ತೆಯ ಬಗ್ಗೆ ಅವರು ಹೇಳಿದ್ದಾರೆ. ಬೈಪಾಸ್ ರಸ್ತೆ ಆಗಬೇಕೆಂದು ಹೇಳಿದ್ದಾರೆ. ಈಗಿರುವಂತಹ ರಸ್ತೆಯಲ್ಲಿ ಎರಡು ಕಡೆಗಳಲ್ಲಿ ರೈಲು ದಾರಿಯನ್ನು ದಾಟಬೇಕಾದ ಕಾರಣ ಇದರ ಅಗತ್ಯವಿದೆ ಎಂದು ಹೇಳಿದ್ದಾರೆ. ಇದನ್ನು ತಪ್ಪಿಸಲು ಬೈಪಾಸ್ ರಸ್ತೆ ಅಗತ್ಯವಿದೆ ಎಂದು ಹೇಳಿದ್ದಾರೆ. ಹರಿಹರದಿಂದ ದಾವಣಗೆರೆಗೆ ಬರುವಂತಹ ಹೆದ್ದಾರಿ ಏನಿದೆ, ಅದರ ಪಕ್ಕದಲ್ಲಿ ಮತ್ತೊಂದು ರಸ್ತೆ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳಿದ್ದಾರೆ. ಆದರೆ ಈ ಕೆಲಸ ಕೈಕೊಳ್ಳಬೇಕಾದರೆ ಸುಮಾರು ೫ ಕಿ.ಮೀ. ನಷ್ಟು ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಆದರೆ ಇದು ನೀರಾವರಿ ಜಮೀನು ಆಗಿರುವುದರಿಂದ ಸ್ವಾಧೀನಪಡಿಸಿಕೊಳ್ಳಲು ಹೆಚ್ಚು ಖರ್ಚು ಬರುತ್ತದೆ. ಇದರ ಜೊತೆಗೆ ಎರಡು ರೈಲ್ವೆ ಗೇಟ್‌ಗಳನ್ನು ಕಟ್ಟಬೇಕಾಗುತ್ತದೆ. ಇದಕ್ಕೆಲ್ಲಾ ಹೆಚ್ಚು ಖರ್ಚು ಬರುತ್ತದೆ. ಆದ್ದರಿಂದ ಈಗ ಸಧ್ಯಕ್ಕೆ ಇರುವಂತಹ ರಸ್ತೆಯನ್ನೇ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಮುಂದೆ ಈ ಬಗ್ಗೆ ಅತಿ ಹೆಚ್ಚಿನ ಬೇಡಿಕೆ ಏನಾದರೂ ಬಂದರೆ ಪರಿಶೀಲನೆ ಮಾಡಬಹುದು.

ಆಮೇಲೆ ಮಾನ್ಯ ಬೆಲ್ಲದ್ ಅವರು ನೆನ್ನೆದಿವಸ ಮಾತನಾಡುವಾಗ ಹುಬ್ಬಳ್ಳಿಯ ಬೈಪಾಸ್ ರಸ್ತೆ ಕೆಲಸ ಬಹಳ ನಿಧಾನವಾಗುತ್ತಿದೆ ಎಂದು ಹೇಳಿದ್ದಾರೆ. ಈ ರಾಷ್ಟ್ರೀಯ ಹೆದ್ದಾರಿಯು ಸುಮಾರು ೩೦ ಕಿಲೋಮೀಟರ್‌ನಷ್ಟು ಉದ್ದ ಇದೆ. ಇವರಲ್ಲಿ ೧೭.೪ ಕಿ.ಮೀ. ನಷ್ಟು ಕೆಲಸ ಮುಗಿದಿದೆ. ಇನ್ನುಳಿದ ಕೆಲಸವನ್ನು ಮುಗಿಸಲು ಈ ಸಾಲಿನಲ್ಲಿ ಅಂದರೆ ೧೯೮೮-೮೯ನೇ ಸಾಲಿನಲ್ಲಿ ೧೧೦ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅವರ ಒಪ್ಪಿಗೆ ಬೇಗ ಬರುತ್ತದೆಂದು ನಾವು ತಿಳಿದಿದ್ದೇವೆ. ಅವರ ಒಪ್ಪಿಗೆ ಸಿಕ್ಕಿದ ನಂತರ ಇದನ್ನು ಪೂರ್ಣ ಮಾಡುತ್ತೇವೆ.

ಮಾನ್ಯ ಮೂಡಲಗಿರಿಯಪ್ಪನವರು ನ್ಯಾಷನಲ್ ಹೈವೇಗೆ ಕೇಂದ್ರದ ಹಣ ಬರುತ್ತದೆ ಚೆನ್ನಾಗಿ ದುರಸ್ತಿ ಮಾಡುತ್ತೀರಿ, ಆದರೆ ರಾಜ್ಯದ ರಸ್ತೆಗಳು, ಜಿಲ್ಲಾಮಟ್ಟದ ರಸ್ತೆಗಳ ದುರಸ್ತಿ ಕಾರ್ಯ ಆಗುತ್ತಾ ಇಲ್ಲ ವಾಹನ ಸಂಚಾರಕ್ಕೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಮತ್ತು ಅವರ ಊರಿನ ಸಿರಾ-ಅಮರಾಪುರ ರಸ್ತೆಗೆ ಡಾಂಬರ್ ಹಾಕಿಲ್ಲ, ಮಾಡಿಸಬೇಕು ಎಂದು ಹೇಳಿದ್ದಾರೆ. ಇದು ೧೪.೨ ಕಿಲೋ ಮೀಟರ್ ರಸ್ತೆ ಇದ್ದು ಈಗಾಗಲೇ ೩೦ ಕಿಲೋಮೀಟರ್ ಆಗಿದೆ. ಈ ವರ್ಷ ೫ ಕಿಲೋಮೀಟರ್ ರಸ್ತೆ ತೆಗೆದುಕೊಂಡು, ಈ ವರ್ಷ ಅಥವಾ ಮುಂದಿನ ವರ್ಷದಲ್ಲಿ ಪೂರ್ಣ ಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೇವೆ. ಮಾನ್ಯ ಭೂಪತಿಯವರು ಮುಖ್ಯವಾಗಿ ಕಾರ್ಮಿಕರ ಸಮಸ್ಯೆಯನ್ನು ಪ್ರಸ್ತಾಪ ಮಾಡಿದರು. ಡೈಲಿ ವೇಜಸ್ ವಿಚಾರದಲ್ಲಿ ಅದಕ್ಕೆ ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಅಲ್ಲದೆ ಅವರ ಕ್ಷೇತ್ರದಲ್ಲಿ ಕೆಲವಾರು ಬ್ರಿಡ್ಜ್‌ಸ್ ಸರಿಯಾಗಿಲ್ಲ, ಉಪಯೋಗವಾಗುತ್ತಾ ಇಲ್ಲ ಕ್ಲೋಸ್ ಮಾಡಿ ಬಿಟ್ಟಿದ್ದಾರೆ ಎಂದು ಹೇಳಿದ್ದಾರೆ. ಬಳ್ಳಾರಿ-ಚಳ್ಳಕೆರೆ ರಸ್ತೆ ವಿಚಾರವಾಗಿ ಹೇಳಿದ್ದಾರೆ. ಅದಕ್ಕೆ ಹೋದವರ್ಷ ೬.೫ ಲಕ್ಷದ ಕೆಲಸ ನಡೆದಿದೆ, ಇನ್ನೂ ನಡೆಯಬೇಕಾಗಿದೆ. ಆಮೇಲೆ ಮಾನ್ಯ ವಿನಯ ಕುಮಾರ ಸೊರಕೆಯವರು ಪುತ್ತೂರು ಬೈಪಾಸ್ ವಿಚಾರದಲ್ಲಿ ಹೇಳಿದರು. ಅಲ್ಲಿ ಭೂಸ್ವಾಧೀನ ಕ್ರಮ ಮಾಡಬೇಕಾಗಿದೆ. ಅದಕ್ಕೆ ಸುಮಾರು ೨೧ ಲಕ್ಷ ತೆಗೆದಿಟ್ಟಿದೆ. ಆದರೆ ಇನ್ನೂ ಭೂಸ್ವಾಧೀನ ಕಾರ್ಯ ವಾಗಿಲ್ಲ. ಅಲ್ಲಿ ಬೆಲೆ ಬಾಳುವಂಥ ಜಮೀನು ಇದೆ. ಅವರು ಹೇಳಿದರು, ನಾನು ಸಹಕರಿಸಿ ಕಡಿಮೆ ಬೆಲೆಗೆ ಜಮೀನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು. ಈ ಕಾಮಗಾರಿಯನ್ನು ತೆಗೆದು ಕೊಳ್ಳುವುದಕ್ಕೆ ಮೊದಲು ಭೂಸ್ವಾಧೀನ ಕ್ರಮ ಆಗಬೇಕಾಗಿದೆ. ಆದುದರಿಂದ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಿನಯ ಕುಮಾರ ಸೊರಕೆ.—ಕೆಲವರು ಅವರೇ ಬಂದು ಭೂಮಿಯನ್ನು ಕೊಡಲಿಕ್ಕೆ ತಯಾ ರಿದ್ದಾರೆ. ಕಾಮಗಾರಿಯನ್ನು ಸ್ಟಾರ್ಟ್ ಮಾಡಲಿಕ್ಕೆ ಈ ವರ್ಷ ದುಡ್ಡು ಇಡಿ.

ಶ್ರೀ ಎಂ. ಚಂದ್ರಶೇಖರ್.—ಮೊದಲು ಭೂಸ್ವಾಧೀನ ಕ್ರಮ ಆದರೆ. ಸ್ಯಾಂಕ್ಷನ್ ನಮಗೆ ಸಿಗುವುದು. ಭೂಮಿ ಇಲ್ಲದೇ ಇದ್ದ ಮೇಲೆ ಹಣ ಸ್ಯಾಂಕ್ಷನ್ ಮಾಡಿಸುವುದು ಹೇಗೆ. ಭೂಸ್ವಾಧೀನಕ್ಕೆ ಹಣ ಕೊಡುತ್ತೇವೆ ಎಂದು ಹೇಳಿದ ಮೇಲೆ ಸ್ವಲ್ಪವಾದರೂ ಪ್ರಾರಂಭವಾಗಲಿ.

ಶ್ರೀ ವಿನಯ ಕುಮಾರ ಸೊರಕೆ.—ಕಾಮಗಾರಿಕೆ ಮೊದಲು ದುಡ್ಡು ಇಡಿ.

ಶ್ರೀ ಕೆ. ಹೆಚ್. ಪಾಟೀಲ್.—ಜನರು ಕೊಡಲಿಕ್ಕೆ ಮುಂದೆ ಬಂದಾಗ, ಮಾಡಿಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟು ಸ್ವಲ್ಪವಾದರೂ ದುಡ್ಡು ಇಡಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲ್ಯಾಂಡ್ ಅಕ್ವಿಸಿಷನ್‌ಗೆ ದುಡ್ಡು ಇಡಬೇಕಲ್ಲಾ ?

ಶ್ರೀ ಎಂ. ಚಂದ್ರಶೇಖರ್.—ಅದಕ್ಕೆ ದುಡ್ಡು ಇಟ್ಟಿದೆ, ಪ್ರಾರಂಭವಾಗಲಿ. ಅದಕ್ಕೋಸ್ಕರ ಕಮಿಟಿ ಮಾಡಿಕೊಳ್ಳುವಂಥಾದ್ದಲ್ಲ. ಆಮೇಲೆ ಮಾನ್ಯ ಪೋಚಯ್ಯನವರು ರಸ್ತೆಗಳ ಮೇಂಟೆನೆನ್ಸ್ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ನಾನು ಈಗಾಗಲೇ ಹೇಳಿದ್ದೇನೆ. ೧೯೮೫–೮೬ ರಿಂದ ವರ್ಷೇ ವರ್ಷೇ ಹೆಚ್ಚು ಮಾಡಿಕೊಂಡು ಬಂದಿದ್ದೇವೆ. ೧೯೮೫–೮೬ ರಲ್ಲಿ ೩೧.೨೭ ಕೋಟಿ, ೧೯೮೬–೮೭ ರಲ್ಲಿ ೪೨.೩೪ ಕೋಟಿ, ೧೯೮೭–೮೮ ರಲ್ಲಿ ೪೨.೦೨ ಕೋಟಿ, ೧೯೮೮–೮೯ ರಲ್ಲಿ ೪೭ ಕೋಟಿಯಷ್ಟು ಗ್ರಾಂಟ್ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಇರುವಂಥ ರಸ್ತೆಗಳನ್ನು ನಿರ್ವಹಣೆ ಮಾಡುವುದಕ್ಕೆ ೧೩೦ ಕೋಟಿ ಬೇಕಾಗುತ್ತದೆ. ಈ ಹಣದಲ್ಲಿ ಸಾಧ್ಯವಾದಷ್ಟು ಮಾಡುತ್ತಾ ಬಂದಿದ್ದೇವೆ, ಆ ಕೆಲಸಗಳನ್ನು ಮುಂದು ವರಿಸುತ್ತೇವೆ. ಇನ್ನು ಮಾನ್ಯ ಚಿನ್ನಪ್ಪನವರು ಆರ್. ಎಲ್. ಇ. ಜಿ. ಪಿ. ರಸ್ತೆಗಳ ಬಗ್ಗೆ ಹೇಳಿದ್ದಾರೆ. ೧೯೮೩–೮೪ ರಲ್ಲಿ ೨೦೦ ಲಕ್ಷ ಗ್ರಾಂಟ್ ಆಗಿದ್ದು ಎಕ್ಸ್‌ಪೆಂಡಿಚರ್ ೪೦.೨೭ ಲಕ್ಷ ಆಗಿದೆ. ೧೯೮೪–೮೫ ರಲ್ಲಿ ೮೦೦ ಲಕ್ಷ ಗ್ರಾಂಟ್ ಆಗಿದ್ದು ಎಕ್ಸ್‌ಪೆಂಡಿಚರ್ ೮೮೨ ಲಕ್ಷವಾಗಿದೆ. ೧೯೮೫–೮೬ ರಲ್ಲಿ ೮೦೦ ಲಕ್ಷ ಗ್ರಾಂಟ್ ಆಗಿದ್ದು ವೆಚ್ಚ ೭೦೧.೯೨ ಲಕ್ಷ ಆಗಿದೆ. ೧೯೮೬–೮೭ ರಲ್ಲಿ ೨೦೦ ಲಕ್ಷ ಗ್ರಾಂಟ್ ಆಗಿದ್ದು ೨೪೪ ಲಕ್ಷದಷ್ಟು ವೆಚ್ಚವಾಗಿದೆ.

೫–೦೦ ಪಿ. ಎಂ.

ಮೈಸೂರು–ಮಂಗಳೂರಿನ ನಡುವೆ ನ್ಯಾಷನಲ್ ಹೈವೇ ಮಾಡುವ ಪ್ರಸ್ತಾವನೆ ಅನೇಕ ವರ್ಷಗಳಿಂದ ಕೇಂದ್ರ ಸರ್ಕಾರದ ಮಟ್ಟದಲ್ಲಿದೆ. ಅದರ ಬಗ್ಗೆ ಪ್ರಯತ್ನ ನಡೆಯುತ್ತಿದೆ. ಮಾನ್ಯ ರಾಣಿಯವರು ಕಾರವಾರ ವಿಭಾಗವನ್ನು ರಾಷ್ಟ್ರೀಯ ಹೆದ್ದಾರಿಯ ಕಾರ್ಯ ವಿಭಾಗವನ್ನು ಮುಚ್ಚುತ್ತೀರೆಂದು ಹೇಳಿದ್ದಾರೆ. ಸದ್ಯದಲ್ಲಿ ಆ ಪ್ರಸ್ತಾವನೆಯು ಇಲ್ಲವೆಂದು ಹೇಳಬಹುದು, ಹೆಗರಿ ಸೇತುವೆಯನ್ನು ಕಟ್ಟಲು ೨೨೨.೫ ಲಕ್ಷ ರೂಪಾಯಿಗಳ ಅಂದಾಜು ಇದೆ. ಅದಕ್ಕೆ ಟೆಂಡರನ್ನು ಕರೆದಿದ್ದಾರೆ, ಈಗಾಗಲೇ ಟೆಂಡರನ್ನು ಕರೆದು ಅನುಭವವುಳ್ಳ ಕಂಟ್ರಾಕ್ಟುದಾರರಿಗೆ ವಹಿಸಲಾಗಿದೆ. ಈ ಕೆಲಸವನ್ನು ಮೂರು ವರ್ಷಗಳಲ್ಲಿ ಮುಗಿಸಲಾಗುವುದು. ಹೆಗರಿ ಸೇತುವೆಯನ್ನು ನ್ಯಾಷನಲ್ ಹೈವೇ ಜೋನ್‌ನವರು ಮಾಡುತ್ತಿದ್ದಾರೆಂದು ಮಾಹಿತಿ ಕೊಟ್ಟಿದ್ದಾರೆ. ಇಷ್ಟು ವಿಚಾರವನ್ನು ಬೇಡಿಕೆಯ ಮೇಲೆ ಹೇಳಿದ್ದೇನೆ. ಮಾನ್ಯ ಸದಸ್ಯರು ಈ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಗುಲ್ಬರ್ಗದಲ್ಲಿರುವ ಡಿಸ್ಟ್ರಿಕ್ಟ್ ಆಫೀಸ್ ಕಾಂಪ್ಲೆಕ್ಸ್ ಅಂದರೆ ಮಿನಿ ವಿಧಾನಸೌಧ ಕೆಲಸವನ್ನು ಮಾಡಲು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ವಹಿಸಿಕೊಟ್ಟಿದೆ. ಸುಮಾರು ನಾಲ್ಕು ಕೋಟಿ ರೂಪಾಯಿಯ ಈ ಕೆಲಸವನ್ನು ಎರಡು ವರ್ಷದಲ್ಲಿ ಮುಗಿಸಬೇಕೆಂದು ತಿಳಿಸಲಾಗಿದೆ. ಆದರೆ ಅದು ಬಹಳ ನಿಧಾನಗತಿಯಿಂದ ನಡೆಯುತ್ತಿದೆ. ಇದನ್ನು ಯಾವಾಗ ಮುಗಿಸುತ್ತೀರೆಂದು ತಾವು ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತೇನೆ. ಇದೇ ರೀತಿಯಲ್ಲಿ ಟ್ರಜರಿ ಆಫೀಸ್ ಕಟ್ಟಡದ ಕೆಲಸ ಗುರುಮಿಠ್‌ಕಲ್‌ನಲ್ಲಿ ನಡೆಯುತ್ತಿದ್ದು ಈಗ ನಿಂತು ಹೋಗಿದೆ, ಮತ್ತು ನಾಲ್ಕು ಬ್ರಿಡ್ಜ್‌ಗಳ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಹಾಕಿದಾಗ ತಾವೇ ಉತ್ತರವನ್ನು ಕೊಟ್ಟಿರಿ. ಆ ನಾಲ್ಕು ಬ್ರಿಡ್ಜ್‌ನ್ನು ತಾವು ವಾಗ್ದಾನ ಮಾಡಿದ ಪ್ರಕಾರ ನ್ಯಾಷನಲ್ ಹೈವೇ ಮಾಡುವಂತಹ ಒಂದು ಬೇಡಿಕೆ, ಇಡೀ ಹೈದರಾಬಾದ್ ಕರ್ನಾಟಕದ್ದು ಇದೆ. ಬಳ್ಳಾರಿ ಜಿಲ್ಲೆ ಸೇರಿದಂತೆ ಇದರ ಬಗ್ಗೆ ಒತ್ತಾಯ ಇದೆ. ಹಿರಿಯೂರಿನವರೆಗೆ ಮಾಡಬೇಕೆಂದು ಕೇಳಿದ್ದೇವೆ. ನಾವು ಬೆಂಗಳೂರನ್ನು ಮುಟ್ಟಬೇಕಾದರೆ ಬೇರೆ ಯಾವ ರಸ್ತೆಗಳಿಲ್ಲದೇ ಇದೇ ಮಾರ್ಗವಾಗಿ ಬರಬೇಕು. ಅದನ್ನು ನ್ಯಾಷನಲ್ ಹೈವೇ ಕನ್‌ವರ್ಟ್ ಮಾಡಬೇಕೆಂಬ ಬೇಡಿಕೆ ಇತ್ತು, ನಾವು ಮಾಡುತ್ತೇವೆಂಬ ವಿಚಾರವನ್ನು ಕೂಡ ಮಾನ್ಯ ಮಂತ್ರಿಗಳು ಹಾಗೂ ಮಾನ್ಯ ದೇವೇಗೌಡರು ಗುಲ್ಬರ್ಗಕ್ಕೆ ಬಂದಾಗ ಹೇಳಿದರು. ಇದನ್ನು ಯಾವ ರೀತಿ ಪರಿವರ್ತನೆ ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಇದರ ಬಗ್ಗೆ ಮಾಹಿತಿ ಈಗ ನನ್ನಲ್ಲಿ ಇಲ್ಲ. ಅದನ್ನು ಒದಗಿಸಿ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿಕಾರಿಪುರ ತಾಲ್ಲೂಕಿನಲ್ಲಿ, ಶಿಕಾರಿಪುರದಿಂದ ಮಾಸೂರಿಗೆ ಹೋಗುವಂತಹ ಒಂದು ರಸ್ತೆ ಇದೆ. ಅದು ನಮ್ಮ ಅಧ್ಯಕ್ಷರ ತಾಲ್ಲೂಕಿಗೂ ಸಂಬಂಧವಿರುವ ರಸ್ತೆ. ಪೂರ್ತಿಯಾಗಿ ಟಾರ್ ರಸ್ತೆ ಇಲ್ಲದೆ ಇವತ್ತು ಗುಂಡಿಗಳು ಬಿದ್ದಿವೆ. ಕಳೆದ ಮೂರು ನಾಲ್ಕು ವರ್ಷಗಳಿಂದ ಮೇಂಟೇನ್ ಮಾಡದೆ ಪೂರ್ತಿಯಾಗಿ ಗುಂಡಿಗಳು ಬಿದ್ದು ಒಂದು ಗಾಡಿಯೂ ಸಹ ಓಡಾಡದೆ ಇರುವ ವಿಚಿತ್ರವಾದ ಸನ್ನಿವೇಶವಿದೆ. ಇದಕ್ಕೆ ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಅಧಿಕಾರಿಗಳ ಗಮನಕ್ಕೆ ತರುವಂತಹ ಒಂದು ಪ್ರಯತ್ನ ಮಾಡಿದೆ. ಶಿಕಾರಿಪುರದಿಂದ ಮಾಸೂರಿಗೆ ಹೋಗುವ ರಸ್ತೆಯು ಪೂರ್ಣ ಹಾಳಾಗಿರುವುದನ್ನು ತಕ್ಷಣ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಈ ಸಾಲಿನಲ್ಲಿ ಹಣವನ್ನು ತೆಗೆದಿಡುತ್ತೀರಾ ? ತಾವು ಅಧಿಕಾರಕ್ಕೆ ಬಂದಮೇಲೆ ಕಳೆದ ೫ ವರ್ಷದಿಂದ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಏನೇನು ಹೊಸ ಹೊಸ ಕೆಲಸಗಳನ್ನು ಪ್ರಾರಂಭ ಮಾಡಿದ್ದೀರಿ? ಇದು ಯಾವ ಹಂತಕ್ಕೆ ಬಂದು ಮುಟ್ಟಿದೆ. ಮತ್ತೆ ಅದು ಪ್ರಾರಂಭವಾಗಿ ಇವತ್ತು ಯಾವ ಸ್ಥಿತಿಗೆ ಬಂದಿದೆ. ನೀವು ಅಧಿಕಾರಕ್ಕೆ ಬರುವ ಮುಂಚೆ ಪ್ರಾರಂಭವಾದ ಕೆಲಸ ಈಗ ಎಲ್ಲಿಯವರೆಗೆ ಬಂದಿದೆ. ಇದರ ಬಗ್ಗೆ ಒಂದು ವೈಟ್ ಪೇಪರ್ ಹೊರಡಿಸಿ ನಮಗೆ ಒಂದು ಸ್ಪಷ್ಟವಾದ ಚಿತ್ರವನ್ನು ನಮ್ಮ ಎಲ್ಲಾ ಶಾಸಕರಿಗೂ ಸನ್ಮಾನ್ಯ ಮಂತ್ರಿಗಳು ಕೊಡುವುದಕ್ಕೆ ಸಾಧ್ಯವೋ ?

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ನ್ಯಾಷನಲ್ ಹೈವೇ ೪ ಏನಿದೆ ಇದು ಬೆಂಗಳೂರಿನಿಂದ ಪೂನಾವರೆಗೆ ಹೋಗತಕ್ಕಂಥ ರಸ್ತೆ. ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ರಸ್ತೆಗಳ ರಿಪೇರಿ ಕೆಲಸ ಆಗಿದೆ ಮತ್ತು ಆಗುತ್ತಿದೆ. ಆದರೆ ದಾವಣಗೆರೆಯಿಂದ ಹರಿಹರದವರೆಗೆ ಇರತಕ್ಕ ರಸ್ತೆ ತುಂಬಾ ಕೆಟ್ಟು ಹೋಗಿದೆ. ವಾಹನಗಳು ಓಡಾಡುವುದಕ್ಕೂ ಸಾಧ್ಯವಿಲ್ಲ. ಆ ರಸ್ತೆಯನ್ನು ನ್ಯಾಷನಲ್ ಹೈವೇ ಎಂದು ಯಾರೂ ಕೂಡ ಹೇಳುವುದಕ್ಕಾಗುವುದಿಲ್ಲ. ಅಂಥ ಒಂದು ಕೀಳುಮಟ್ಟದಲ್ಲಿ ಆ ರಸ್ತೆ ಇದೆ. ಆದ್ದರಿಂದ ಆದಷ್ಟು ಬೇಗ ಈ ರಸ್ತೆಯನ್ನು ರಿಪೇರಿ ಮಾಡಿಸುವುದಕ್ಕೆ ಆದೇಶ ಕೊಡುತ್ತೀರಾ?

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಪಿ.ಡಬ್ಲ್ಯು.ಡಿ. ರೋಡ್ ಮೇನ್‌ಟೆನೆನ್ಸ್‌ಗೋಸ್ಕರ ಮೊದಲಿನಿಂದಲೂ ಏನಾ ಸ್ಕೇಲ್ ಇಟ್ಟಿದ್ದೀರಿ ಅದನ್ನು ಕೊಡುತ್ತೀರೋ. ಅಥವಾ ಇಲ್ಲವೋ ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿರತಕ್ಕ ಶಿಕಾರಿಪುರ ಮತ್ತು ಮಾಸೂರಿನ ರಸ್ತೆಯ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಪಂಪಾಪತಿಯವರು ದಾವಣಗೆರೆಯಿಂದ ಹರಿಹರದವರೆಗಿನ ನ್ಯಾಷನಲ್ ಹೈವೇ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಅಂದರೆ ಈ ರಸ್ತೆಯನ್ನು ದುರಸ್ತಿ ಮಾಡಿಸಲು ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಏನು ಹೇಳಿದ್ದಾರೆ ಅವರ ಬಗ್ಗೆ ಹೇಳುವುದಾದರೆ ಈ ಕೆಲಸ ಪ್ರಾರಂಭ ಮಾಡಿದರೆ ಆಗ ಅಲ್ಲಿ ಹೆವಿ ವೆಹಿಕಲ್ಸ್‌ನ ಓಡಾಟ ಕಡಿಮೆಯಾಗುತ್ತದೆ. ಈಗ ಸದ್ಯದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ದುರಸ್ತಿ ಮಾಡಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಇದನ್ನು ನ್ಯಾಷನಲ್ ಹೈವೇ ಎಂದು ಪರಿಗಣಿಸಿದ್ದೇವೆ ಅಲ್ಲವೇ ?

ಶ್ರೀ ಎಂ. ಚಂದ್ರಶೇಖರ್.—ನ್ಯಾಷನಲ್ ಹೈವೇ ದುರಸ್ತಿಗೆ ಕೇಂದ್ರ ಸರ್ಕಾರದ ಸಹಾಯವೂ ಬರಬೇಕಾಗುತ್ತದೆ ಅದಿಲ್ಲದೆ ಕೇವಲ ರಾಜ್ಯ ಸರ್ಕಾರದ ವತಿಯಿಂದಲೇ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ. ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ನಾನು ಕೇವಲ ಮೂರು ಕ್ಲಾರಿಫಿಕೇಷನ್‌ಗಳನ್ನು ಮಾತ್ರ ಕೇಳುತ್ತೇನೆ. ಮೊದಲನೆಯದಾಗಿ, ನಮ್ಮ ಬಿಜಾಪುರದ ಸೂಪರ್ ಮಾರ್ಕೆಟ್‌ಗೆ ಮಾನ್ಯ ಮುಖ್ಯ ಮಂತ್ರಿಗಳು ೧೯೮೩ ರಲ್ಲಿ ಅಡಿಗಲ್ಲನ್ನು ಹಾಕಿದ್ದಾರೆ. ಆದರೆ ಅದು ಒಂದು ವಿವಾದದ ಸುಳಿಗೆ ಸಿಕ್ಕಿದ್ದು ಈಗ್ಗೆ ೩ ತಿಂಗಳ ಹಿಂದೆ ಅಲ್ಲಿ ಕೆಲಸ ಪ್ರಾರಂಭವಾಗಿದೆ ಆ ಕೆಲಸವನ್ನು ತೀವ್ರವಾಗಿ ಮುಗಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ?

ಇನ್ನು ಎರಡನೆಯದಾಗಿ, ನನ್ನ ಕ್ಷೇತ್ರದ ಹೋಬಳಿ ಮತ್ತು ಅನಗಟ್ಟಿಯ ಹತ್ತಿರ ನಾಲೆಗೆ, ಒಂದು ಸೇತುವೆಯನ್ನು ಕಟ್ಟಬೇಕೆಂದು ೧೯೮೭ರ ಅಕ್ಟೋಬರ್ ೧೬ನೇ ತಾರೀಖು ಮಾನ್ಯ ಲೋಕೋಪಯೋಗಿ ಖಾತೆಯ ಮಂತ್ರಿಗಳು ಅಡಿಗಲ್ಲನ್ನು ಹಾಕಿದ್ದಾರೆ. ಆದರೆ ಆ ಕೆಲಸ ಇನ್ನೂ ಪ್ರಾರಂಭವೇ

ಆಗಿಲ್ಲ. ಹಿಂದೆ ನಾನು ಕೇಳಿದಾಗ ಇದು ಟೆಂಡರ್ ಕರೆಯುತಕ್ಕ ಮಟ್ಟಕ್ಕೆ ಬಂದಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ ಇನ್ನೂ ಆ ಕೆಲಸವಾತ್ರ ಪ್ರಾರಂಭ ಆಗಿಲ್ಲ, ಆದ್ದರಿಂದ ಆ ಕೆಲಸ ವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಇನ್ನು ಮೂರನೆಯದಾಗಿ ಲೋಕೋಪಯೋಗಿ ಇಲಾಖೆಗೆ ಬರತಕ್ಕ ರಸ್ತೆಗಳನ್ನು ರಿಪೇರಿ ಮಾಡ ಬೇಕಾದರೆ ಡಾಂಬರ್ ಬೇಕು. ಆದರೆ ನಮ್ಮ ಜಿಲ್ಲೆಯಲ್ಲಿ ಒಂದು ಕಿಲೋಮೀಟರಿನಷ್ಟು ರಸ್ತೆಯನ್ನು ಪಾಚ್ ಹಾಕುವುದಕ್ಕೂ ಕೂಡ ಡಾಂಬರ್ ಇಲ್ಲ. ಈರೀತಿ ಡಾಂಬರ್ ಸ್ಕೇರ್ಸಿಟಿ ಆಗುವುದಕ್ಕೆ ಕಾರಣ ಏನು ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಸದ್ಯದಲ್ಲಿ ನನ್ನ ಹತ್ತಿರ ಉತ್ತರಗಳು ಇಲ್ಲ. ಅವುಗಳಿಗೆ ಉತ್ತರವನ್ನು ತರಿಸಿ ಅವರಿಗೆ ಒದಗಿಸಿ ಕೊಡು ತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಫ್ರೇಜರ್ ಟೌನ್ ಮತ್ತು ಅಲಸೂರು ಟೌನ್‌ನ ಪೋಲೀಸ್ ಕ್ವಾರ್ಟರ್ಸ್‌ಗೆ ನೀರು ಮತ್ತು ವಿದ್ಯುಚ್ಛಕ್ತಿಯನ್ನು ಕೊಡುವ ಬಗ್ಗೆ ನಾನು ಪ್ರಸ್ತಾಪ ಮಾಡಿ ದ್ದೇನೆ. ಆದರೆ ಮಾನ್ಯ ಮಂತ್ರಿಗಳಿಂದ ಉತ್ತರವೇ ಬರಲಿಲ್ಲ.

ಇನ್ನು ಎರಡನೆಯದಾಗಿ, ಬೆಂಗಳೂರಿನಲ್ಲಿದ್ದ ಸರ್ಕಾರೀ ಶಾಲೆಗಳನ್ನು ಜಿಲ್ಲಾಪರಿಷತ್ತಿಗೆ ವರ್ಗಾಯಿ ಸಿದ್ದಾರೆ. ಆದರೆ ಯಾವ ಜಿಲ್ಲಾ ಪರಿಷತ್ತಿನಿಂದ ಇವರು ಕೆಲಸ ಮಾಡಿಸುತ್ತಾರೆ ? ಎಂಬುದನ್ನು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್ —ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಹಿಂದೆ ಯಾವ ಯಾವ ಗ್ರಾಮಗಳಲ್ಲಿ ಈ ಸರ್ಕಾರೀ ಶಾಲೆಗಳು ನಡೆಯುತ್ತಿದ್ದುವು ಅವುಗಳನ್ನು ಜಿಲ್ಲಾ ಪರಿಷ ತ್ತಿಗೆ ವರ್ಗಾಯಿಸಬೇಕು ಮತ್ತು ಸಿಟಿ ಲಿಮಿಟ್‌ನಲ್ಲಿರತಕ್ಕ ಶಾಲೆಗಳ ಕೆಲಸವನ್ನು ಕಾರ್ಪೊರೇಷನ್ ವತಿಯಿಂದ ಮಾಡಿಸಬೇಕೆಂದು ನಾವು ಮಾಡಿದ್ದೇವೆ. ಯಾವುದೇ ಸರ್ಕಾರಿ ಶಾಲೆಗಳು ಸಿಟಿ ಲಿಮಿಟ್‌ನಲ್ಲಿ ಇವೆಯೋ......

ಶ್ರೀ ಕೆ. ಜೆ. ಜಾರ್ಜ್.—ಮೊದಲು ಪಿ. ಡಬ್ಲ್ಯು. ಡಿ. ಡಿಪಾರ್ಟ್‌ಮೆಂಟ್‌ನವರು ರಿಪೇರಿ ಮಾಡು ತ್ತಿದ್ದರು. ಈಗ ಮೊನ್ನೆ ಅದಕ್ಕೆ ಸಂಬಂಧಪಟ್ಟ ಫೈಲುಗಳನ್ನೆಲ್ಲಾ ಜಿಲ್ಲಾಪರಿಷತ್ತಿಗೆ ಕಳುಹಿಸಿಬಿಟ್ಟಿ ದ್ದಾರೆ. ಬೆಂಗಳೂರು ಸಿಟಿ ಮಧ್ಯದಲ್ಲಿರುವಂತಹ ಶಾಲೆ. ಆದರಲ್ಲಿ ತಾಲ್ಲೂಕು ಬೋರ್ಡ್ ವಿಚಾರ ಬರುವುದೇ ಇಲ್ಲ.

ಶ್ರೀ ಎಂ ಚಂದ್ರಶೇಖರ್.—ಅಲ್ಲಿಗೆ ಹೋಗುವ ಮಕ್ಕಳು ಯಾರ್ಯಾರು ಇದ್ದಾರೆ, ಅವರು ನಗರಪಾಲಿಕೆಯ ಮಕ್ಕಳು ಆಗುವುದರಿಂದ. ಇದರಲ್ಲಿ ನಮ್ಮ ಜವಾಬ್ದಾರಿಯೂ ಇದೆ. ನಗರ ಪಾಲಿ ಕೆಯ ವತಿಯಿಂದಲೇ ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.—ಬೇಲೂರು ಪಟ್ಟಣಕ್ಕೆ ನೀರು ಪೂರೈಕೆಗಾಗಿ ಸರ್ಕಾರಕ್ಕೆ ೧೨ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರಿಸಿ ಕಳುಹಿಸಲಾಗಿದೆ. ಅದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಹಿರಿಯೂರು, ಬಳ್ಳಾರಿ, ಸಿರಗುಪ್ಪ ಹಾಗೂ ಗುಲ್ಬರ್ಗ ಈ ಊರು ಗಳ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಪೋಸಲನ್ನು ಕಳುಹಿಸಲಾಗಿದೆ. ಮತ್ತೆ, ಮಾನ್ಯ ಸದಸ್ಯರೊಬ್ಬರು ಮಾರುಕಟ್ಟೆಯ ವಿಚಾರವಾಗಿ ಹೇಳಿದರು. ಅದರ ಬಗ್ಗೆ ಮಾಹಿತಿ ನನ್ನಲ್ಲಿ ಈಗ ಇಲ್ಲ. ನಂತರ ವಿವರಗಳನ್ನು ಒದಗಿಸಿಕೊಡುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಲೋಕೋಪಯೋಗಿ ಇಲಾಖೆಯ ಮೇಲಿನ ಚರ್ಚೆ ಮುಕ್ತಾಯವಾಯಿತು. ಬೇಡಿಕೆ ನಂ. ೩೨,೩೩ ಹಾಗೂ ೪೪ಕ್ಕೆ ಗುರುವಾರ ಬೆಳಗ್ಗೆ ಉತ್ತರ ನೀಡುತ್ತಾರೆ. ನಾನು ಪ್ರಸ್ತಾಪ ವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾಪವೇನೆಂದರೆ.—

> ''೩೧-೩-೧೯೬೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೪೫, ೪೬ ಹಾಗು ೪೭ ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾಗಿ ಬರುವ ವೆಚ್ಚವನ್ನು ವಹಿ ಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು''.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಅಧ್ಯಕ್ಷರು ಅನುಮತಿ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ,

೩ ಲೋಕೋಪಯೋಗಿ ಕಾಮಗಾರಿ (ನಿರ್ಮಾಣರಹಿತ) ಬೇಡಿಕೆ ನಂ. ೪೫

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೬,೭೫,೮೮,೦೦೦ ರೂ, ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೩೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.''

೪ ಕಟ್ಟಡಗಳು— ಬೇಡಿಕೆ ನಂ. ೪೬

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೦,೨೭,೦೦೦ ರೂ, ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೯ ೩೭,೫೫.೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬಹುದು.

೫ ರಸ್ತೆಗಳು ಮತ್ತು ಸೇತುವೆಗಳು—ಬೇಡಿಕೆ ನಂ. ೪೭

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೩,೩೦,೫೦,೦೦೦ ರೂ, ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೧,೯೨,೨೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರುಮಾಡುವುದು,

ಅಧ್ಯಕ್ಷರು.—ಸಭೆಯು ಈಗ ಎದ್ದು ಗುರುವಾರ ಬೆಳಗ್ಗೆ ೧೧-೦೦ ಗಂಟೆಗೆ ಪುನಃ ಸಮಾವೇಶಗೊಳ್ಳುವುದು.

(ಸದನವು ೫-೧೭ಕ್ಕೆ ಮೇಲೆದ್ದು ಮತ್ತೆ ೧೯-೫-೮೮ ನೇ ಗುರುವಾರ ಬೆಳಿಗ್ಗೆ ೧೧-೦೦ ಘಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)